ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 11 ಶನಿವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 205 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com



ಶ್ರೀ ಮಲೈ ಮಹದೇಶ್ವರ ಪೂಜಾ ಮಹೋತ್ಸವ, ಕೊಂಡೋತ್ಸವ



ಮೈಸೂರು, ನ. 10– ಮೈಸೂರಿನ ಜಯನಗರದ ಶ್ರೀ ಮಲೈ ಮಹದೇಶ್ವರ ಸೇವಾ ಸಮಿತಿ ವತಿಯಿಂದ ನ.13ರಂದು ಸಂಜೆ 8ಕ್ಕೆ ಶ್ರೀ ಮಲೈ ಮಹದೇಶ್ವರ ಪೂಜಾ ಮಹೋತ್ಸವ, ಕೊಂಡೋತ್ಸವ ನಡೆಯಲಿದೆ. ಅಂದು ಮಧ್ಯಾಹ್ನ 12.30ಕ್ಕೆ ಅನ್ನಸಂತರ್ಪಣೆ ನಡೆಯಲಿದೆ.

ಪಶು ಆಹಾರ ತಯಾರಿಕೆಗೆ ಬೆಂಬಲ ಬೆಲೆಯಡಿ ಒಂದು ಲಕ್ಷ ಮೆಟ್ರಿಕ್ ಟನ್ ಮೆಕ್ಕೆಜೋಳ ಖರೀದಿ

ಬೆಂಗಳೂರು, ನ.10(ಕೆಎಂಶಿ)–ಪಶು ಆಹಾರ ತಯಾರಿಕೆಗೆ ಒಂದು ಲಕ್ಷ ಮೆಟ್ರಿಕ್ ಟನ್ ಮೆಕ್ಕೆಜೋಳವನ್ನು ಬೆಂಬಲ ಬೆಲೆ ನೀಡಿ ರೈತರಿಂದಲೇ ಖರೀದಿಸಲು ಸರ್ಕಾರ ತೀರ್ಮಾನಿಸಿದೆ. ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್, ಕರ್ನಾಟಕ ಹಾಲು ಮಹಾಮಂಡಳಿ ವತಿಯಿಂದ ಆಹಾರ ಘಟಕಗಳ ಮೂಲಕ ಪಶು ಆಹಾರ ತಯಾರಿಕೆಗಾಗಿ ಈ ಪ್ರಮಾಣದ ಜೋಳವನ್ನು ಖರೀದಿಸಲಾಗುವುದು ಎಂದರು.

ರೈತರಿಂದ ನೇರವಾಗಿ ಬೆಂಬಲ ಬೆಲೆ, ಮೂಲ ದರಕ್ಕೆ ಪ್ರತಿ ಕ್ವಿಂಟಾಲ್‌ಗೆ 160 ರೂ. ಉತ್ತೇಜನ ದರ ನೀಡಿ 2,250ರಂತೆ ಖರೀದಿಸಲಾಗುವುದು ಎಂದು ತಿಳಿಸಿದರು.

ಸರ್ಕಾರದ ಈ ನಿರ್ಧಾರದಿಂದ ರೈತರು ಬೆಳೆದ ಮೆಕ್ಕೆಜೋಳವನ್ನು ಕೆಎಂಎಫ್ ನೇರವಾಗಿ ಖರೀದಿಸುವುದರಿಂದ ಕೃಷಿಕನಿಗೆ ಹೆಚ್ಚಿನ ಬೆಲೆ ದೊರೆತಂತಾಗುತ್ತದೆ. ಜೋಳ ಕೊಡಲು ಮುಂದಾಗುವ ರೈತರು ತಮ್ಮ ಹತ್ತಿರದಲ್ಲಿರುವ ಪಶು ಆಹಾರ ಉತ್ಪಾದನಾ ಘಟಕಗಳ ಸಂಸ್ಥೆಗಳಲ್ಲಿ ನೋಂದಣಿ ಮಾಡಿಕೊಳ್ಳಬೇಕು.

ಡಾ.ಅವರೆಕಾಡು ವಿಜಯಕುಮಾರ್‌ಗೆ ರಾಜ್ಯೋತ್ಸವ ಪ್ರಶಸ್ತಿ



ಮೈಸೂರು, ನ. 10– ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಭಾಷಾಂತರಕಾರರು ಹಾಗೂ ಸಂಯೋಜನಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ಡಾ.ಅವರೆಕಾಡು ವಿಜಯ ಕುಮಾರ್ ಅವರಿಗೆ ಹಾಸನ ಜಿಲ್ಲಾಡಳಿತದ ವತಿಯಿಂದ ಪ್ರಸ್ತುತ 2023ನೇ "ಕನ್ನಡ ರಾಜ್ಯೋತ್ಸವ ಪುರಸ್ಕಾರ" ನೀಡಿ ಗೌರವಿಸಲಾಯಿತು. ಅಲ್ಲದೇ ಹಾಸನ ಜಿಲ್ಲೆಯ ಸಕಲೇಶಪುರದ ತಾಲೂಕಿನವರಾದ ಇವರಿಗೆ ಸಕಲೇಶಪುರ ತಾಲೂಕು ಆಡಳಿತವು ಸಹ ಇವರ ಕನ್ನಡ ಸೇವೆ, ಸಾಹಿತ್ಯ, ಸಂಶೋಧನಾ ಕ್ಷೇತ್ರದ ಕೊಡುಗೆಗಳನ್ನು ಆಧರಿಸಿ 2023ನೇ ಸಾಲಿನ "ಸುವರ್ಣ ಕರ್ನಾಟಕ ಕನ್ನಡ ರಾಜ್ಯೋತ್ಸವ ಪ್ರಶಸ್ತಿ" ನೀಡಿ ಗೌರವಿಸಿದೆ. ಇವರು ಮೈಸೂರು ನಗರದ ಬೋಗಾದಿಯಲ್ಲಿ ವಾಸವಾಗಿದ್ದಾರೆ.

ಇಂದಿನಿಂದ 14ರವರೆಗೆ ನಿಶಬ್ಧ ವಲಯಗಳಲ್ಲಿ ಪಟಾಕಿ ನಿಷೇಧ

ಮೈಸೂರು, ನ. 10–ಮೈಸೂರು ನಗರ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಹಿರಿಯ ನಾಗರೀಕರು, ಅಸಹಾಯಕರು, ಅಸ್ವಸ್ಥರು ಹಾಗೂ ಪ್ರಾಣಿ–ಪಕ್ಷಿಗಳ ಆರೋಗ್ಯ ಮತ್ತು ರಕ್ಷಣೆಯ ಹಿತದೃಷ್ಟಿಯಿಂದ ಮೈಸೂರು ನಗರ ಕಮೀಷನರೇಟ್ ವ್ಯಾಪ್ತಿಯಲ್ಲಿ ಕೆಲವು ಪ್ರದೇಶಗಳನ್ನು ದೀಪಾವಳಿ ಹಬ್ಬದ ಅಂಗವಾಗಿ ನಿಶಬ್ಧ ವಲಯಗಳನ್ನಾಗಿ ಘೋಷಿಸಲಾಗಿದ್ದು, ಅದರಂತೆ ಶ್ರೀ ಚಾಮರಾಜೇಂದ್ರ ಮೃಗಾಲಯ, ಕುಕ್ಕರಹಳ್ಳಿ ಕೆರೆ ಪ್ರದೇಶ, ಕಾರಂಜಿ ಕೆರೆ ಪ್ರದೇಶ, ಲಿಂಗಾಬುದಿಕೆರೆ ಪ್ರದೇಶ, ಸಾರ್ವಜನಿಕ ಉದ್ಯಾನವನಗಳು, ಆಸ್ಪತ್ರೆ ಹಾಗೂ ನರ್ಸಿಂಗ್ ಹೋಂಗಳು, ಶೈಕ್ಷಣಿಕ ಸಂಸ್ಥೆಗಳು, ನ್ಯಾಯಾಲಯ, ಧಾರ್ಮಿಕ ಸ್ಥಳಗಳ 100 ಮೀಟರ್ ಸುತ್ತಳತೆ ಪ್ರದೇಶವನ್ನು ನವೆಂಬರ್ 11ರ ಬೆಳಿಗ್ಗೆ 6 ಗಂಟೆಯಿಂದ ನವೆಂಬರ್ 14 ರ ಮಧ್ಯರಾತ್ರಿ 12 ಗಂಟೆಯವರೆಗೆ ಯಾವುದೇ ರೀತಿಯ ಪಟಾಕಿ ಸಿಡಿಸುವುದನ್ನು ನಿಷೇದಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತರಾದ ಬಿ.ರಮೇಶ್ ಆದೇಶ ಹೊರಡಿಸಿದ್ದಾರೆ.

ಪಟಾಕಿ ಮಾರಾಟ ಮಳಿಗೆಗಳಲ್ಲಿ 18 ವರ್ಷದೊಳಗಿನ ಮಕ್ಕಳನ್ನು ಕೆಲಸಕ್ಕೆ ಬಳಸಿಕೊಳ್ಳುವಂತಿಲ್ಲ

ಮೈಸೂರು, ನ. 10– ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಮಕ್ಕಳ ದುಡಿಮೆಯನ್ನು ನಿಯಂತ್ರಿಸಲು ಹಾಗೂ ನಿಷೇಧಿಸಲು ಬಾಲ್ಯಾವಸ್ಥೆ ಹಾಗೂ ಕಿಶೋರಾವಸ್ಥೆ ಕಾರ್ಮಿಕ (ನಿಷೇಧ ಹಾಗೂ ನಿಯಂತ್ರಣ) ಕಾಯ್ದೆ 1986 ತಿದ್ದುಪಡಿ 2016ರ ಅನ್ವಯ ಎಲ್ಲಾ ಉದ್ಯೋಗ ಮತ್ತು ಪ್ರಕ್ರಿಯೆಗಳಲ್ಲಿ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ. 14ರಿಂದ 18 ವರ್ಷದೊಳಗಿನ ಮಕ್ಕಳನ್ನು ಅಪಾಯಕಾರಿ ಉದ್ದಿಮೆಗಳಲ್ಲಿ ಕೆಲಸಕ್ಕೆ ನಿಯೋಜಿಸಿಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ.

ಮೈಸೂರು ಜಿಲ್ಲೆ ಮತ್ತು ತಾಲೂಕು ಕೇಂದ್ರಗಳಲ್ಲಿ ದೀಪಾವಳಿ ಪ್ರಯುಕ್ತ ಪಟಾಕಿ ಮಾರಾಟ ಮಳಿಗೆಗಳನ್ನು ಸ್ಥಾಪಿಸಲಾಗುತ್ತಿದ್ದು, ಪಟಾಕಿ ತಯಾರಿಕೆ, ಮಾರಾಟ ಹಾಗೂ ಇತರೆ ಪ್ರಕ್ರಿಯೆಗಳು ಅಪಾಯಕಾರಿ ಉದ್ದಿಮೆಗಳ ವ್ಯಾಪ್ತಿಗೆ ಬರುವುದರಿಂದ ಸದರಿ ಅಂಗಡಿಗಳಲ್ಲಿ ಯಾವುದೇ ಕಾರಣಕ್ಕೂ 18 ವರ್ಷದ ಒಳಗಿನ ಮಕ್ಕಳನ್ನು ಕೆಲಸಕ್ಕೆ ಬಳಸಿಕೊಳ್ಳಬಾರದು. ತಪ್ಪಿದ್ದಲ್ಲಿ ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಹಾಗೂ ನಿಯಂತ್ರಣ ಕಾಯ್ದೆ) ಅನ್ವಯ ಕಾನೂನು ಕ್ರಮ ಜರುಗಿಸಲಾಗುವುದು.

ಮೈಸೂರು ಜಿಲ್ಲೆ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ದೀಪಾವಳಿ ಪ್ರಯುಕ್ತ ಸ್ಥಾಪಿಸಲಾಗುತ್ತಿರುವ ಪಟಾಕಿ ಮಾರಾಟ ಮಳಿಗೆಗಳಲ್ಲಿ 18 ವರ್ಷದೊಳಗಿನ ಮಕ್ಕಳನ್ನು ಕೆಲಸಕ್ಕೆ ಬಳಸಿಕೊಳ್ಳದಂತೆ ಕಾರ್ಮಿಕ ಇಲಾಖೆಯ ಸಹಾಯಕ ಕಾರ್ಮಿಕ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಟೋರಾಜ ಶಂಕರ್‌ನಾಗ್ ಹುಟ್ಟುಹಬ್ಬದ ಅಂಗವಾಗಿ ಹಿರಿಯ ಆಟೋ ಚಾಲಕರಿಗೆ ಸನ್ಮಾನ



ಮೈಸೂರು, ನ. 10– ಮೈಸೂರಿನ ಜೀವಧಾರ ರಕ್ತ ನಿಧಿ ಕೇಂದ್ರದ ವತಿಯಿಂದ ನ್ಯೂ ಸಂಯ್ಯಾಜಿರಾವ್ ರಸ್ತೆಯಲ್ಲಿರುವ ಆಟೋ ನಿಲ್ದಾಣದಲ್ಲಿ 68ನೇ ಕನ್ನಡ ರಾಜ್ಯೋತ್ಸವ ಹಾಗೂ ಕರಾಟೆ ಕಿಂಗ್, ಆಟೋರಾಜ, ನಟ, ನಿರ್ದೇಶಕ ದಿವಂಗತ ಶಂಕರ್‌ನಾಗ್ ಜನ್ಮದಿನ ಅಂಗವಾಗಿ ಶಂಕರ್ ನಾಗ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಹಿರಿಯ ಆಟೋ ಚಾಲಕರಾದ ರವಿಕುಮಾರ್, ಶಿವಕುಮಾರ್, ವಿಜೇಂದ್ರ, ಅಹಮದ್ ಜಾನ್, ದುರ್ಗೇಶ್, ಮಲ್ಲಯ್ಯ ಅವರನ್ನು ಸನ್ಮಾನಿಸಲಾಯಿತು.

ಕನ್ನಡ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಶಂಕರ್ ನಾಗ್ ಕನ್ನಡ ಚಿತ್ರರಂಗದ ಅದ್ಭುತ ಪ್ರತಿಭಾವಂತ. ಅವರ ದೂರ ದೃಷ್ಟಿ, ತಂತ್ರಜ್ಞಾನ, ಕನ್ನಡ ಚಿತ್ರರಂಗ ಎಂದು ಮರೆಯಲಾಗದು. ಅಭಿವೃದ್ಧಿ ದೃಷ್ಟಿಕೋನ ಕನ್ನಡ ಚಿತ್ರರಂಗದ ಬೆಳವಣಿಗೆ ಕೊಡುಗೆ ಅಪಾರ, ಆಟೋ ರಿಕ್ಷಾ ಚಾಲಕರೇ ನಿಜವಾದ ಹೀರೋಗಳು. ಕನ್ನಡ ಸಿನಿಮಾಗಳ ಯಶಸ್ಸಿಗೆ ಆಟೋರಿಕ್ಷಾ ಚಾಲಕರ ಪಾತ್ರವೂ ಇದೆ, ರಿಕ್ಷಾ ಚಾಲಕರ ಸಮುದಾಯವನ್ನು ಎಲ್ಲೆಡೆ ಗೌರವಿಸಬೇಕು, ಅವರ ಮಕ್ಕಳಿಗೆ ಉತ್ತಮ ಶಿಕ್ಷಣ ದೊರಕಬೇಕು ಎಂದು ಹೇಳಿದರು. ಕೇಬಲ್ ವಿಜಿ, ಹೇಮಾ ಸಂತೋಷ್, ಬನ್ನೂರ್‌ಕುಮಾರ್, ಯೋಗೇಶ್, ಸದಾಶಿವ್, ಸೂರಜ್ ಚಂದ್ರು, ಅಶೋಕ್, ಉಮೇಶ್, ಮಧು, ಪುರುಷೋತ್ತಮ್, ಕಿರಣ್, ಮಮತಾ, ವಿಜಯ್ ಕುಮಾರ್, ಹಾಗೂ ಇನ್ನಿತರರು ಹಾಜರಿದ್ದರು.

ಪದವಿ ಪರೀಕ್ಷಾ ಉತ್ತರ ಪ್ರತಿಗಳ ಡಿಜಿಟಲ್ ಮೌಲ್ಯಮಾಪನ ಸದ್ಯಕ್ಕೆ ಅನಗತ್ಯ

ಮೈಸೂರು ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್ ಸಭೆ ನಿರ್ಣಯ



ಮೈಸೂರು, ನ.10(ಬಿಎಲ್‌ಯು)– ಮೈಸೂರು ವಿಶ್ವ ವಿದ್ಯಾನಿಲಯದ ವ್ಯಾಪ್ತಿಯ ಕಾಲೇಜುಗಳ ಪದವಿ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ವಿಕೇಂದ್ರಿಕರಿಸಿ ಡಿಜಿಟಲ್ ಮೌಲ್ಯಮಾಪನ ಮಾಡುವ ಯೋಜನೆಯನ್ನು ಸದ್ಯಕ್ಕೆ ಜಾರಿ ಮಾಡದಿರಲು ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್ ತೀರ್ಮಾನಿಸಿದೆ.

ಮೈಸೂರಿನ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಇಂದು ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಧ್ಯಕ್ಷತೆಯಲ್ಲಿ ನಡೆದ ಅಕಾಡೆಮಿಕ್ ಕೌನ್ಸಿಲ್ ಸಭೆಯಲ್ಲಿ ಈ ಸಂಬಂಧ ಸಾಧಕ ಬಾಧಕಗಳ ಬಗ್ಗೆ ಚರ್ಚೆಯಾಯಿತು. ವಿಷಯ ಮಂಡಿಸಿದ ಪರೀಕ್ಷಾಂಗ ಕುಲಸಚಿವ ಪ್ರೊ.ಕೆ.ಆರ್.ಮಹದೇವನ್, ಪ್ರಸ್ತುತ ಆಫ್ ಲೈನ್‌ನಲ್ಲಿ ಎರಡು ಸೆಷನ್‌ನಲ್ಲಿ ದಿನಕ್ಕೆ 32 ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಲಾಗುತ್ತಿದ'. ಅದೇ ಆನ್‌ಲೈನ್ ಇಲ್ಲವೇ ಡಿಜಿಟಲ್ ಮೂಲಕ 32ಕ್ಕಿಂತ ಹೆಚ್ಚು ಉತ್ತರ ಪತ್ರಿಕೆಗಳನ್ನು ಮೌಲ್ಯ ಮಾಪನ ಮಾಡಬಹುದು ಎಂದು ಅಭಿಪ್ರಾಯಪಟ್ಟರು.

ಈಗಾಗಲೇ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದವರು ಡಿಜಿಟಲ್ ಮೌಲ್ಯಮಾಪನ ಮಾಡುತ್ತಿದ್ದಾರೆ. ಇದರಿಂದ ಅವರಿಗೆ ವಾರ್ಷಿಕ 5 ಕೋಟಿ ರೂಪಾಯಿಗೂ ಹೆಚ್ಚು ಹಣ ಉಳಿತಾಯವಾಗುತ್ತಿದೆ. ಮೌಲ್ಯಮಾಪಕರ ಸಂಖ್ಯೆ ಕೂಡ ಕಡಿಮೆಯಾಗಿ, ಅವರಿಗೆ ನೀಡುವ ಟಿಎ, ಡಿಎ ಉಳಿಯುತ್ತದೆ ಎಂದು ಸಭೆಗೆ ವಿವರಿಸಿದರು.

ಡಿಜಿಟಲ್ ಮೌಲ್ಯಮಾಪನ ಅಳವಡಿಸಿಕೊಂಡರೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆ ತಪ್ಪುತ್ತದೆ. ಜೊತೆಗೆ ಶೀಘ್ರ ಫಲಿತಾಂಶ ಪ್ರಕಟಿಸಬಹುದು ಎಂದು ಪ್ರೊ.ಮಹದೇವನ್ ಸಭೆಗೆ ಮನವರಿಕೆ ಮಾಡಿಕೊಟ್ಟರು.

ಆದರೆ ಪ್ರೊ. ಆನಂದ್ ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದರು. ಡಿಜಿಟಲ್ ಮೌಲ್ಯಮಾಪನ ಮಾಡುವ ಯೋಜನೆ ಜಾರಿಗೊಳಿಸಲು ಕಳೆದ 15 ವರ್ಷಗಳಿಂದ ಚರ್ಚೆ ನಡೆಯುತ್ತಿದೆ. ಆದರೆ ಇದರಲ್ಲಿ ಕೆಲವು ಲೋಪದೋಷಗಳಿದ್ದು, ಫಲಿತಾಂಶ ನಿಖರವಾಗಿರುವುದಿಲ್ಲ. ಆದ ಕಾರಣ ತಜ್ಞರ ಸಮಿತಿ ರಚಿಸಿ, ಅದರ ವರದಿ ಆಧರಿಸಿ ಜಾರಿಗೊಳಿಸುವುದು ಒಳಿತು ಎಂದು ಅಭಿಪ್ರಾಯಪಟ್ಟರು. ಇಲ್ಲಿ ಹಣದ ಉಳಿತಾಯಕ್ಕಿಂತ ವಿದ್ಯಾರ್ಥಿಗಳ ಹಿತದೃಷ್ಟಿ ಮುಖ್ಯವಾಗಿರುತ್ತದೆ. 32ಕ್ಕಿಂತ ಹೆಚ್ಚು ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿದರೆ ಗೊಂದಲವಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಹಣವೇನು ಉಳಿತಾಯವಾಗುವುದಿಲ್ಲ ಎಂದು ಪ್ರೊ.ಶ್ರೀಧರ್ ಹೇಳಿದರು.

ಕುಲಪತಿ ಪ್ರೊ. ಲೋಕನಾಥ್ ಕೂಡ ಇದೇ ಅಭಿಪ್ರಾಯ ವ್ಯಕ್ತಪಡಿಸಿದರು. ಡಿಜಿಟಲ್ ಮೌಲ್ಯಮಾಪನದಿಂದ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚಿರುತ್ತದೆ. ಕಂಪ್ಯೂಟರ್, ಸರ್ವರ್ ಸೇರಿದಂತೆ ಇತರೆ ತಂತ್ರಜ್ಞಾನ ಅಳಡಿಕೆಗೆ ಹೆಚ್ಚಿನ ಬಂಡವಾಳ ಹೂಡಬೇಕಾಗುತ್ತದೆ ಎಂದು ತಿಳಿಸಿದರು. ಅಂತಿಮವಾಗಿ ಅಕಾಡೆಮಿಕ್ ಕೌನ್ಸಿಲ್ ಸಭೆಯು ಸದ್ಯಕ್ಕೆ ಡಿಜಿಟಲ್ ಮೌಲ್ಯಮಾಪನ ಅಳವಡಿಸದಿರಲು ತೀರ್ಮಾನಿಸಿತು. ವಿಶ್ವವಿದ್ಯಾನಿಲಯದ ಕುಲಪತಿ ನೇಮಕಾತಿ ವಿಚಾರ ನ್ಯಾಯಾಲಯದಲ್ಲಿರುವ ಕಾರಣ 6 ತಿಂಗಳ ನಂತರ ಅಕಾಡೆಮಿಕ್ ಕೌನ್ಸಿಲ್ ಸಭೆ ನಡೆಯಿತು. ವಿಶ್ವವಿದ್ಯಾನಿಲಯದ ಕುಲಸಚಿವೆ ವಿ.ಆರ್.ಶೈಲಜಾ, ಹಣಕಾಸು ಅಧಿಕಾರಿ ರೇಖಾ ಸೇರಿದಂತೆ ಕೌನ್ಸಿಲ್ ಸದಸ್ಯರು ಸಭೆಯಲ್ಲಿ ಉಪಸ್ಥಿತರಿದ್ದರು.

ಡಿಜಿಟಲ್ ಮೌಲ್ಯಮಾಪನ ಎಂದರೇನು, ಇದರ ಪ್ರಯೋಜನಗಳೇನು

ಡಿಜಿಟಲ್ ಮೌಲ್ಯಮಾಪನವನ್ನು ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯ, ಭಾರತದ ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಷನ್, ಕರ್ನಾಟಕ ವಿಟಿಯು ಸೇರಿದಂತೆ ಹಲವು ವಿದ್ಯಾನಿಲಯ ಹಾಗೂ ಶಿಕ್ಷಣ ಸಂಸ್ಥೆಗಳು ಅಳವಡಿಸಿಕೊಂಡಿವೆ. ತಂತ್ರಜ್ಞಾನದಲ್ಲಿ ದಾಪುಗಾಲು ಇಡುತ್ತಿರುವ ಪ್ರಸಕ್ತ ಸಂದರ್ಭದಲ್ಲಿ ತಂತ್ರಜ್ಞಾನ ಆಧಾರಿತ ಮೌಲ್ಯಮಾಪನವನ್ನು ಅಳವಡಿಸಿಕೊಂಡು 22 ವರ್ಷಗಳೇ ಕಳೆದಿವೆ. ಆದರೆ, ಡಿಜಿಟಲ್ ಮೌಲ್ಯಮಾಪನ ಎಂದರೇನು ಎಂಬ ಪ್ರಶ್ನೆ ಈಗಲೂ ಕಾಡುತ್ತಿದ್ದು, ಇದಕ್ಕೆ ಉತ್ತರ ಇಲ್ಲಿದೆ;

ಶಿಕ್ಷಣದಲ್ಲಿ ಬದಲಾಗುತ್ತಿರುವ ಪ್ರವೃತ್ತಿಗಳಲ್ಲಿ ಡಿಜಿಟಲ್ ಮೌಲ್ಯಮಾಪನವೂ ಒಂದಾಗಿದೆ. ಇದು ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನು ಸುಲಭಗೊಳಿಸುವ ಉನ್ನತ ತಂತ್ರಜ್ಞಾನದ ಒಂದು ಭಾಗ. ಕಂಪ್ಯೂಟರ್‌ಗಳಲ್ಲಿ ಸ್ಕ್ಯಾನ್ ಮಾಡಿರುವ ಉತ್ತರ ಪ್ರತಿಯನ್ನು ಮೌಲ್ಯಮಾಪನ ಮಾಡುವುದು ಡಿಜಿಟಲ್ ಮೌಲ್ಯಮಾಪನವಾಗಿದೆ.

ಮೌಲ್ಯಮಾಪನ ಮಾಡುವವರು ಕಂಪ್ಯೂಟರ್ ಇಲ್ಲವೇ ಇತರೆ ಯಾವುದೇ ರೀತಿಯ ತಂತ್ರಜ್ಞಾನದ ಸಾಧನದಲ್ಲಿ ಉತ್ತರಗಳನ್ನು ನಿರ್ಣಯಿಸಿ ಮೌಲ್ಯಮಾಪನ ಮಾಡಬಹುದು. ಇದು ತಂತ್ರಜ್ಞಾನ ಆಧಾರಿತ ಡಿಜಿಟಲ್ ಮೌಲ್ಯಮಾಪನವಾದರೂ ಸಾಂಪ್ರದಾಯಿಕ ಮೌಲ್ಯಮಾಪನ ಬದಲಾಯಿಸದೆ ಅದು ಹಾಗೆ ಇರುತ್ತದೆ. ಹಸ್ತಚಾಲಿತ ಉತ್ತರ ಪ್ರತಿಗಳನ್ನು ಡಿಜಿಟಲ್ ಅಥವಾ ಆನ್ ಲೈನ್ ಮೂಲಕ ಮೌಲ್ಯಮಾಪನ ಮಾಡುವುದು ಮಾತ್ರ ವ್ಯತ್ಯಾಸವಾಗಿರುತ್ತದೆ. ವಿದ್ಯಾರ್ಥಿಗಳು ಪೇಪರ್‌ನಲ್ಲಿ ಅಥವಾ ಎಲೆಕ್ಟ್ರಾನಿಕ್ ಟ್ಯಾಬ್‌ನಲ್ಲಿ ಉತ್ತರ ಬರೆದಿರುತ್ತಾರೆ. ಅದನ್ನು ಸ್ಕ್ಯಾನ್ ಮಾಡಿ ಡಿಜಿಟಲ್ ಸ್ಟೋರೇಜ್‌ಗೆ ಅಪ್‌ಲೋಡ್ ಮಾಡಲಾಗುವುದು. ತರುವಾಯ ನಿಗದಿತ ಪರೀಕ್ಷಾ ಮೌಲ್ಯಮಾಪನಕಾರರಿಗೆ ಅದನ್ನು ಆನ್‌ಲೈನ್ ಮೂಲಕವೇ ಕಳುಹಿಸಲಾಗುವುದು. ಮೌಲ್ಯಮಾಪನ ಮಾಡುವರು ಎಲ್ಲೆ ಇದ್ದರೂ ತಮ್ಮ ಸಿಸ್ಟಂನಲ್ಲಿ ಮೌಲ್ಯಮಾಪನ ಮಾಡುತ್ತಾರೆ. ಅಗತ್ಯವಿದ್ದರೆ ಹಿರಿಯ ಪರೀಕ್ಷಕರು ಪುನರ್ ಮೌಲ್ಯಮಾಪನ ಮಾಡಬಹುದು. ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದಲ್ಲಿ 1999 ರಲ್ಲಿ ಪ್ರಾಯೋಗಿಕವಾಗಿ ಡಿಜಿಟಲ್ ಮೌಲ್ಯಮಾಪನ ಜಾರಿಗೊಂಡಿತು. 2004 ರ ವೇಳೆಗೆ ವಿಶ್ವದ ಹಲವು ವಿಶ್ವವಿದ್ಯಾನಿಲಯಗಳಲ್ಲಿ ಇದು ಜನಪ್ರಿಯವಾಯಿತು.

ಉತ್ತರ ಪತ್ರಿಕೆಗಳನ್ನು ಡಿಜಿಟಲ್ ರೂಪದಲ್ಲಿ ಸಂಗ್ರಹಿಸುವ ಕಾರಣ ಮೌಲ್ಯಮಾಪನ ಹೆಚ್ಚಿನ ಭದ್ರತೆ ಹೊಂದಿರುತ್ತದೆ. ಪರೀಕ್ಷಾ ನಿಯಂತ್ರಕರಿಂದ ಪ್ರವೇಶ ಪಡೆದ ಪರಿವೀಕ್ಷಕರು ಮಾತ್ರ ಉತ್ತರ ಪತ್ರಿಕೆಗಳನ್ನು ಪಡೆಯಬಹುದು. ಪೇಪರ್‌ನಲ್ಲಿರುವ ಉತ್ತರ ಪತ್ರಿಕೆಗಳನ್ನು ಸಾಗಣೆ ಮಾಡುವಾಗ ಅದು ವಿರೂಪಗೊಳ್ಳುವ, ಹಾನಿಯಾಗುವ ಸಾಧ್ಯತೆ ಇರುತ್ತದೆ. ಉತ್ತರ ಪತ್ರಿಕೆಗಳ ಸಾಗಣೆ ವೆಚ್ಚ ಕೂಡ ಕಡಿತವಾಗುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ ಶೀಘ್ರ ಫಲಿತಾಂಶ ಪ್ರಕಟಿಸಬಹುದು.

ಭಾರತದಲ್ಲಿ ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರ್ ಎಜುಕೇಷನ್, ಕರ್ನಾಟಕ ವಿಟಿಯು ಸೇರಿದಂತೆ ಹಲವು ಶಿಕ್ಷಣ ಸಂಸ್ಥೆಗಳು ಈಗಾಗಲೇ ಡಿಜಿಟಲ್ ಮೌಲ್ಯಮಾಪನ ಅಳಡಿಸಿಕೊಂಡಿದೆ. ಇಷ್ಟೆಲ್ಲಾ ಅನುಕೂಲವಿರುವ ಡಿಜಿಟಲ್ ಮೌಲ್ಯಮಾಪನವನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಏಕೆ ಅಳವಡಿಸಿಕೊಳ್ಳುತ್ತಿಲ್ಲ ಎಂಬ ಪ್ರಶ್ನೆ ಎದುರಾಗಿದೆ.

ನಾಳೆ ಶ್ರೀ ನೀಲಕಂಠಸ್ವಾಮಿ ಮಠದ ಮುಖ್ಯದ್ವಾರ ಉದ್ಘಾಟನೆ

ಮೈಸೂರು, ನ. 10–ಮೈಸೂರಿನ ಖಿಲ್ಲೆ ಮೊಹಲ್ಲಾದಲ್ಲಿ ನೂತನವಾಗಿ ನಿರ್ಮಿಸಿರುವ 'ಶ್ರೀ ನೀಲಕಂಠಸ್ವಾಮಿ ಮಠದ ಮುಖ್ಯ ದ್ವಾರ ಉದ್ಘಾಟನೆ, ಶ್ರೀ ಮಠದ ಮುಂಭಾಗದ ರಸ್ತೆಗೆ ಶ್ರೀ ನೀಲಕಂಠಸ್ವಾಮಿ ರಸ್ತೆ ನಾಮಫಲಕ ಉದ್ಘಾಟನೆ ಮತ್ತು 'ಐತಿಹಾಸಿಕ ಐಸಿರಿ ಶ್ರೀ ನೀಲಕಂಠಸ್ವಾಮಿ ಮಠ ಗ್ರಂಥ ಲೋಕಾರ್ಪಣೆ ಸಮಾರಂಭವನ್ನು ನ. 12 ರಂದು ಏರ್ಪಡಿಸಲಾಗಿದೆ.

ಕಾರ್ಯಕ್ರಮದ ಸಾನ್ನಿಧ್ಯದೊಂದಿಗೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ಶ್ರೀ ನೀಲಕಂಠಸ್ವಾಮಿ ಮಠದ ಮುಖ್ಯ ದ್ವಾರ ಉದ್ಘಾಟನೆ ನೆರವೇರಿಸಲಿದ್ದಾರೆ. ಶ್ರೀ ಯೋಗಾನರಸಿಂಹ ಸ್ವಾಮಿ ದೇವಸ್ಥಾನದ ಸಂಸ್ಥಾಪಕರಾದ ಡಾ. ಭಾಷ್ಯಂ ಸ್ವಾಮೀಜಿ ಉಪಸ್ಥಿತರಿರುವರು. ಶಾಸಕ ಟಿ.ಎಸ್. ಶ್ರೀವತ್ಸ ಸೇವಾಕರ್ತರನ್ನು ಸನ್ಮಾನಿಸಲಿದ್ದಾರೆ. ಮೇಯರ್ ಶಿವಕುಮಾರ್ ಶ್ರೀ ನೀಲಕಂಠ ಸ್ವಾಮಿ ಮಠದ ರಸ್ತೆ ನಾಮಫಲಕವನ್ನು ಉದ್ಘಾಟಿಸುವರು. ಪಾಲಿಕೆ ಸದಸ್ಯ ಬಿ.ವಿ. ಮಂಜುನಾಥ್ ಅವರು 'ಐತಿಹಾಸಿಕ ಐಸಿರಿ ಶ್ರೀ ನೀಲಕಂಠಸ್ವಾಮಿ ಮಠ' ಗ್ರಂಥ ಬಿಡುಗಡೆ ಮಾಡಲಿದ್ದಾರೆ.

ತಾತ್ಕಾಲಿಕ ಪದವಿ ಪ್ರಮಾಣ ಪತ್ರದ ಮಾನ್ಯತೆ 1 ವರ್ಷಕ್ಕೆ ವಿಸ್ತರಣೆ

ಮೈಸೂರು ವಿಶ್ವವಿದ್ಯಾನಿಲಯದ ಶಿಕ್ಷಣ ಮಂಡಳಿ ಸಭೆ ಒಪ್ಪಿಗೆ

● ಅನುತೀರ್ಣಗೊಂಡ ವಿದ್ಯಾರ್ಥಿಗಳಿಗೆ ಮತ್ತೆ ಅವಕಾಶ ● ಐವರು ಬಿ.ಇಡಿ ವಿದ್ಯಾರ್ಥಿಗಳಿಗೂ ಮರು ಪ್ರವೇಶ ಅನುಮತಿ ● ದತ್ತಿ ಬಹುಮಾನದಡಿ ಚಿನ್ನದ ಮೆಡಲ್ ನೀಡುವ ಸಂಬಂಧ ಸಮಿತಿ ರಚನೆ



ಮೈಸೂರು, ನ.10(ಬಿಎಲ್‌ಯು)– ತಾತ್ಕಾಲಿಕ ಪದವಿ ಪ್ರಮಾಣಪತ್ರ (Provisional Pass Certificat-PPC)ದ ಮಾನ್ಯತೆಯ ಅವಧಿಯನ್ನು 6 ತಿಂಗಳಿನಿಂದ 1 ವರ್ಷದ ಅವಧಿಗೆ ವಿಸ್ತರಿಸಲು ಮೈಸೂರು ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್ ಸಭೆ ನಿರ್ಣಯ ಕೈಗೊಂಡಿದೆ.

ಇಂದು ನಡೆದ ಮೈಸೂರು ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್ ಸಭೆಯಲ್ಲಿ ಈ ವಿಷಯ ಮಂಡಿಸಿದ ಕುಲಸಚಿವೆ ಶೈಲಜಾ, ಈಗ ಆರು ತಿಂಗಳ ತನಕ ಮಾನ್ಯತೆ ನೀಡಲಾಗಿದೆ. ತರುವಾಯ ಅಂತಿಮ ಪದವಿ ಪ್ರಮಾಣ ಪತ್ರ ಬರುವ ತನಕ ವಿದ್ಯಾರ್ಥಿಗಳು ಹಲವು ತೊಂದರೆಗಳನ್ನು ಎದುರಿಸುತ್ತಾರೆ ಎಂದು ಸಭೆಗೆ ವಿವರಿಸಿದರು.

ಅದರಲ್ಲೂ ವಿದೇಶಿ ವಿದ್ಯಾರ್ಥಿಗಳು ವೀಸಾ ಪಡೆಯಲು ತುಂಬಾ ತೊಂದರೆಯಾಗುತ್ತದೆ. ಈ ವಿಚಾರವನ್ನು ಬಹಳಷ್ಟು ವಿದ್ಯಾರ್ಥಿಗಳು ನಮ್ಮ ಗಮನಕ್ಕೆ ತಂದಿದ್ದಾರೆ ಎಂದು ಶೈಲಜಾ ಹೇಳಿದರು.

ತರುವಾಯ ತಾತ್ಕಾಲಿಕ ಪದವಿ ಪ್ರಮಾಣ ಪತ್ರದ ಮಾನ್ಯತೆಯನ್ನು 6 ತಿಂಗಳಿನಿಂದ 1 ವರ್ಷದ ತನಕ ವಿಸ್ತರಿಸಲು ಸಭೆ ಸರ್ವಾನುಮತದ ಒಪ್ಪಿಗೆ ನೀಡಿತು.

ಮತ್ತೊಂದು ಅವಕಾಶ: ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳ ವ್ಯಾಸಂಗ ಪೂರೈಸಿ ಎರಡು ಪಟ್ಟು ಅವಧಿಯ ನಂತರವೂ ಅನುತೀರ್ಣಗೊಂಡಿರುವ 500 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಲು ಸಭೆಯಲ್ಲಿ ಚರ್ಚೆಯಾಯಿತು. ಇದಕ್ಕೆ ವಿರೋಧ ವ್ಯಕ್ತಪಡಿಸಿದ ಪ್ರೊ.ಶ್ರೀಧರ್, 1999 ರಲ್ಲಿ ಪರೀಕ್ಷೆ ಬರೆದು ಅನುತೀರ್ಣರಾದವರು 2018 ರಲ್ಲಿ ಪರೀಕ್ಷೆ ಬರೆಯಲು ಅವಕಾಶ ಕೇಳಿದ್ದಾರೆ. ಹೀಗೆ ಅವಕಾಶ ಕೊಟ್ಟರೆ ಅಂದಿನ ಸಿಲಬಸ್ ಈಗ ಇರುವುದಿಲ್ಲ. ಹೊಸ ಸಿಲಬಸ್ ಕೊಡಲು ಸಾಧ್ಯವಾಗುವುದಿಲ್ಲ. ಅದೂ ಅಲ್ಲದೆ ಈಗ ಅನುಮತಿ ಕೊಟ್ಟರೆ ಇದು ಪುನಾರಾವರ್ತನೆ ಆಗುತ್ತದೆ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.


ಅಂತಿಮವಾಗಿ ಮತ್ತೊಂದು ಅವಕಾಶ ಕೊಡೋಣ ಎಂದು ಪ್ರೊ.ಆನಂದ್ ಸೇರಿದಂತೆ ಇತರರು ಹೇಳಿದಾಗ ಸಭೆ ಇದಕ್ಕೆ ಸಮ್ಮತಿ ಸೂಚಿಸಿತು.

ಜೊತೆಗೆ 2022–23ನೇ ಶೈಕ್ಷಣಿಕ ಸಾಲಿಗೆ ಅನ್ವಯವಾಗುವಂತೆ ಎರಡು ಪಟ್ಟು ಅವಧಿ ಮುಗಿದಿರುವ ಐವರು ಬಿ.ಇಡಿ ವಿದ್ಯಾರ್ಥಿಗಳಿಗೆ 3 ಮತ್ತು 4ನೇ ಸೆಮಿಸ್ಟರ್‌ಗೆ ಮರು ಪ್ರವೇಶ ಪಡೆಯಲು ಅಕಾಡೆಮಿಕ್ ಕೌನ್ಸಿಲ್ ಸಭೆ ಸಮ್ಮತಿಸಿತು.

ಬಹಳಷ್ಟು ಜನರು ತಂದೆ–ತಾಯಿ ಹೆಸರಿನಲ್ಲಿ ದತ್ತಿ ಬಹುಮಾನ ಘೋಷಿಸುತ್ತಿದ್ದಾರೆ. ಆದರೆ ಅವರು ನೀಡುವ ಒಂದು ಅಥವಾ ಎರಡು ಲಕ್ಷ ರೂಪಾಯಿಯ ಬ್ಯಾಂಕ್ ಬಡ್ಡಿಯಲ್ಲಿ ಗೋಲ್ಡ್ ಮೆಡಲ್ ನೀಡಲು ಸಾಧ್ಯವಾಗುತ್ತಿಲ್ಲ ಎಂದು ಶೈಲಜಾ ತಿಳಿಸಿದರು. ಇದಕ್ಕೆ ಹಲವು ಸದಸ್ಯರು ದನಿಗೂಡಿಸಿದರು.

ದತ್ತಿ ಬಹುಮಾನದಡಿ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಚಿನ್ನದ ಲೇಪನದ ಮೆಡಲ್ ಕೊಡಲಾಗುತ್ತಿದೆ. ಇಲ್ಲೂ ಕೂಡ ಅದೇ ಮಾದರಿಯ ಗೋಲ್ಡ್ ಮೆಡಲ್ ಕೊಡಬಹುದು ಎಂದು ಕೆಲವು ಸದಸ್ಯರು ಸಲಹೆ ನೀಡಿದರು. ಈ ಸಂಬಂಧ ಚಿಂತನೆ ನಡೆಸಿ ವರದಿ ನೀಡಲು ಸಮಿತಿ ರಚಿಸಲು ಸಭೆ ತೀರ್ಮಾನ ಕೈಗೊಂಡಿತು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.11.2023 ಶನಿವಾರ, ಮಳೆ ನಕ್ಷತ್ರ: ವಿಶಾಖ, 07.11.2023 ರಿಂದ 19.11.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಕೃಷ್ಣ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ: ಚಿತ್ತ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ದಿ ಆರ್ಟ್ ಆಫ್ ಲೀವಿಂಗ್ (ವೇದ ವಿಜ್ಞಾನ ಮಹಾ ವಿದ್ಯಾಪೀಠ):** ಶ್ರೀ ಶ್ರೀ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲೀವಿಂಗ್ ಶಿಬಿರ, ಆನಂದದ ಅನುಭೂತಿ ಶಿಬಿರ, ಸ್ಥಳ: ಆರ್ಟ್ ಆಫ್ ಲೀವಿಂಗ್ ಆಶ್ರಮ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 6ರಿಂದ 8.30, ಸಂಜೆ 6ರಿಂದ 8.30ರವರೆಗೆ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ಕರ್ನಾಟಕ ಅರಸು ಮಹಾಮಂಡಳಿ ಚಾರಿಟೆಬಲ್ ಟ್ರಸ್ಟ್:** ಕನ್ನಡ ರಾಜ್ಯೋತ್ಸವ ಮತ್ತು ಅರಸು ಜನಾಂಗದ ಯುವ ಜನೋತ್ಸವ, ಉದ್ಘಾಟನೆ: ಶಾಸಕ ಟಿ.ಎಸ್. ಶ್ರೀವತ್ಸ ಮುಖ್ಯ ಭಾಷಣಕಾರರು: ಡಾ. ಪ್ರಧಾನ್ ಗುರುದತ್ತ, ಮುಖ್ಯ ಅತಿಥಿಗಳು: ಲಯನ್ ಗೌರ್ನರ್ ಡಾ. ರಾಮರಾಜೇ ಅರಸು, ಮೈಸೂರು ಸಾಹಿತ್ಯ ಸಂಭ್ರಮ ಅಧ್ಯಕ್ಷೆ ಶುಭ ಸಂಜಯ್ ಅರಸ್, ಆದರ್ಶ ಬಿ.ಅರಸ್, ಟ್ರಸ್ಟ್ ಗೌರವ ಅಧ್ಯಕ್ಷ ಎಂ.ಎಲ್. ಬಸವರಾಜೇ ಅರಸು, ಉಪಾಧ್ಯಕ್ಷ ಡಾ. ಎಂ.ಜಿ.ಆರ್. ಅರಸ್, ಅಧ್ಯಕ್ಷತೆ: ಟ್ರಸ್ಟ್ ಅಧ್ಯಕ್ಷ ಬಿ.ಎಸ್. ಶ್ರೀಧರರಾಜ ಅರಸ್, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಆರ್ಟ್ ಗ್ಯಾಲರಿ:** ಸಾಧಕರೊಂದಿಗೆ ಸಂವಾದ ಮತ್ತು ಕಲಾಪ್ರದರ್ಶನ, ತಿಂಗಳ ಸಾಧಕರು ಕೆ.ಜಿ. ಲಿಂಗದೇವರು, ಕಲಾ ಪ್ರದರ್ಶನ ಉದ್ಘಾಟನೆ: ಪ್ರಜಾಸತ್ಯ ಸಂಪಾದಕ ದ.ಕೋ. ಹಳ್ಳಿ ಚಂದ್ರಶೇಖರ್, ಮುಖ್ಯ ಅತಿಥಿಗಳು: ಚಿತ್ರಕಲಾ ಮಹಾವಿದ್ಯಾಲಯ ವಿಶ್ರಾಂತ ಪ್ರಾಚಾರ್ಯ ಬಾಬು ಜತ್ಕರ್, ಅಧ್ಯಕ್ಷತೆ: ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಎಲ್. ಶಿವಲಿಂಗಪ್ಪ, ವಿಶೇಷ ಆಹ್ವಾನಿತರು: ಆರ್.ಎಸ್. ಪುಷ್ಪ, ಯು.ಜಿ. ಮೋಹನಕುಮಾರ್ ಆರಾಧ್ಯ, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 11ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕಲಿಸು ಫೌಂಡೇಷನ್, ಸೇಫಿಯೆಂಟ್ ಕಾಲೇಜು :** ಅಂಬಳೆ ಮಹಾದೇವಸ್ವಾಮಿ ಅವರ ಬೋಧಿ ಬೆಳಕಿನ ಹಾದಿ (ವಿಮರ್ಶಾ ಸಂಕಲನ), ಕಾರುಣ್ಯದ ಕಡಲು (ಕವನ ಸಂಕಲನ) ಬಿಡುಗಡೆ ಸಮಾರಂಭ, ಸಾನ್ನಿಧ್ಯ: ಶ್ರೀ ಸಿದ್ಧಲಿಂಗ ಸ್ವಾಮೀಜಿ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಪುಸ್ತಕಗಳ ಲೋಕಾರ್ಪಣೆ: ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಎನ್.ಕೆ. ಲೋಕನಾಥ್, ಪ್ರಾಸ್ತಾವಿಕ ಭಾಷಣ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪುಸ್ತಕಗಳನ್ನು ಕುರಿತು : ವಿಮರ್ಶಕ ಡಾ. ಸಿ. ನಾಗಣ್ಣ, ಮುಖ್ಯ ಅತಿಥಿಗಳು : ತುಮಕೂರು ವಿವಿ ಕುಲಸಚಿವ ಡಾ. ಪ್ರಸನ್ನಕುಮಾರ್, ಸಂಸ್ಕೃತಿ ಚಿಂತಕ ಪ್ರೊ. ಎ. ರಂಗಸ್ವಾಮಿ, ಪತ್ರಕರ್ತೆ ಶ್ರೀಮತಿ ರಶ್ಮಿ ಕೋಟಿ, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ರೈಲ್ವೆ ಪೆನ್ಷನರ್ಸ್ ವೆಲ್‌ಫೇರ್ ಅಸೋಸಿಯೇಷನ್ :** ಮಾಸಿಕ ಸಭೆ, ಅಧ್ಯಕ್ಷತೆ : ಅಸೋಸಿಯೇಷನ್ ಅಧ್ಯಕ್ಷ ಪಾರ್ಥಸಾರಥಿ, ಸ್ಥಳ: ಸಂಘದ ಕಚೇರಿ, ಬೆಳಗ್ಗೆ 11.30ಕ್ಕೆ.

■ **ಬೇಸ್ ಪಿಯು ಕಾಲೇಜು :** ಉತ್ಸವ ಮತ್ತು ಬೀಳ್ಕೊಡುಗೆ ಸಮಾರಂಭ, ಮುಖ್ಯ ಅತಿಥಿಗಳು: ಡಾ. ನಿಗರ್ ಶಾಜಿ, ಡಾ. ಬಿ.ಎಸ್. ಮಂಜುನಾಥ್, ಪ್ರೊ. ಆರ್.ಪಿ. ಉಮಾಶಂಕರ್, ಸ್ಥಳ: ಜೆ.ಕೆ. ಮೈದಾನ ಸಭಾಂಗಣ, ಮಧ್ಯಾಹ್ನ 2ಕ್ಕೆ.

■ **ಚಿಂತನ ಚಿತ್ತಾರ :** ರಂಗನಾಥ ಕಂಟನಕುಂಟೆ ಅವರ ಪ್ರೇಮಬಿಕ್ಕು ಮತ್ತು ಬಾಪು ಬಟ್ಟೆ (ಕವನ ಸಂಕಲನ), ಓದಿನ ಒಕ್ಕಲು (ವಿಮರ್ಶಾ ಲೇಖನಗಳ ಸಂಕಲನ) ಪುಸ್ತಕಗಳ ಲೋಕಾರ್ಪಣೆ ಹಾಗೂ ಸಂವಾದ ಸಮಾರಂಭ, ಅಧ್ಯಕ್ಷತೆ : ಚಿಂತಕ ಪ್ರೊ. ಕಾಳೇಗೌಡ ನಾಗವಾರ, ಬಿಡುಗಡೆ : ಹೆಸರಾಂತ ಕವಿ ಪ್ರೊ. ಚ. ಸರ್ವಮಂಗಳ, ಪುಸ್ತಕ ಸಂವಾದ : ವಿಮರ್ಶಕ ಪ್ರೊ. ಸುಭಾಷ್ ರಾಜಮಾನೆ, ವಿಮರ್ಶಕರಾದ ಪ್ರೊ. ಡಿ. ವಿಜಯಲಕ್ಷ್ಮಿ, ಸ್ಥಳ: ಶ್ರೀರಂಗ ಸಭಾಂಗಣ, ರಂಗಾಯಣ, ಸಂಜೆ 4ಕ್ಕೆ.

■ **ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರ :** ವಸುಂಧರೋತ್ಸವ–2023, ಸಂಜೆ 6.15 ರಿಂದ ಸ್ಮೃತಿ ನಂದನ ಪ್ರದರ್ಶಕ ಕಲೆಗಳ ಕೇಂದ್ರ, ಗುರು ವಿದುಷಿ ಶ್ರೀಮತಿ ಸೀಮಾ ಜವಾಹರ್ ಅವರಿಂದ ಭರತನಾಟ್ಯ, ಸಂಜೆ 7 ರಿಂದ ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರ, ಗುರು ವಿದುಷಿ ಡಾ. ವಸುಂಧರಾ ದೊರೆಸ್ವಾಮಿ ಅವರಿಂದ ಭರತನಾಟ್ಯ, ಸಂಜೆ 7.45 ರಿಂದ ನಾಕಲಾಂದಿಕ, ಗುರು ವಿದುಷಿ ಶ್ರೀಮತಿ ಪ್ರೇಮಿತಾ ಗೋವಿಂದ್ ಅವರಿಂದ ಭರತನಾಟ್ಯ, ಗೌರವ ಸಮರ್ಪಣೆ : ಮುಕ್ತಕ ಅಕಾಡೆಮಿ ಸಂಸ್ಥಾಪಕ ಪ್ರೊ. ಎಸ್. ರಾಮಪ್ರಸಾದ್, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ವಿಪ್ರಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಕರುನಾಡು ಮೈಸೂರು ಅಂಬಾರಿ ಕನ್ನಡ ಸೇನೆ, ಶ್ರೀ ಚೌಡೇಶ್ವರಿ ಶಾಂತಿನಿಕೇತನ ಟ್ರಸ್ಟ್ :** ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ, ಬೆಳಗ್ಗೆ 10ಕ್ಕೆ ಧ್ವಜಾರೋಹಣ: ಪಾಲಿಕೆ ಸದಸ್ಯ ರಮೇಶ್, ಸಂಜೆ 4ಕ್ಕೆ ಚಿತ್ರಕಲಾ ಸ್ಪರ್ಧೆ, ಮಹಿಳೆಯರಿಗೆ ರಂಗೋಲಿ ಸ್ಪರ್ಧೆ, ಉಪಸ್ಥಿತರು: ನಗರ ಪಾಲಿಕೆ ಸದಸ್ಯೆ ಶ್ರೀಮತಿ ಶೋಭಾ ಸುನೀಲ್, ನಗರ ಪಾಲಿಕೆ ಮಾಜಿ ಸದಸ್ಯ ಸುನೀಲ್, ಸಂಜೆ 4.30ಕ್ಕೆ ಗಿಡ ನೆಡುವ ಕಾರ್ಯಕ್ರಮ, ಉಪಸ್ಥಿತರು: ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಅಧ್ಯಕ್ಷತೆ: ಶಾಸಕ ಟಿ.ಎಸ್. ಶ್ರೀವತ್ಸ, ಉದ್ಘಾಟನೆ : ಶಾಸಕ ಹರೀಶ್‌ಗೌಡ, ಮಾಜಿ ಸಚಿವ ಎಂ.ಶಿವಣ್ಣ, ಪ್ರಾಸ್ತಾವಿಕ ನುಡಿ: ಕನ್ನಡ ಸೇನೆ ಅಧ್ಯಕ್ಷ ಪ್ರವೀಣ್, ಮುಖ್ಯ ಅತಿಥಿಗಳು: ಸಂಸದ ಪ್ರತಾಪ್ ಸಿಂಹ, ಮಾಜಿ ಶಾಸಕರಾದ ಎಂ.ಕೆ. ಸೋಮಶೇಖರ್, ಎಸ್.ಎ.ರಾಮದಾಸ್, ಒಕ್ಕಲಿಗ ಸಂಘದ ಅಧ್ಯಕ್ಷ ಗಂಗಾಧರಗೌಡ, ಜೆಡಿಎಸ್ ಮುಖಂಡ ಕೆ.ಟಿ. ಮಲ್ಲೇಶ್, ಮಹದೇವು, ಲೋಕನಾಥ್, ಬಸವರಾಜ್, ಸ್ಥಳ:ಸೌಗಂಧಿಕಾ ಉದ್ಯಾನವನ, ಕುವೆಂಪುನಗರ.

■ **ಅನಂತಗೀತ ವಿದ್ಯಾಲಯ :** ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಧರ್ಮೇಂದ್ರಕುಮಾರ್, ಸ್ಥಳ: ಕಲಾಮಂದಿರ, ವಿನೋಬಾ ರಸ್ತೆ, ಸಂಜೆ 5ಕ್ಕೆ.

■ **ಸುರುಚಿ ರಂಗಮನೆ :** ಸೈನ್ಸ್ ಸಂಜೆ ಕಾರ್ಯಕ್ರಮ, ಪ್ರೊ. ಕೆಂಪರಾಜು ಅವರಿಂದ ವಿಷಜಂತುಗಳು: ಶಾಪವೋ ವರವೋ ಕುರಿತು ಭಾಷಣ, ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ, ಸಂಜೆ 6.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸಿ.ಎಫ್.ಟಿ.ಆರ್.ಐ ಶೋಧ ಅನುಶೋಧ – ಪ್ರಾಯೋಜಿತ ಕಾರ್ಯಕ್ರಮ, ಪ್ರಸ್ತುತಿ– ಡಾ. ವಿ.ಬಿ. ಕುಡಚಿರ, 6.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರ ಕುಮಾರ್, 6.45 ಕಲ್ಯಾಣ ಕರೆದಿದೆ ಕಲ್ಯಾಣ–ಪ್ರಾಯೋಜಿತ ಕಾರ್ಯಕ್ರಮ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 10.00 ಎಂ.ಎಸ್. ಗೋಪಾಲಕೃಷ್ಣನ್ – ವಯೋಲಿನ್

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆ, 3.30 ಮಕ್ಕಳ ಮಂಟಪ –ವಾಜಮಂಗಲದ ರೋಟರಿ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ ಅದಲು ಬದಲು, ರಚನೆ– ಕೆ.ಟಿ. ಗಟ್ಟಿ, ನಿರ್ಮಾಣ– ಡಾ.ಬಿ.ಎಂ.ಶರಭೇಂದ್ರಸ್ವಾಮಿ ಮತ್ತು ಕಾನ್ಸೆಪ್ಟಾ ಫರ್ನಾಂಡೀಸ್, 4.30 ನೆನಪಿನಂಗಳ–ರಾಷ್ಟ್ರಕವಿ ಕುವೆಂಪು ಅವರೊಂದಿಗೆ ಮಕ್ಕಳು ನಡೆಸಿದ್ದ ಸಂವಾದ, 6.50 ಕೃಷಿರಂಗ–ತೋರಣ ಹೂರಣ–ವಾರದ ಗ್ರಾಮೀಣ ಕಾರ್ಯಕ್ರಮ, ಪ್ರಸ್ತುತಿ– ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರು ಉಮೇಶ್, ಪರಾಗ–ಬೇಸಾಯದ ಬದುಕು ಸರಾಗ – ಬಾನುಲಿ ಸರಣಿ, 8.00 ಯುವವಾಣಿ, 9.30 ಒಂದು ಕೊಂಡರೆ ಒಂದು ಉಚಿತ–ವಿನೋದ ಭಾಷಣ ಪ್ರವೀಣ್ ಕುಮಾರ್ ಮಾವಿನಕಾಡು ಅವರಿಂದ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಟಿ. ಸಂತೋಷ್– ನಾಗಸ್ವರ ವಾದನ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 11 ಶನಿವಾರ 2023

ಸಂಪುಟ: 44 | ಸಂಚಿಕೆ: 205 | ಪುಟಗಳು: 12


ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.co

₹4

ರಾಜ್ಯದ 100 ತಾಲೂಕಲ್ಲಿ 15 ದಿನದಲ್ಲಿ ಬಗರ್ ಹುಕುಂ ಮಂಜೂರಾತಿ ಸಮಿತಿ ರಚನೆ

ಡಿ.15ರೊಳಗೆ ಉಳಿದ ತಾಲೂಕಲ್ಲಿ ಸಮಿತಿ ಅಸ್ತಿತ್ವಕ್ಕೆ



ಬೆಂಗಳೂರು, ನ.10(ಕೆಎಂಶಿ)–ಇನ್ನು ಹದಿನೈದು ದಿನದಲ್ಲಿ 100 ತಾಲೂಕುಗಳಲ್ಲಿ ಬಗರ್ ಹುಕುಂ ಮಂಜೂರಾತಿ ಸಮಿತಿಗಳನ್ನು ರಚಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣಭೈರೇಗೌಡ ತಿಳಿಸಿದ್ದಾರೆ. ಇಲಾಖಾ ಅಧಿಕಾರಿಗಳ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿಸೆಂಬರ್ 15ರೊಳಗೆ ಉಳಿದ ತಾಲೂಕುಗಳಲ್ಲೂ ಈ ಸಮಿತಿಗಳನ್ನು ರಚಿಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ರೈತರು ಸಲ್ಲಿಸಿರುವ ಅರ್ಜಿಗಳಿಗೆ 8 ತಿಂಗಳ ಸಮಯ ನೀಡಲಾಗಿದೆ. ಅರ್ಹರಲ್ಲದವರಿಗೆ ಜಮೀನು ಮಂಜೂರಾಗುವುದನ್ನು ತಪ್ಪಿಸಲು 15 ವರ್ಷಗಳ ಭೌಗೋಳಿಕ ಮ್ಯಾಪಿಂಗ್ ವ್ಯವಸ್ಥೆ ಅಳವಡಿಸಲಾಗಿದೆ.

ಅರ್ಹರಾದವರಿಗೆ ಡಿಜಿಟಲ್ ಸಾಗುವಳಿ ಚೀಟಿ ನೀಡಿ ಕ್ರಯಪತ್ರ ನೋಂದಣಿ ಮಾಡಿಕೊಡುವುದಲ್ಲದೆ, ಪೋಡಿ ಮಾಡಿ ರಸ್ತೆಗೆ ಜಾಗವನ್ನು ಬಿಡುತ್ತೇವೆ ಎಂದು ಹೇಳಿದರು. ಒಬ್ಬರ ಹೆಸರಿನಲ್ಲಿ ಹಲವು ಅರ್ಜಿಗಳು ಸಲ್ಲಿಕೆಯಾಗಿರುವುದು, ಸಾಗುವಳಿ ಮಾಡದವರೂ ಅರ್ಜಿ ಹಾಕಿರುವುದೂ ಕಂಡು ಬಂದಿದೆ. ಒಟ್ಟಾರೆ 9.90 ಲಕ್ಷ ಅರ್ಜಿಗಳು ಸಲ್ಲಿಕೆಯಾಗಿವೆ. ಹತ್ತಾರು ವರ್ಷದಿಂದಲೂ ಬಗರ್ ಹುಕುಂ ಅರ್ಜಿಗಳು ವಿಲೇವಾರಿಯಾಗದೆ, ಬಾಕಿ ಉಳಿದಿರುವ ಹಿನ್ನೆಲೆಯಲ್ಲಿ ● 7ನೇ ಪುಟಕ್ಕೆ

ಬಿ.ಎಸ್.ಯಡಿಯೂರಪ್ಪ ಪುತ್ರ
ಬಿ.ವೈ.ವಿಜಯೇಂದ್ರ ರಾಜ್ಯ ಬಿಜೆಪಿ ಸಾರಥಿ
ಯುವಶಕ್ತಿಗೆ ಮಣೆ ಹಾಕಿದ ಬಿಜೆಪಿ ವರಿಷ್ಠರು



ಅಪ್ಪಾ, ಸಿಹಿ ಸುದ್ದಿ....



ಸವಿ...



ಯಶಸ್ವಿಯಾಗು...

ಬೆಂಗಳೂರು, ನ.10–ಅಂತೂ–ಇಂತೂ ಕೊನೆಗೂ ಬಿಜೆಪಿ ವರಿಷ್ಠರು ಪಕ್ಷದ ರಾಜ್ಯಾಧ್ಯಕ್ಷರನ್ನು ನೇಮಕ ಮಾಡಿದ್ದಾರೆ. ಮಾಜಿ ಮುಖ್ಯಮಂತ್ರಿಗಳೂ ಆದ ಬಿಜೆಪಿ ಧುರೀಣ ಬಿ.ಎಸ್.ಯಡಿಯೂರಪ್ಪ ಪುತ್ರ ಶಿಕಾರಿಪುರ ಶಾಸಕ ಬಿ.ವೈ.ವಿಜಯೇಂದ್ರ ಅವರಿಗೆ ಪಕ್ಷದ ರಾಜ್ಯಾಧ್ಯಕ್ಷ ಸ್ಥಾನ ಒಲಿದಿದೆ. ತಕ್ಷಣದಿಂದಲೇ ಜಾರಿಗೆ ಬರುವಂತೆ ಬಿ.ವೈ.ವಿಜಯೇಂದ್ರ ಅವರನ್ನು ಕರ್ನಾಟಕ ಬಿಜೆಪಿಯ ರಾಜ್ಯಾಧ್ಯಕ್ಷರನ್ನಾಗಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ನೇಮಿಸಿದ್ದಾರೆ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯಾದ್ಯಂತ ಯುವಕರನ್ನು ಸೆಳೆಯುವ ವರ್ಚಸ್ಸು ಹೊಂದಿರುವ ವಿಜಯೇಂದ್ರ ಅವರನ್ನು ರಾಜ್ಯಾಧ್ಯಕ್ಷರಾಗಿ ನೇಮಕ ಮಾಡುವ ಮೂಲಕ ಬಿಜೆಪಿ ವರಿಷ್ಠರು ಯುವ ನಾಯಕನಿಗೆ ಮಣೆ ಹಾಕಿದ್ದಾರೆ. ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದ ಕಾರಣ ಕಳೆದ ವಿಧಾನಸಭಾ ಚುನಾವಣೆಯಲ್ಲಿ ವೀರಶೈವ ಲಿಂಗಾಯತರ ಮತಗಳು ಕೈತಪ್ಪಿವೆ ಎಂಬ ಮಾತುಗಳು ಕೇಳಿ ಬಂದಿದ್ದು, ಲೋಕಸಭಾ ಚುನಾವಣೆಯಲ್ಲಿ ಮತ್ತೆ ವೀರಶೈವ ಮತಗಳನ್ನು ಸೆಳೆಯುವ ನಿಟ್ಟಿನಲ್ಲಿ ಹಾಗೂ ಯಡಿಯೂರಪ್ಪ ಅವರು ಸಕ್ರಿಯವಾಗಿ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡಲು ಅವರ ಪುತ್ರನನ್ನೇ ರಾಜ್ಯಾಧ್ಯಕ್ಷರನ್ನಾಗಿ ಮಾಡಲಾಗಿದೆ ಎಂದು ವಿಶ್ಲೇಷಿಸಲಾಗಿದೆ. ಆದರೆ ವಿಜಯೇಂದ್ರ ತಮ್ಮ ತಂದೆಯ ಪ್ರಭಾವವನ್ನು ಹೊರತುಪಡಿಸಿ ತಮ್ಮದೇ ಆದ ಸಂಘಟನಾ ಶಕ್ತಿ ಹೊಂದಿದ್ದಾರೆ. ಅವರು ಶಿವಮೊಗ್ಗ ಜಿಲ್ಲೆಯವರಾದರೂ, ರಾಜ್ಯಾದ್ಯಂತ ತಮ್ಮದೇ ಆದ ಅಭಿಮಾನಿಗಳ ಪಡೆ ಹೊಂದಿದ್ದಾರೆ. ಇದಕ್ಕೆ ಉದಾಹರಣೆ ಎಂಬಂತೆ 2018ರಲ್ಲಿ ನಡೆದ ರಾಜ್ಯ ವಿಧಾನಸಭೆ ಚುನಾವಣೆ ವೇಳೆ ಮೈಸೂರು ಜಿಲ್ಲೆಯ ವರುಣ ಕ್ಷೇತ್ರದಲ್ಲಿ ಮಿಂಚಿನ ಸಂಚಾರ ನಡೆಸಿ ಅವರೇ ಅಭ್ಯರ್ಥಿ ಎಂದು ಪಕ್ಷದ ಕಾರ್ಯಕರ್ತರು ಬೀಗುವಂತೆ ಮಾಡಿದ್ದರು. ಕೊನೇ ಕ್ಷಣದಲ್ಲಿ ಅವರಿಗೆ ಟಿಕೆಟ್ ಕೈತಪ್ಪಿದಾಗ ಬಿಜೆಪಿ ಕಾರ್ಯಕರ್ತರು ಭಾರೀ ● 7ನೇ ಪುಟಕ್ಕೆ

ಶುಕ್ರವಾರ ವಿಪಕ್ಷ ನಾಯಕನ ಆಯ್ಕೆ

ವಿಧಾನಸಭಾ ಚುನಾವಣೆ ಮುಗಿದು 5 ತಿಂಗಳು ಕಳೆದರೂ ವಿಪಕ್ಷ ನಾಯಕನ ಆಯ್ಕೆ ಮಾಡಲು ಸಾಧ್ಯವಾಗಿಲ್ಲ ಎಂಬ ಟೀಕೆಗೆ ಗುರಿಯಾಗಿರುವ ಬಿಜೆಪಿ, ಮುಂದಿನ ಶುಕ್ರವಾರ ವಿಧಾನಸಭೆಗೆ ವಿಪಕ್ಷ ನಾಯಕನನ್ನು ಆಯ್ಕೆ ಮಾಡಲಿದೆ. ಬಿಜೆಪಿ ನೂತನ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಈ ವಿಷಯ ತಿಳಿಸಿದ್ದು, ವಿಪಕ್ಷ ನಾಯಕನ ಆಯ್ಕೆ ಬಗ್ಗೆ ಯಡಿಯೂರಪ್ಪ ಅವರು ಈಗಾಗಲೇ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಅವರೊಂದಿಗೆ ಚರ್ಚಿಸಿದ್ದಾರೆ. ಮುಂದಿನ ಶುಕ್ರವಾರ ಶಾಸಕಾಂಗ ಪಕ್ಷದ ಸಭೆ ಕರೆದು ವಿಧಾನಸಭೆ ವಿಪಕ್ಷ ನಾಯಕನನ್ನು ಆಯ್ಕೆ ಮಾಡಲಾಗುತ್ತದೆ. ಆ ಸಂದರ್ಭದಲ್ಲಿ ದೆಹಲಿಯಿಂದ ವೀಕ್ಷಕರು ಬೆಂಗಳೂರಿಗೆ ಆಗಮಿಸಲಿದ್ದಾರೆ ಎಂದರು.



ಲೋಕಸಭಾ ಚುನಾವಣೆ ಸವಾಲಾಗಿ ಸ್ವೀಕರಿಸಿದ್ದೇನೆ...

ಬೆಂಗಳೂರು, ನ.10–ತಮಗೆ ಪಕ್ಷದ ರಾಜ್ಯಾಧ್ಯಕ್ಷ ಸ್ಥಾನ ನೀಡಿದ ಬಿಜೆಪಿ ಹಿರಿಯ ನಾಯಕರಿಗೆ ಧನ್ಯವಾದ ಅರ್ಪಿಸಿರುವ ಬಿ.ವೈ.ವಿಜಯೇಂದ್ರ ಅವರು ಮುಂಬರುವ ಲೋಕಸಭಾ ಚುನಾವಣೆಯನ್ನು ಸವಾಲಾಗಿ ಸ್ವೀಕರಿಸಿದ್ದೇನೆ ಎಂದು ಘೋಷಿಸಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷರಾಗಿ ಘೋಷಣೆಯಾದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಮಗೆ ಪಕ್ಷ ಸಂಘಟನೆಯ ಬಹುದೊಡ್ಡ ಜವಾಬ್ದಾರಿಯನ್ನು ನೀಡಿದ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರಿಗೆ ಧನ್ಯವಾದ ಅರ್ಪಿಸುವುದಾಗಿ ತಿಳಿಸಿದರು. ಹೈಕಮಾಂಡ್ ನನ್ನ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ಧನ್ಯವಾದ ಹೇಳುತ್ತೇನೆ. ● 7ನೇ ಪುಟಕ್ಕೆ



“ಕರ್ನಾಟಕ ಬಿಜೆಪಿ ಪಕ್ಷದ ಅಧ್ಯಕ್ಷರಾಗಿ ನೇಮಕಗೊಂಡಿರುವ ಶಾಸಕ ಬಿ.ವೈ.ವಿಜಯೇಂದ್ರ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು ಮತ್ತು ಶುಭಾಶಯಗಳು. ಯುವ ನಾಯಕರಾಗಿ ಸಂಘಟನೆಯಲ್ಲಿ ಈಗಾಗಲೇ ಕ್ರಿಯಾಶೀಲರಾಗಿರುವ ಅವರಿಗೆ ಕಿರಿಯ ವಯಸ್ಸಿನಲ್ಲಿಯೇ ಬಹುದೊಡ್ಡ ಜವಾಬ್ದಾರಿ ಅರಸಿ ಬಂದಿದೆ. ತಮಗೆ ವಹಿಸಿರುವ ಈ ಗುರುತರ ಹೊಣೆಯನ್ನು ಅವರು ಸಮರ್ಥವಾಗಿ ನಿಭಾಯಿಸುತ್ತಾರೆ ಎಂಬ ವಿಶ್ವಾಸ ನನಗಿದೆ. ಶ್ರೀ ವಿಜಯೇಂದ್ರ ಅವರಿಗೆ ಶುಭವಾಗಲಿ ಎಂದು ಹಾರೈಸುತ್ತೇನೆ.

–ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಟ್ವೀಟ್

ಸಬ್ ಇನ್ಸ್‌ಪೆಕ್ಟರ್ ನೇಮಕಾತಿ ಮರು ಪರೀಕ್ಷೆಗೆ ಹೈಕೋರ್ಟ್ ಆದೇಶ

ಆ ಮೂಲಕ ಸರ್ಕಾರದ ಆದೇಶ ಎತ್ತಿ ಹಿಡಿದ ನ್ಯಾಯಾಲಯ



ಬೆಂಗಳೂರು, ನ.10(ಕೆಎಂಶಿ)–ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ನೇಮಕಾತಿ ಮರು ಪರೀಕ್ಷೆಗೆ ಆದೇಶಿಸಿ ಸರ್ಕಾರ ಹೊರಡಿಸಿದ್ದ ಸೂಚನೆಯನ್ನು ರಾಜ್ಯ ಹೈಕೋರ್ಟ್ ಎತ್ತಿ ಹಿಡಿದಿದೆ.

ಕಳೆದ ಒಂದೂವರೆ ವರ್ಷಗಳಿಂದ ಪಿಎಸ್‌ಐ ನೇಮಕಾತಿ ಗೊಂದಲಕ್ಕೆ ತೆರೆ ಎಳೆದಿರುವ ಹೈಕೋರ್ಟ್ 545 ಹುದ್ದೆಗಳ ನೇಮಕಾತಿಗೆ ನಡೆದ ಪರೀಕ್ಷೆ ಮತ್ತು ಬಳಿಕ ಪ್ರಕಟಿಸಿದ ನೇಮಕಾತಿ ಪಟ್ಟಿ ರದ್ದುಪಡಿಸಿ ಹೊಸದಾಗಿ ಪರೀಕ್ಷೆ ನಡೆಸಲು ನ್ಯಾಯಾಲಯ ಅವಕಾಶ ಮಾಡಿಕೊಟ್ಟಿದೆ. ಹಿಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಡಳಿತದಲ್ಲಿ ನೇಮಕಾತಿಗೆ ಸಂಬಂಧಿಸಿದಂತೆ ಭಾರೀ ಹಗರಣ ನಡೆದಿದೆ ಎಂಬ ದೂರಿನ ಹಿನ್ನೆಲೆಯಲ್ಲಿ ಪ್ರಕರಣವನ್ನು ಸಿಐಡಿಗೆ ವಹಿಸಿದ್ದ ಅಂದಿನ ಸರ್ಕಾರ, ಆಯ್ಕೆ ಪಟ್ಟಿಯನ್ನೇ ರದ್ದು ಮಾಡಿ ಮರು ಪರೀಕ್ಷೆಗೆ ಆದೇಶಿಸಿತ್ತು.

ಸರ್ಕಾರದ ಆದೇಶ ಪ್ರಶ್ನಿಸಿ ಕೆಲವರು ನ್ಯಾಯಾಲಯದ ಮೆಟ್ಟಿಲೇರಿದ್ದರು. ವಾದ–ಪ್ರತಿವಾದ ಆಲಿಸಿ ಇಂದು ತೀರ್ಪು ಪ್ರಕಟಿಸಿದ ನ್ಯಾಯಮೂರ್ತಿಗಳಾದ ಪಿ.ಎಸ್.ದಿನೇಶ್‌ಕುಮಾರ್ ಹಾಗೂ ಪಿ.ಜಿ. ಶಿವಶಂಕರೇಗೌಡ ಅವರನ್ನೊಳಗೊಂಡ ವಿಭಾಗೀಯ ಪೀಠ, ಸರ್ಕಾರದ ಆದೇಶವನ್ನು ಎತ್ತಿ ಹಿಡಿದು ಮರುಪರೀಕ್ಷೆ ನಡೆಸಲು ಅನುವು ಮಾಡಿಕೊಟ್ಟಿದೆ. ಮರು ಪರೀಕ್ಷೆ ಬೇಡ, ಕಳಂಕಿತರನ್ನು ಹೊರತುಪಡಿಸಿ ನೇಮಕಾತಿ ಪಟ್ಟಿ ಪ್ರಕಟಿಸಲು ಸರ್ಕಾರಕ್ಕೆ ಆದೇಶ ನೀಡುವಂತೆ ಮಾಡಿಕೊಂಡಿದ್ದ ಮನವಿಯನ್ನು ನ್ಯಾಯಾಲಯ ತಿರಸ್ಕರಿಸಿದೆ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅಧಿಕಾರಕ್ಕೆ ● 7ನೇ ಪುಟಕ್ಕೆ

ಹಿರಿಯ ಐಪಿಎಸ್ ಅಧಿಕಾರಿ ಸೇರಿ 110 ಜನರ ಬಂಧನವಾಗಿತ್ತು

ಹಗರಣಕ್ಕೆ ಸಂಬಂಧಿಸಿದಂತೆ ಹಿರಿಯ ಐಪಿಎಸ್ ಅಧಿಕಾರಿ ಅಮೃತ್ ಪಾಲ್ ಸೇರಿದಂತೆ 110 ಜನರನ್ನು ಬಂಧಿಸಲಾಗಿತ್ತು. ಇತ್ತೀಚೆಗಷ್ಟೆ ಅಮೃತ್‌ಪಾಲ್ ಅವರಿಗೆ ಜಾಮೀನು ದೊರೆತು ಹೊರಬಂದಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಎಡಿಜಿಪಿ ಮಟ್ಟದ ಅಧಿಕಾರಿಯೊಬ್ಬರು ಹಗರಣದಲ್ಲಿ ಸಿಲುಕಿ ಬಂಧನಕ್ಕೊಳಗಾಗಿದ್ದು ಇದೇ ಮೊದಲು.

ಹಾಸನಾಂಬೆ ದರ್ಶನಕ್ಕೆ ನಿಂತಿದ್ದ ಭಕ್ತರಿಗೆ ಕರೆಂಟ್ ಶಾಕ್:
ಆಘಾತದಲ್ಲಿ ನೂಕುನುಗ್ಗಲು, 17 ಮಂದಿ ಆಸ್ಪತ್ರೆಗೆ ದಾಖಲು



ಹಾಸನ: ಹಾಸನಾಂಬ ದೇಗುಲದಲ್ಲಿ ಶುಕ್ರವಾರ ಸರತಿ ಸಾಲಿನಲ್ಲಿ ದರ್ಶನಕ್ಕೆ ನಿಂತಿದ್ದಾಗ ವಿದ್ಯುತ್ ಶಾಕ್ ಆಘಾತದಿಂದ ಭಾರಿ ನೂಕು ನುಗ್ಗಲು ಉಂಟಾಗಿ 17 ಮಂದಿ ಭಕ್ತರು ಆಸ್ಪತ್ರೆಗೆ ದಾಖಲಾಗಿದ್ದಾರೆ.

ನೂಕು ನುಗ್ಗಲು ನಿರ್ವಹಿಸಲು ಬಳಸಿದ ಬ್ಯಾರಿಕೇಡ್‌ಗಳ ನಡುವೆ ಧರ್ಮ ದರ್ಶನಕ್ಕೆ ಭಾರೀ ಜನರು ನಿಂತಿದ್ದರು. ಆ ಸಂದರ್ಭದಲ್ಲಿ ಇದ್ದಕ್ಕಿದ್ದಂತೆ ವಿದ್ಯುತ್ ಶಾಕ್ ಅನುಭವವಾಗಿದೆ. ಕಬ್ಬಿಣದ ಬ್ಯಾರಿಕೇಡ್‌ಗಳ ಮೂಲಕ ವಿದ್ಯುತ್ ಸ್ಪರ್ಶವಾಗಿದ್ದಾಗಿ ಭಕ್ತರು ಹೇಳಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿದ್ಯುತ್ ಶಾಕ್ ಅನುಭವವಾಗುತ್ತಿದ್ದಂತೆಯೇ ಭಕ್ತರು ಏಕಾಏಕಿ ಸಿಕ್ಕಸಿಕ್ಕ ಕಡೆ ನುಗ್ಗಿ, ಓಡಲು ಆರಂಭಿಸಿದ್ದು, ಸಿಕ್ಕಿಹಾಕಿಕೊಂಡ ಹದಿ ನೇಳು ಮಂದಿಯನ್ನು ಬ್ಯಾರಿಕೇಡ್ ಗಳಿಂದ ಹೊರಕ್ಕೆ ಸ್ಥಳಾಂತರಿಸಲಾಯಿತು. ಮಹಿಳೆಯರು ಸೇರಿದಂತೆ ಎಲ್ಲರನ್ನು ತಕ್ಷಣ ಹತ್ತಿರದ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ಅವರಲ್ಲಿ ನಾಲ್ವರಿಗೆ ಗಾಯಗಳಾಗಿದ್ದರೆ, ಉಳಿದವರು ಆರೋಗ್ಯವಾಗಿದ್ದಾರೆ ಎಂದು ಹಾಸನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ತಿಳಿಸಿದ್ದಾರೆ. ಬ್ಯಾರಿಕೇಡ್‌ಗಳ ನಡುವೆ ನಿಂತಿದ್ದಾಗ ಕರೆಂಟ್ ಶಾಕ್ ಹೊಡೆಯಿತು ಎಂದು ಹೇಳಿದವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಯಾವುದೇ ಕಾಲ್ತುಳಿತ ಸಂಭವಿಸಿಲ್ಲ, ಇದು ಕೇವಲ ಗದ್ದಲವಾಗಿದೆ ಎಂದು ಅವರು ಸ್ಪಷ್ಟಪಡಿಸಿದರು.

ಭಕ್ತರು ನಿಜವಾಗಿಯೂ ವಿದ್ಯುತ್ ಆಘಾತಕ್ಕೆ ಒಳಗಾಗಿದ್ದಾರೆಯೇ ಎಂಬುದು ಸ್ಪಷ್ಟವಾಗಿಲ್ಲ.ಈ ಸಂಬಂಧ ಚೆಸ್ಕಾಂ ಅಧಿಕಾರಿಗಳು ವಸ್ತುಸ್ಥಿತಿಯನ್ನು ಪರಿಶೀಲಿಸುತ್ತಿದ್ದಾರೆ. ಗದ್ದಲದಲ್ಲಿ ಕೆಲ ಮಹಿಳೆಯರಿಗೆ ಸಣ್ಣಪುಟ್ಟ ● 7ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಭಾಷಣಕಾರ : "ನಾನು ತುಂಬಾ ಹೊತ್ತು ಮಾತನಾಡಿದೆ. ನನ್ನ ಮಾತನ್ನು ಈಗ ಮುಗಿಸುತ್ತೇನೆ"
ಕೇಳುಗರು : "ನಿಲ್ಲಿಸಬೇಡಿ ದಯವಿಟ್ಟು ಮುಂದುವರಿಸಿ ಸಾರ್"
ಭಾಷಣಕಾರ : "ಏನು, ನನ್ನ ಭಾಷಣ ಅಷ್ಟು ಇಷ್ಟವಾಯಿತೇ?"
ಕೇಳುಗರು : "ಹಾಗೇನಿಲ್ಲ ಸಾರ್, ಹೊರಗೆ ಇನ್ನೂ ಮಳೆಯಾಗ್ತಾನೇ ಇದೆ."

ಮೈಸೂರು ಮಿತ್ರ
ಶನಿವಾರ, 11 ನವೆಂಬರ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಒಬ್ಬ ವ್ಯಕ್ತಿಯನ್ನು ಪರಿಪೂರ್ಣಗೊಳಿಸುವುದೆಂದರೆ ಆತನಿಗೆ ಬರುವ ಕಷ್ಟಗಳು, ಅಡ್ಡಿ ಆತಂಕಗಳು –ಮ್ಯಾಥ್ಯು

ವೇದ ಸುಳ್ಳಾದರೂ { ಫಲವಿದ್ದಲ್ಲಿ
ಗಾದೆ ಸುಳ್ಳಾಗದು { ಪರದಾಟವಾದರೂ ಲೇಸು

ನಿಮ್ಮ ಪತ್ರಗಳು

ಎಳೆಯದಿರಿ ಬರದ ಮೇಲೆ ಬರೆ

ಮಾನ್ಯರೆ,

ಹತ್ತು ಹಲವು ಲೋಪ, ತೇಪೆಗಳ ನಡುವೆ, ಕೋಟಿಗಟ್ಟಲೆ ಖರ್ಚು ಮಾಡಿ ರಾಜ್ಯ ಸರ್ಕಾರದ ಸಚಿವ ಮಹೋದಯರ ಘನ ಸಾರಥ್ಯದಲ್ಲಿ ಯಶಸ್ವಿಯಾಗಿ ಸಂಪನ್ನಗೊಂಡ ನಾಡಹಬ್ಬ ದಸರಾದ ಗುಂಗಿನಲ್ಲಿದ್ದ ರಾಜ್ಯ ಸರ್ಕಾರ ಇನ್ನಾದರೂ ಎಚ್ಚೆತ್ತು ಶೀಘ್ರ ರಾಜ್ಯದ ಅನ್ನದಾತರ ಕಡೆ ಗಮನಹರಿಸಬೇಕಿದೆ.

ರಾಜ್ಯಾದ್ಯಂತ ವಾಡಿಕೆಯಂತೆ ಮಳೆಯಾಗದೆ ಮುಂಗಾರು ಹಾಗೂ ಹಿಂಗಾರು ಸಂಪೂರ್ಣ ಕೈಕೊಟ್ಟಿದ್ದು, ಕಾವೇರಿ ಕೊಳ್ಳದ ಬೇಸಿಗೆ ಬೆಳೆಗಳಿಗೆ ನೀರಿನ ಕೊರತೆ ಇರುವ ಕಾರಣ ರಾಜ್ಯದ ರೈತಾಪಿ ವರ್ಗ ಸಂಕಷ್ಟದಲ್ಲಿ ಪರಿತಪಿಸುವಂತಾಗಿದೆ.

ರಾಜ್ಯದ ಬಹುತೇಕ ಎಲ್ಲಾ ತಾಲೂಕುಗಳಲ್ಲೂ ಬರದ ಛಾಯೆ ಆವರಿಸಿದ್ದು, ಬರದ ಮೇಲೆ ಬರೆ ಎಳೆಯದಂತೆ ರಾಜ್ಯ ಸರ್ಕಾರ ಶೀಘ್ರ ಅನ್ನದಾತರ ನೆರವಿಗೆ ಬಂದು ಪರಿಹಾರ ಇತ್ಯಾದಿಗಳನ್ನು ನೀಡಿ ಸಂಕಷ್ಟದಲ್ಲಿರುವ ಅನ್ನದಾತನಿಗೆ ಸಂಜೀವಿನಿಯಾಗಲಿ ಎಂದು ಆಶೀಸೋಣ.

–ಎಂ.ಎನ್ ತುಕಾರಾಮ್ ರಾವ್, ಪ್ರಜ್ಞಾವಂತ ನಾಗರೀಕ ಬಳಗ, ಮೈಸೂರು.

ಯುವರಾಜ, ಮಹಾರಾಜ ಮಹಿಳಾ ವಿದ್ಯಾರ್ಥಿನಿಲಯದಲ್ಲಿ ಅವ್ಯವಸ್ಥೆ

ಮಾನ್ಯರೆ,

ಮೈಸೂರು ಯುವರಾಜ ಮತ್ತು ಮಹಾರಾಜ ಮಹಿಳಾ ವಿದ್ಯಾರ್ಥಿನಿಲಯದಲ್ಲಿ ಸರಿಯಾದ ವ್ಯವಸ್ಥೆಗಳು ಇಲ್ಲದ ಕಾರಣ ವಿದ್ಯಾರ್ಥಿಗಳು ತುಂಬಾ ಕಷ್ಟ ಅನುಭವಿಸುವಂತಾಗಿದೆ. ಅದರಲ್ಲೂ ಯುವರಾಜ ವಿದ್ಯಾರ್ಥಿನಿಲಯದಲ್ಲಿ ಗೀಸರ್, ಫ್ಯಾನ್ ಮತ್ತು ರೂಮ್‌ನಲ್ಲಿ ಲೈಟ್ ಇಲ್ಲದ ಕಾರಣ ರಾತ್ರಿ ವೇಳೆಯಲ್ಲಿ ತಿರುಗಾಡಲು ವಿದ್ಯಾರ್ಥಿಗಳು ಭಯಪಡುವಂತಾಗಿದೆ. ಗೀಸರ್ ಇಲ್ಲದ ಕಾರಣ ವಿದ್ಯಾರ್ಥಿಗಳು ತಣ್ಣನೆಯ ನೀರಿನಲ್ಲಿ ಸ್ನಾನ ಮಾಡಿ ಅರೋಗ್ಯದಲ್ಲಿ ಸಮಸ್ಯೆ ಉಂಟಾಗುತ್ತಿದೆ. ಈ ಸಮಸ್ಯೆಯನ್ನು ವಿದ್ಯಾರ್ಥಿಗಳು ಕಳೆದ ಏಳು ತಿಂಗಳುಗಳಿಂದ ಅನುಭವಿಸುತ್ತಿದ್ದಾರೆ. ಇದರ ಬಗ್ಗೆ ಕಚೇರಿಗೆ ಹಲವು ಬಾರಿ ಪತ್ರ ಬರೆದಿದ್ದರೂ ಏನೂ ಪ್ರಯೋಜನವಾಗಿಲ್ಲ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ಸಮಸ್ಯೆಗಳನ್ನು ಆದಷ್ಟು ಬೇಗ ಪರಿಹರಿಸಬೇಕೆಂದು ಮನವಿ.

–ಎಂ. ಚೈತ್ರ, ಪತ್ರಿಕೋದ್ಯಮ ಮತ್ತು ಸಂವಹನ ಸಮೂಹ ವಿಭಾಗ, ಮಹಾರಾಜ ಕಾಲೇಜು ಮೈಸೂರು.

ವಿಮಾ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಿ

ಮಾನ್ಯರೆ,

ಇತ್ತೀಚೆಗೆ ಪ್ರಾಣಿ–ಮಾನವ ಸಂಘರ್ಷದಲ್ಲಿ ಕೊಡಗು, ಹಾಸನ ಮತ್ತು ಮೈಸೂರು ಜಿಲ್ಲೆಗಳಲ್ಲಿ ಸಾಲು ಸಾಲು ಸಾವು ಘಟಿಸುತ್ತಿವೆ. ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವ ಎಂ.ಶಿವಣ್ಣನವರು, ಸಿಎಂ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಪರಿಹಾರ ಕಲ್ಪಿಸದಿದ್ದಲ್ಲಿ ಬೃಹತ್ ಹೋರಾಟ ಮಾಡುವುದಾಗಿ ಹೇಳಿದ್ದಾರೆ. ಹಾಗೂ ಪ್ರಾಣಿ ದಾಳಿಯಿಂದ ಮೃತಪಟ್ಟ ಕುಟುಂಬಗಳಿಗೆ 50 ಲಕ್ಷ ರೂ.ಪರಿಹಾರ ನೀಡಬೇಕೆಂದು ಒತ್ತಾಯಿಸಿದ್ದಾರೆ. ಅದೆಷ್ಟೇ ಪರಿಹಾರ ನೀಡಿದರೂ ಜೀವಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಆದರೆ ಇಷ್ಟು ಮೊತ್ತದ ಪರಿಹಾರ ನೀಡಲು ಸರ್ಕಾರಕ್ಕೆ ಕಷ್ಟವಾಗಬಹುದು. ಆದ್ದರಿಂದ ಸರ್ಕಾರ ವಿಮಾ ಸಂಸ್ಥೆಗಳೊಂದಿಗೆ ವಲಯವಾರು ಅಥವಾ ರಾಜ್ಯ ಮಟ್ಟದಲ್ಲಿ ಒಡಂಬಡಿಕೆ ಮಾಡಿಕೊಂಡರೆ ಪರಿಹಾರ ಕೊಡಲು ಸರ್ಕಾರಕ್ಕೂ ಹೆಚ್ಚಿನ ಹೊರೆಯಾಗುವುದಿಲ್ಲ. ಈ ಬಗ್ಗೆ ಸರ್ಕಾರ ಹಾಗೂ ಅರಣ್ಯ ಇಲಾಖೆ ಚಿಂತಿಸಲಿ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಹಿಂಬಾಗಿಲ ಮೂಲಕ ಅಕ್ರಮಕ್ಕೆ ಆಸ್ಪದ ಮಾಡಿಕೊಡುವ ಪರಿ ಇದಲ್ಲವೇ?

ಮಾನ್ಯರೆ,




ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ಅಲ್ಲಿನ ಅಧಿಕಾರಿಗಳು ಹಾಗೂ ಸಿಬ್ಬಂದಿ ಶಾಮೀಲಾಗಿ ನಡೆದಿರುವಂತಹ ಮಹಾ ಅಕ್ರಮಗಳ ಹಿನ್ನೆಲೆಯಲ್ಲಿ, 2020ರ ಸೆ.14ರ ಮುಡಾ ಸಭೆಯಲ್ಲಿ ಕೈಗೊಂಡ ವಿಷಯ ಸಂಖ್ಯೆ 18ರ ನಿರ್ಣಯವನ್ನು ರದ್ದು ಮಾಡುವ ಆದೇಶ ಹೊರಬಿದ್ದಿದ್ದು, ಇದರನ್ವಯ 50:50 ಅನುಪಾತದಡಿ ಮಂಜೂರಾಗಿದ್ದ ಸಾವಿರಕ್ಕೂ ಅಧಿಕ ನಿವೇಶನಗಳ ಮಂಜೂರಾತಿ ರದ್ದುಮಾಡಲಾಗಿದೆ.

ಇದೊಂದು ರೀತಿ ಹಿಂಬಾಗಿಲ ಮೂಲಕ ಅಕ್ರಮಕ್ಕೆ ಸಹಾಯ ಮಾಡುವ ಕ್ರಮದಂತೆ ಕಂಡು ಬರುತ್ತಿದೆ. ಕಾರಣ, ಮುಡಾದ ಈ ನಿರ್ಣಯ ಪ್ರಶ್ನಿಸಿ ನಿವೇಶನ ಪಡೆದವರು ಕೋರ್ಟ್ ಮೊರೆ ಹೋಗುತ್ತಾರೆ. ಆ ವೇಳೆ ಇದೇ ಮುಡಾ ಅಧಿಕಾರಿಗಳು ಕೋರ್ಟ್‌ಗೆ ಸರಿಯಾದ ದಾಖಲೆ ನೀಡುವುದಿಲ್ಲ. ಮೇಲಾಗಿ ಹಾಜರಾಗಿ ಮುಡಾ ಪರ ದಾಖಲೆ, ಹೇಳಿಕೆ ಸಲ್ಲಿಸುವುದೇ ಇಲ್ಲ. ಪರಿಸ್ಥಿತಿ ಹೀಗಾದರೆ ಇನ್ನೆಲ್ಲಿಂದ ಮುಡಾ ನಿರ್ಧಾರ ಊರ್ಜಿತವಾಗುತ್ತದೆ. ಆರೋಪಿಗಳಿಗೆ ಶಿಕ್ಷೆ ಆಗುತ್ತದೆ. ಎಲ್ಲವೂ ವ್ಯರ್ಥ.

ಈ ಹಿಂದೆ ಇಂತಹ ನೂರಾರು ಪ್ರಕರಣಗಳಿವೆ. ನಕಲಿ ದಾಖಲೆ ಸೃಷ್ಟಿಸಿ, ಕಬಳಿಸಿದ ನಿವೇಶನದ ಮಂಜೂರಾತಿ ರದ್ದುಪಡಿಸಿ, ಮುಡಾ ತನ್ನ ವಶಕ್ಕೆ ಪಡೆದ ನಿವೇಶನ ಸಂಬಂಧ, ಮುಡಾ ನಿರ್ಧಾರ ಪ್ರಶ್ನಿಸಿ ಹಲವರು ಕೋರ್ಟ್‌ಗೆ ಹೋದರು. ಆದರೆ ಇಂತಹ ಪ್ರಕರಣಗಳಲ್ಲಿ ಸಂಬಂಧಿಸಿದ ಅಧಿಕಾರಿಗಳು ಕೋರ್ಟ್‌ಗೆ ಹಾಜರಾಗದೇ, ದಾಖಲೆಯನ್ನು ಸಲ್ಲಿಸದೇ ಪರೋಕ್ಷವಾಗಿ ಅಕ್ರಮಕ್ಕೆ ಅವಕಾಶ ಮಾಡಿಕೊಟ್ಟರು. ಹಾಗಾಗಿ ಇಂತಹ ನಿವೇಶನಗಳು ಮತ್ತೆ ಮುಡಾ ಕೈಬಿಟ್ಟು ಹೋಗಿರುವ ನೂರಾರು ಪ್ರಕರಣಗಳಿವೆ. ಇಂತಹ ನಿವೇಶನಗಳಲ್ಲಿ ಬೃಹತ್ ಷಾಪಿಂಗ್ ಮಹಲ್‌ಗಳು, ಕಾಂಪ್ಲೆಕ್ಸ್‌ಗಳು ತಲೆ ಎತ್ತಿವೆ. ಅವುಗಳಿಂದ ಪ್ರತಿ ತಿಂಗಳು ಲಕ್ಷ ಲಕ್ಷ ಬಾಡಿಗೆ ಪೀಕುತ್ತಿದ್ದಾರೆ. ಜಿಲ್ಲಾಧಿಕಾರಿಗಳು ಇಂತಹ ಪ್ರಕರಣಗಳ ಬಗ್ಗೆಯೂ ತನಿಖೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಬೇಕು. ಆಗ ನೂರಲ್ಲ, ಸಾವಿರಾರು ಕೋಟಿ ಹಗರಣ ನಡೆದಿರುವುದು ಬಯಲಿಗೆ ಬರುತ್ತದೆ. ಹಲವು ದಶಕದಿಂದ ನಿವೇಶನಕ್ಕೆ ಅರ್ಜಿ ಹಾಕಿ ಕಾದಿರುವ ನತದೃಷ್ಟ ಫಲಾನುಭವಿಗಳಿಗೆ ಸಮಾಧಾನವಾಗುತ್ತದೆ.


– ನವೀನ್ ಕುಮಾರ್, ವಿಜಯನಗರ, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ಬದುಕ ಬದಲಿಸುವ ಹಂತಗಳು !!



ನಾವು ಏನೋ ಆಗಬೇಕು ಅಂದುಕೊಂಡಿದ್ದೆವು, ಆದರೆ ಅದೇನೋ ಆಗಿ ಹೋಯಿತು ಎಂದು ಹೇಳುವವರು ಸಾಕಷ್ಟು ಮಂದಿ ನಮಗೆ ದೊರಕುತ್ತಾರೆ. ಹಾಗೆ ಹೇಳುವವರು ನಾವೂ ಒಬ್ಬರಾಗಿರಬಹುದು! ಕೆಲವರಿಗೆ ಮಂದೆ ಸಿಕ್ಕಿದ ಅವಕಾಶಗಳು ಅವರ ಬದುಕಿನ ರೀತಿಯನ್ನೇ ಬದಲಿಸಿ ಅದೃಷ್ಟ ತಂದಿರಬಹುದು. ಕೆಲವರಿಗೆ ಅದು ದುರಾದೃಷ್ಟವೂ ಆಗಿರಬಹುದು. ಒಬ್ಬರಿಗೆ ಒಲಿದಿದ್ದು ಮತ್ತೊಬ್ಬರಿಗೆ ಒಲಿಯದಿರಬಹುದು. ಒಂದು ಶಾಲೆ, ಒಂದು ಕಚೇರಿಯಲ್ಲಿ ಕೆಲಸ ಮಾಡುವವರೆಲ್ಲಾ ಒಂದೇ ಸಮನಾದ ಸಂತೋಷವನ್ನು ಅನುಭವಿಸುವುದಿಲ್ಲ. ಕೆಲವರಿಗೆ ತಾವು ಮಾಡುತ್ತಿರುವ ಕೆಲಸ ತಮಗೆ ಸೂಕ್ತವಾದುದಲ್ಲ ಎನಿಸಿ ನಿರುತ್ಸಾಹದಿಂದ, ಯಾಂತ್ರಿಕವಾಗಿ ಆ ಕೆಲಸ ಮಾಡುತ್ತಿರುತ್ತಾರೆ. ಮತ್ತೆ ಕೆಲವರು ನನಗೆ ದೊರಕಿದ ಕೆಲಸಕ್ಕೆ ನಾನು ಗೌರವ ಕೊಡಬೇಕು, ಅದರಲ್ಲೇ ಏನನ್ನಾದರೂ ಸಾಧಿಸಬೇಕು ಎಂದು ಅನ್ನಿಸಿ ಅದರಲ್ಲಿಯೇ ಸಂತೃಪ್ತಿ ಕಾಣುತ್ತಾ ಆ ಕೆಲಸವನ್ನು ಗೌರವಿಸುತ್ತಾರೆ.

ಇತ್ತೀಚೆಗೆ ನಾನು ಭಾಗವಹಿಸಿದ್ದ ಒಂದು ಸಭೆಯಲ್ಲಿ ಚರ್ಚೆಯಾದ ವಿಷಯ 'ನಾನು ಮೆಚ್ಚಿದ ಶಿಕ್ಷಕ' ಎಂಬುದು. ಅದರಲ್ಲಿ ಸುಮಾರು ಇಪ್ಪತ್ತು ಜನರು ಭಾಗವಹಿಸಿದ್ದರು. ಎಲ್ಲರೂ ವಿಷಯದ ಬಗ್ಗೆ ಮಾತನಾಡಲೇಬೇಕು ಎಂದು ತಿಳಿಸಲಾಗಿತ್ತು. ಹಾಗಾಗಿ ಸರದಿಯ ಮೇಲೆ ಎಲ್ಲರೂ ಮಾತನಾಡಿದರು. ಅದರಲ್ಲಿ ಅನೇಕರು ವಿವಿಧ ಕೆಲಸಗಳನ್ನು ಮಾಡಿ ನಿವೃತ್ತಿ ಹೊಂದಿದವರು ಇದ್ದರು. ಕೆಲವರು ಮಾತ್ರ ಮಧ್ಯ ವಯಸ್ಸಿನವರು. ಅವರಲ್ಲಿ ಪದವೀಧರರು, ಸ್ನಾತಕೋತ್ತರ ಪದವಿ ಪಡೆದವರೂ ಇದ್ದರು. ಆ ಸಭೆಯಲ್ಲಿ ಮಾತನಾಡಿದ ಎಲ್ಲರೂ ನೆನಪಿಸಿಕೊಂಡಿದ್ದು ಮಾತ್ರ ತಮ್ಮ ಪ್ರಾಥಮಿಕ ಶಾಲೆಯ ಶಿಕ್ಷಕರನ್ನು. ಅವರೆಲ್ಲಾ ಪ್ರಾಥಮಿಕ ಶಾಲೆ ಮುಗಿಸಿ ಮೂರ್‍ನಾಲ್ಕು ದಶಕಗಳು ಮುಗಿದಿದ್ದರೂ, ಅವರಿಗೆ ತಮ್ಮ ಪ್ರಾಥಮಿಕ ಶಾಲೆಯ ಶಿಕ್ಷಕರ ಹೆಸರು, ಅವರು ಪಾಠ ಮಾಡುತ್ತಿದ್ದ ರೀತಿ, ಅವರ ನಡಿಗೆ, ನಡವಳಿಕೆ ಎಲ್ಲವೂ ನೆನಪಲ್ಲಿ ಇತ್ತು. ಕೆಲವರಿಗೆ ಇಂತಹ ಇಬ್ಬರು, ಮೂವರು ಶಿಕ್ಷಕರು ನೆನಪಲ್ಲಿ ಉಳಿದಿದ್ದರು. ವಿಶೇಷ ಎಂದರೆ ಯಾರೂ ತಮ್ಮ ಕಾಲೇಜಿನಲ್ಲಿ ಪಾಠ ಮಾಡಿದ ಶಿಕ್ಷಕರನ್ನು ನೆನೆಸಿಕೊಳ್ಳಲಿಲ್ಲ. ಕಾರಣ ಅವಲೋಕಿಸಿದಾಗ ಕಂಡದ್ದು, ನಮ್ಮ ಮೇಲೆ ಹೆಚ್ಚು ಪರಿಣಾಮ ಬೀರಿದವರು ನಮ್ಮ ಪ್ರಾಥಮಿಕ ಶಾಲೆಯ ಶಿಕ್ಷಕರೇ ಆಗಿರುತ್ತಾರೆ ಎಂಬುದು. ಅಂದರೆ ಪ್ರಾಥಮಿಕ ಶಾಲಾ ಶಿಕ್ಷಕ ಕೆಲಸ ಕನಿಷ್ಠವಲ್ಲ. ಅವರು ವಿದ್ಯಾರ್ಥಿಗಳ ಮೇಲೆ ಜೀವನಪರ್ಯಂತ ಪ್ರಭಾವ ಬೀರಿರುತ್ತಾರೆ. ಕೆಲವರಂತೂ ಅವರಂತೆ ನಾನೂ ಪ್ರಾಥಮಿಕ ಶಾಲೆಯ ಶಿಕ್ಷಕನಾಗಿ ಮತ್ತಷ್ಟು ಮಕ್ಕಳ ಮೇಲೆ ಪರಿಣಾಮ ಬೀರಬಹುದಾಗಿದ್ದ ಕೆಲಸ ಮಾಡಲಿಲ್ಲವಲ್ಲಾ ಎಂಬ ಕೊರಗು ಈಗಲೂ ಇದೆ ಎಂದು ಹೇಳಿದರು.

ಹೀಗೆ ನಮ್ಮ ಜೀವನದಲ್ಲಿ ಹಲವರು ಪ್ರಭಾವ ಬೀರಿರುತ್ತಾರೆ. ಅವರು ಉನ್ನತ ಶಿಕ್ಷಣ ಪಡೆದವರು, ಜ್ಞಾನಿಗಳೇ ಆಗಬೇಕೆಂದಿಲ್ಲ. ಅವರ ಯಾವುದೋ ನಡೆ ನಮಗೆ ಮಾದರಿ ಎನಿಸಿಬಿಟ್ಟಿರುತ್ತದೆ. ಅದರ ಪ್ರಭಾವ ಇಡೀ ಜೀವನದಲ್ಲಿ ಮರೆಯಲಾಗದ ಛಾಪು ಮೂಡಿಸಿರುತ್ತದೆ. ಆ ಪ್ರಾಥಮಿಕ ಶಾಲೆಯ ಶಿಕ್ಷಕರು ತಾವು ಮಕ್ಕಳ ಮೇಲೆ ಹೀಗೆ ಪರಿಣಾಮ ಬೀರುವಂತೆ ಇದ್ದೇವೆ ಎಂಬ ಕಲ್ಪನೆಯೇ ಇಲ್ಲದೆ, ತಮಗೆ ವಹಿಸಿದ ಕೆಲಸವನ್ನು ಮಾಡಿರುತ್ತಾರೆ. ಅದನ್ನೇ ನಿಸ್ವಾರ್ಥ ಸೇವೆ ಎಂದು ಹೇಳುವುದು. ಅಂತಹವರು ನೀವು ಜೀವನದಲ್ಲಿ ಹೀಗೇ ಇರಬೇಕು ಎಂದೇನು ಹೇಳಿಕೊಟ್ಟಿರುವುದಿಲ್ಲ, ಹಾಗೆ ಹೇಳಿದರೆ ಅರ್ಥವಾಗುವ ವಯಸ್ಸೂ ಮಕ್ಕಳದ್ದು ಆಗಿರುವುದಿಲ್ಲ. ಆದರೆ ಅವರು ಬೀರಿದ ಪ್ರಭಾವ ಮಾತ್ರ ಅಗಾಧವಾಗಿರುತ್ತದೆ.

ನಾವು ಮಾಡುವ ಕೆಲಸವನ್ನು ಪ್ರೀತಿಸಬೇಕು. ನನಗೆ ಬೇರೆ ದಾರಿಯಿಲ್ಲ, ಇಲ್ಲೇ ಇದ್ದು ಏನನ್ನಾದರೂ ಮಾಡಬೇಕು ಎಂಬ ಮನಸ್ಥಿತಿ ಹೊಂದಿದವರು ಕೆಲಸದಲ್ಲಿ ಯಶ ಕಾಣುತ್ತಾರೆ. ನಾನು ಒಪ್ಪಿರುವ ಈ ಕೆಲಸವನ್ನು ನಾನು ಒಲವಿನಿಂದ ಮಾಡುತ್ತೇನೆ ಎಂದುಕೊಂಡಾಗ ನಮಗೆ ಹಲವು ಹೊಸತುಗಳು ಕಂಡುಬರುತ್ತವೆ. ಅವನ್ನೂ ಒಪ್ಪಿ ಕೆಲಸದಲ್ಲಿ ಅಳವಡಿಸಿಕೊಂಡರೆ ಅದು ಖಂಡಿತವಾಗಿ ಮುಂದಿನ ಪೀಳಿಗೆಗೆ ಉತ್ತಮ ಸಂದೇಶ ನೀಡುತ್ತದೆ. ಆದರೆ ನನಗೆ ಬೇರೆ ಕೆಲಸ ಸಿಗುವುದಿಲ್ಲ ಎಂಬ ನಿರಾಶೆಯಿಂದ ಈಗ ಸಿಕ್ಕಿರುವ ಕೆಲಸವನ್ನು ವಿಶ್ವಾಸದಿಂದ ಮಾಡದೆ ಹೋದರೆ ಅದು ಸ್ವಯಂಕೃತ ಅಪರಾಧ ಎನ್ನಿಸುತ್ತದೆ. ಜೀವನ ನಿರರ್ಥಕ ಎನ್ನಿಸುತ್ತದೆ.

ನಾವು ಅನೇಕ ಸಲ ನಮ್ಮ ಕೆಲಸದಲ್ಲಿ ಸೋಲು ಕಂಡಿರಬಹುದು. ಆದರೆ ಆಶಾ ಭಾವನೆ ಬಿಡಬಾರದು. ನಮಗೆ ಯಾವುದೋ ಹಂತದಲ್ಲಿ ಒಂದು ಸ್ಫೂರ್ತಿ ನೀಡುವ ಘಟನೆ ಸಂಭವಿಸಬಹುದು, ಅದರಲ್ಲಿ ನಾನು ಯಶಸ್ವಿಯಾಗಬಹುದು ಎಂಬ ಆಶಾ ಭಾವನೆ ಹೊಂದಿರಬೇಕು. ಅಂತಹ ಒಂದು ಘಟನೆಯನ್ನು ನೆನಪಿಸಿಕೊಳ್ಳುವುದು ಉತ್ತಮ. ಒಬ್ಬ ಶಾಲಾ ಶಿಕ್ಷಕನ ಕಥೆಯದು. ಅವನು ತನ್ನ ಪದವಿ ಪಡೆದ ನಂತರ ಹಲವು ಕಡೆ ಕೆಲಸಕ್ಕೆ ಪ್ರಯತ್ನಿಸಿದ್ದ. ಯಾವುದೇ ಕೆಲಸ ಸಿಗಲಿಲ್ಲ. ಅವನಲ್ಲಿ ನಿರಾಸೆ ಮನೆ ಮಾಡಿತ್ತು. ಕೊನೆಗೆ ಅವನು ಇಷ್ಟ ಪಡದಿದ್ದ, ಒಂದು ಖಾಸಗಿ ಶಾಲೆಯ, ಶಿಕ್ಷಕನ ಕೆಲಸ ದೊರಕಿತು. ಅವನಿಗೆ ಮಕ್ಕಳೊಡನೆ ಹೇಗಿರಬೇಕು ಎಂಬುದೇ ತಿಳಿದಿರಲಿಲ್ಲ. ಹಾಗಾಗಿ ನಿತ್ಯದ ಒದ್ದಾಟವಾಗಿತ್ತು. ಆ ಒದ್ದಾಟದ ಸಮಯದಲ್ಲಿ ಅವನಿಗೆ ಮದುವೆಯಾಯಿತು. ಆ ಪತ್ನಿ ಸ್ಫೂರ್ತಿದಾಯಕ ಗುಣದವಳು. ಅವಳು ಇವನು ಶಾಲೆಯಿಂದ ಮಕ್ಕಳ ಮೇಲೆ ದೂರು ಹೊತ್ತು ಬಂದಾಗ ಸಮಾಧಾನ ಮಾಡುತ್ತಿದ್ದಳು. ಅವಳಿಂದಾಗಿ ಅವನಿಗೆ ಸ್ವಲ್ಪ ಸ್ಫೂರ್ತಿ ಬಂದಿತು. ಆದರೆ ದುರದೃಷ್ಟ ಇವನನ್ನು ಆ ಶಾಲೆಯವರು ಕೆಲಸದಿಂದ ತೆಗೆದು ಹಾಕಿದರು. ಆಗಲೂ ಪತ್ನಿ ಅವನನ್ನು ಸಮಾಧಾನ ಮಾಡಿದಳು. ಅವಳು ದುಡಿಯುತ್ತಿದ್ದ ಹಣದಿಂದ ಅವರ ಜೀವನ ನಡೆಯುತ್ತಿತ್ತು. ಅವನಿಗೆ ನಿರಾಸೆಯ ಮೇಲೆ ನಿರಾಸೆ. ಇಂತಹ ಸ್ಥಿತಿಯಲ್ಲಿ ಒಮ್ಮೆ ಅವನು ಒಂದು ಬಸ್ ನಿಲ್ದಾಣದಲ್ಲಿ ತಲೆ ತಗ್ಗಿಸಿ ಮಂಪರಿನಲ್ಲಿ ಕುಳಿತಿದ್ದ. ಆಗ ಒಂದು ಪುಟ್ಟ ಮಗು ಅವನ ಬೆನ್ನಿನ ಮೇಲೆ ರಪರಪನೆ ಹೊಡೆಯುತ್ತಿದ್ದಾಗ ಅವನಿಗೆ ಎಚ್ಚರವಾಯಿತು. ಮಗುವನ್ನು ಹಿಡಿದು ಹೊಡೆಯಬೇಕು ಎನ್ನಿಸಿತು. ಆದರೆ ಆ ಮಗು ಬುದ್ಧಿಮಾಂದ್ಯ ಮಗು ಎಂದು ಗೊತ್ತಾಯಿತು. ಅದರ ತಾಯಿ ಓಡಿ ಬಂದು ಕ್ಷಮೆ ಕೇಳಿದಳು. ಇವನ ಮನಸ್ಸು ಚುರ್ ಎಂದಿತು. ಆ ಮಗುವನ್ನು ಎತ್ತಿಕೊಂಡ. ಅದು ಎಲ್ಲೋ ನೋಡುತ್ತಿತ್ತು. ಒಂದಷ್ಟು ಹೊತ್ತು ಆ ಮಗುವಿನೊಡನೆ ಕಳೆದ. ಅದೇನೋ ಮನಸ್ಸಿನ ಭಾರ ಕಡಿಮೆಯಾದಂತೆ ಅನಿಸಿತು. ಆ ಮಗು ಮತ್ತು ತಾಯಿ ತನ್ನ ಮನೆಯ ಸಮೀಪದಲ್ಲೇ ಇರುವುದು ಅವನಿಗೆ ಗೊತ್ತಾಯಿತು. ಮಡದಿಗೆ ನಡೆದ ವಿಷಯ ತಿಳಿಸಿದ. ಆಗ ಆಕೆ ಹೇಗಿದ್ದರೂ ಈಗ ನಿಮಗೆ ಕೆಲಸವಿಲ್ಲದೆ ಮನೆಯಲ್ಲೇ ಇದ್ದೀಯಾ. ನಿನಗೆ ಖುಷಿಕೊಡುವ ಹಾಗಿದ್ದರೆ ಆ ಮಗುವಿನ ಜೊತೆಗೆ ದಿನಾ ಒಂದಷ್ಟು ಹೊತ್ತು ಏಕೆ ಸಮಯ ಕಳೆಯಬಾರದು ಎಂದಳು. ಇವನಿಗೂ ಸರಿ ಎನಿಸಿತು. ಕೆಲ ದಿನಗಳ ನಂತರ ಆ ಮಗುವಿನ ತಾಯಿ ಇವನಲ್ಲಿ ಹೇಳಿದಳು: ಮಾನಸಿಕವಾಗಿ ಇಂತಹ ಸಮಸ್ಯೆ ಇರುವ ಹಲವು ಮಕ್ಕಳು ಈ ಊರಿನಲ್ಲಿ ಇದ್ದಾರೆ. ನೀನು ಏಕೆ ಅವರನ್ನೆಲ್ಲಾ ಸೇರಿಸಿಕೊಂಡು ಒಂದು ಶಾಲೆ ತೆರೆಯಬಾರದು? ನಿನಗೂ ಕೆಲಸ ಸಿಕ್ಕಿದ ಹಾಗೆ ಆಗುತ್ತದೆ, ಜೀವನಕ್ಕೆ ಆಗುವಷ್ಟು ಹಣವೂ ದೊರಕುತ್ತದೆ ಎಂದಳು. ಇವನು ಒಪ್ಪಿದ. ಒಂದಷ್ಟು ಹಣವನ್ನು ಫೀಸು ಎಂದು ನಿಗದಿಪಡಿಸಲಾಯಿತು. ಶಾಲೆ ಆರಂಭವಾಯಿತು. ಕೆಲವು ದಿನಗಳಲ್ಲಿ ಮಕ್ಕಳ ಸಂಖ್ಯೆ ಜಾಸ್ತಿಯಾಯಿತು. ಇವನು ಕೆಲವರನ್ನು ಸಹಾಯಕ್ಕೆ ನೇಮಿಸಿಕೊಂಡ. ಮಕ್ಕಳ ಕಲಿಕೆಗೆ ಪೂರಕವಾಗುವ ಹೊಸಹೊಸ ಪ್ರಯೋಗ ಆರಂಭಿಸಿದ. ಆ ಮಕ್ಕಳಿಗೆ ಬೇಕಾದ ಹಲವು ಆಟಿಕೆಗಳನ್ನು ತಾನೇ ತಯಾರಿಸಿದ. ಇವನ ಚಟುವಟಿಕೆಯನ್ನು ಕಂಡವರು ಇತರೆಡೆಗೆ ಈ ಸುದ್ದಿ ಹರಡಿದರು. ಈತ ಜನಪ್ರಿಯನಾಗುತ್ತಾ ಸಾಗಿದ.

ಮುಂದೆ ಅವನು ತಯಾರಿಸುತ್ತಿದ್ದ ಆಟಿಕೆಗಳು ಜನಪ್ರಿಯವಾಗತೊಡಗಿತು. ಅವನು ಅಂತಹ ಮಕ್ಕಳ ತಂದೆತಾಯಿಯರಿಗೆ ಕೌನ್ಸಿಲಿಂಗ್ ಸಹಾ ಮಾಡತೊಡಗಿದ. ಮುಂದೆ ಅವನ ಕೀರ್ತಿ ಜಿಲ್ಲಾಮಟ್ಟದಿಂದ ರಾಜ್ಯಮಟ್ಟಕ್ಕೆ ಬೆಳೆಯಿತು. ಅವನ ಹೆಸರು ದೇಶದೆಲ್ಲೆಡೆಯೂ ಕೇಳಿ ಬರುವಂತಾಯಿತು. ಆದರೆ ಅವನು ಆ ಮಕ್ಕಳೊಡಗಿನ ತನ್ನ ಒಡನಾಟವನ್ನು ಎಂದೂ ತಪ್ಪಿಸುತ್ತಿರಲಿಲ್ಲ. ಅಂತಹ ಸಂದರ್ಭದಲ್ಲಿ ಅವನು ಮಡದಿಯನ್ನು ಕೇಳಿದ: 'ನಾನೆಷ್ಟು ಸಲ ಬಿದ್ದರೂ ನೀನು ಸಮಾಧಾನ ಮಾಡುತ್ತಿದ್ದೆ. ನಾನೂ ಮುಂದೊಂದು ದಿನ ಗೆಲ್ಲಬಲ್ಲೆ ಎಂಬುದು ಆಗ ನಿನಗೆ ತಿಳಿದಿತ್ತೇ?'

> ನಾವು ಮಾಡುವ ಕೆಲಸವನ್ನು ಪ್ರೀತಿಸಬೇಕು. ನನಗೆ ಬೇರೆ ದಾರಿಯಿಲ್ಲ, ಇಲ್ಲೇ ಇದ್ದು ಏನನ್ನಾದರೂ ಮಾಡಬೇಕು ಎಂಬ ಮನಸ್ಥಿತಿ ಹೊಂದಿದವರು ಕೆಲಸದಲ್ಲಿ ಯಶ ಕಾಣುತ್ತಾರೆ. ನಾನು ಒಪ್ಪಿರುವ ಈ ಕೆಲಸವನ್ನು ನಾನು ಒಲವಿನಿಂದ ಮಾಡುತ್ತೇನೆ ಎಂದುಕೊಂಡಾಗ ನಮಗೆ ಹಲವು ಹೊಸತುಗಳು ಕಂಡುಬರುತ್ತವೆ. ಅವನ್ನೂ ಒಪ್ಪಿ ಕೆಲಸದಲ್ಲಿ ಅಳವಡಿಸಿಕೊಂಡರೆ ಅದು ಖಂಡಿತವಾಗಿ ಮುಂದಿನ ಪೀಳಿಗೆಗೆ ಉತ್ತಮ ಸಂದೇಶ ನೀಡುತ್ತದೆ. ಆದರೆ ನನಗೆ ಬೇರೆ ಕೆಲಸ ಸಿಗುವುದಿಲ್ಲ ಎಂಬ ನಿರಾಶೆಯಿಂದ ಈಗ ಸಿಕ್ಕಿರುವ ಕೆಲಸವನ್ನು ವಿಶ್ವಾಸದಿಂದ ಮಾಡದೆ ಹೋದರೆ ಅದು ಸ್ವಯಂಕೃತ ಅಪರಾಧ ಎನ್ನಿಸುತ್ತದೆ. ಜೀವನ ನಿರರ್ಥಕ ಎನ್ನಿಸುತ್ತದೆ.

ಎಂದು. ಆಕೆ ಹೇಳಿದ ಮಾತು ಮನನ ಮಾಡುವಂತಹುದು. ಆಕೆ ಹೇಳಿದಳು 'ನಾನು ರೈತ ಕುಟುಂಬದಿಂದ ಬಂದವಳು. ನಮ್ಮ ಹೊಲದಲ್ಲಿ ಟೊಮಾಟೋ ಹಾಕುತ್ತೇವೆ. ಕೆಲವೊಮ್ಮೆ ನಾವೆಷ್ಟೇ ಪ್ರಯತ್ನಪಟ್ಟರೂ ಬೆಳೆ ಬರುವುದೇ ಇಲ್ಲ. ಆಗ ನಾವು ಅದರ ಬದಲು ಹುರಳೀಕಾಯಿ ಹಾಕುತ್ತೇವೆ, ಅದೂ ಬೆಳೆಯಲಿಲ್ಲ ಎಂದರೆ ಮತ್ಯಾವುದೋ ಬೆಳೆ ಹಾಕುತ್ತೇವೆ. ಒಂದಲ್ಲ ಒಂದು ಬೆಳೆ ನಮ್ಮ ಕೈಹಿಡಿಯುತ್ತದೆ ಎಂಬುದು ನಮ್ಮ ಆಶಾವಾದ. ಆದರೆ ಯಾವ ಬೆಳೆ ಕೈಹತ್ತುತ್ತದೆ ಎಂಬುದು ಗೊತ್ತಾಗುವುದಕ್ಕೆ ಸ್ವಲ್ಪ ಸಮಯ ಹಿಡಿಯುತ್ತದೆ. ಅಲ್ಲಿಯವರೆಗೆ ಕಾಯಬೇಕು. ನಮ್ಮ ಬದುಕಿನಲ್ಲೂ ಹೀಗೆ ಆಗಬಹುದು ಎಂದುಕೊಂಡೇ ನಾನು ನಿನಗೆ ಧೈರ್ಯ ಹೇಳಿದೆ. ಈಗ ನಿನಗೆ ನಿನ್ನ ಕ್ಷೇತ್ರ ಯಾವುದು ಎಂದು ಕೊನೆಗೂ ಗೊತ್ತಾಯಿತಲ್ಲ ಅದೇ ನನಗೆ ಸಂತೋಷ' ಎಂದು. ಅವನು ಆ ಮಾತನ್ನು ಕೇಳಿ ಮೂಕ ವಿಸ್ಮಿತನಾದ.

ಇಂತಹ ಹಲವು ಘಟನೆಗಳು ಹಾಗೂ ಅದರಲ್ಲಿ ಯಶ ಸಾಧಿಸಿದವರು ನಮಗೆ ಕಂಡುಬರುತ್ತಾರೆ. ನನಗೆ ಸಿಕ್ಕಿದ ಕೆಲಸ ಸರಿಯಿಲ್ಲ ಎಂಬ ಭಾವನೆಗಿಂತ ಇಂತಹ ಅವಕಾಶಕ್ಕಾಗಿ ಕಾಯಬೇಕಾಗುತ್ತದೆ. ಎಲ್ಲರಲ್ಲೂ ಒಂದಲ್ಲಾ ಒಂದು ಅಂತಃಸತ್ವ ಇದ್ದೇ ಇರುತ್ತದೆ. ಅದು ಯಾವುದು ಎಂದು ನಮಗೆ ಒಮ್ಮೆಲೇ ಗೋಚರಿಸುವುದಿಲ್ಲ. ಹಾಗಾಗಿ ನಾನು ಹೀಗೇ ಆಗಬೇಕು ಎಂದುಕೊಳ್ಳುವುದಕ್ಕಿಂತ ಸಾಧನೆ ಮಾಡಲು ಅವಕಾಶ ಹಾಗೂ ಸಮಯಕ್ಕಾಗಿ ಕಾಯಬೇಕು. ಬೇಡನೊಬ್ಬ ವಾಲ್ಮೀಕಿಯಾಗಿ ರಾಮಾಯಣ ಬರೆದ ಕಥೆ ನಮ್ಮ ಮುಂದಿದೆ. ಹುಟ್ಟುತ್ತಾ ಸರಿಯಿದ್ದು, ಯಾವುದೋ ಕಾರಣದಿಂದ ಕೈಕಾಲು ಕಳೆದುಕೊಂಡವರು ಕೃತಕ ಕೈಕಾಲುಗಳಿಂದ ಅಮೋಘ ಸಾಧನೆ ಮಾಡಿದ ಹಲವರ ಕಥೆಗಳು ನಮ್ಮ ಮುಂದಿವೆ. ಇದಕ್ಕೆಲ್ಲಾ ಮುಖ್ಯ ಕಾರಣವಾಗುವುದು ನಮ್ಮ ಮನಸ್ಸು ಹಾಗೂ ಮನೋಭಾವ. ಅಂತಹ ಮನೋಭಾವ ಎರಲ್ಲರಲ್ಲೂ ಇದ್ದೇ ಇರುತ್ತದೆ. ಆದರೆ ಅದನ್ನು ಹೊರಹಾಕುವ ಸಮಯಕ್ಕಾಗಿ ಕಾಯಬೇಕು. ಅಲ್ಲಿಯವರೆಗೆ ತಾಳ್ಮೆ ಬೇಕು.

ಮೈಸೂರಲ್ಲಿ ನಂಬರ್ ಪ್ಲೇಟ್ ಇಲ್ಲದ ಬೈಕ್, ಸ್ಕೂಟರ್‌ಗಳಲ್ಲಿ ಪುಂಡರ ಅಟ್ಟಹಾಸ

- ಸಣ್ಣ ಪುಟ್ಟ ಕಾರಣಕ್ಕೆ ಜಗಳ ತೆಗೆದು ಅಮಾಯಕರ ಮೇಲೆ ಏಕಾಏಕಿ ಹಲ್ಲೆ; ಧಮ್ಕಿ
- ಪೊಲೀಸರು ಎಚ್ಚೆತ್ತು ಕಠಿಣ ಕ್ರಮ ಕೈಗೊಳ್ಳದಿದ್ದರೆ ಮುಗ್ಧ ಜನರಿಗೆ ಉಳಿಗಾಲವಿಲ್ಲ



ರಮೇಶ್ ಬಾನೋತ್
ಪೊಲೀಸ್ ಆಯುಕ್ತರು

ಮೈಸೂರು, ನ. 10– ಮೈಸೂರಿನಲ್ಲಿ ನಂಬರ್ ಪ್ಲೇಟ್ ಇಲ್ಲದ ಬೈಕ್, ಸ್ಕೂಟರ್‌ಗಳಲ್ಲಿ ಅಡ್ಡಾದಿಡ್ಡಿ ಚಾಲನೆ ಮಾಡುತ್ತಾ ಸಣ್ಣಪುಟ್ಟ ಕಾರಣಕ್ಕೆ ಜಗಳ ತೆಗೆದು, ಅಮಾಯಕರ ಮೇಲೆ ಹರಿಹಾಯುವ ಪುಂಡರ ಅಟ್ಟಹಾಸ ದಿನೇ ದಿನೆ ಹೆಚ್ಚಾಗುತ್ತಿದೆ. ಬೈಕ್, ಸ್ಕೂಟರ್‌ಗಳ ನಂಬರ್ ಪ್ಲೇಟ್ ತೆಗೆದು, ಒಂದು ವಾಹನದಲ್ಲಿ ಮೂರ್‍ನಾಲ್ಕು ಜನ, ಸಂಚಾರ ನಿಯಮ ದಿಕ್ಕರಿಸಿ, ವೇಗವಾಗಿ ಎಲ್ಲೆಂದರಲ್ಲಿ ನುಗ್ಗಿಸುವುದು. ವೇಗವಾಗಿ ಅಡ್ಡಾದಿಡ್ಡಿ ಓಡಿಸಿ ಸಾರ್ವಜನಿಕರಿಗೆ ಕಿರಿಕಿರಿ ಉಂಟು ಮಾಡುವುದು. ಸಿಗರೇಟು ಸೇದುತ್ತಾ ಮನಬಂದಂತೆ ವರ್ತಿಸುವುದು. ಸುಖಾಸುಮ್ಮನೆ ಇತರೆ ವಾಹನ ಸವಾರರಿಗೆ ಧಮ್ಕಿ ಹಾಕುವುದು. ಸಿಗ್ನಲ್‌ಗಳಲ್ಲಿ ರಾಜಾರೋಷವಾಗಿ ನುಗ್ಗಿಸಿಕೊಂಡು ಹೋಗುವುದು. ಸಣ್ಣಪುಟ್ಟ ವಿಚಾರಗಳಿಗೆ ಜಗಳ ತೆಗೆದು ಏಕಾಏಕಿ ಹಲ್ಲೆ ಮಾಡಿ, ಜೀವ ಬೆದರಿಕೆ ಹಾಕುವಂತಹ ಘಟನೆಗಳು ಮೈಸೂರಲ್ಲಿ ವ್ಯಾಪಕವಾಗುತ್ತಿವೆ. ಇಂತಹ ಪುಂಡರ ಹಾವಳಿಯಿಂದ ನೊಂದವರು ರಸ್ತೆಯಲ್ಲಿ ಭಯಭೀತಿಯಿಂದ ಓಡಾಡುವುವಂತಾಗಿದೆ. ಯಾರು ಸಹ ಪೊಲೀಸರಿಗೆ ದೂರು ನೀಡುವ ಧೈರ್ಯ ಮಾಡದೆ ಶಪಿಸಿ, ಸುಮ್ಮನಾಗುತ್ತಿದ್ದಾರೆ.

ಇದಕ್ಕೆ ತಾಜಾ ನಿದರ್ಶನ ಎಂಬಂತೆ ಲಕ್ಷ್ಮೀಪುರಂನಲ್ಲಿ ಶುಕ್ರವಾರ ಪುಂಡರ ಗುಂಪೊಂದು ವ್ಯಕ್ತಿಯೊಬ್ಬರ ಮೇಲೆ ಅನಗತ್ಯವಾಗಿ ಹಲ್ಲೆ ನಡೆಸಿ, ಧಮ್ಕಿ ಹಾಕಿದೆ. ವ್ಯಕ್ತಿಯೊಬ್ಬರು ಇಲ್ಲಿನ ಕಿಂಗ್ಸ್ ಕಾಫಿ ಬಳಿ ರಸ್ತೆಬದಿ ಕಾರು ನಿಲ್ಲಿಸಿ, ರಸ್ತೆ ದಾಟುತ್ತಿದ್ದಾಗ ನಂಬರ್ ಪ್ಲೇಟ್ ಇಲ್ಲದ ಎರಡು ಬೈಕ್‌ಗಳಲ್ಲಿ ಬಂದ ಐದು ಪುಂಡರು ಏಕಾಏಕಿ ಅವರ ಮೇಲೆ ಮುಗಿಬಿದ್ದಿದ್ದಾರೆ. ನೀವು ಇಂಡಿಕೇಟರ್ ಕೂಡ ಹಾಕದೆ ಏಕಾಏಕಿ ಕಾರು ಸೈಡಿಗೆ ತೆಗೆದುಕೊಂಡಿದ್ದೀರಿ ಎಂದು ಏರುಧ್ವನಿಯಲ್ಲಿ ಜಗಳ ತೆಗೆದಿದೆ. ಆ ವ್ಯಕ್ತಿಗೆ ಮಾತನಾಡುವುದಕ್ಕೂ ಅವಕಾಶ ಕೊಡದೆ ಆರ್ಭಟಿಸಿದ್ದಾರೆ. ಅಷ್ಟಕ್ಕೆ ಸುಮ್ಮನಾಗದೆ ಗಲಾಟೆ ನಡುವೆ ಅವರ ಮೇಲೆ ಹಲ್ಲೆ ನಡೆಸಿ, ನಿನ್ನ ಎತ್ತಿಬಿಡ್ತೇವೆ... ಎಂದು ಧಮ್ಕಿ ಹಾಕಿ ಬೈಕ್ ಏರಿ ಪರಾರಿಯಾಗಿದ್ದಾರೆ.



(ಸಾಂದರ್ಭಿಕ ಚಿತ್ರ)

ಕಾರು ನಿಲ್ಲಿಸಿ ತಮ್ಮ ಪಾಡಿಗೆ ರಸ್ತೆ ದಾಟುತ್ತಿದ್ದ ವ್ಯಕ್ತಿಗೆ ಏನಾಗುತ್ತಿದೆ ಎಂದು ಯೋಚಿಸುವಷ್ಟರಲ್ಲಿ ಹಲ್ಲೆ ನಡೆಸಿ ಕಾಲ್ಕಿತ್ತಿದ್ದಾರೆ. ದಿಢೀರ್ ಬೆಳವಣಿಗೆಯಿಂದ ಆಘಾತಕ್ಕೊಳಗಾದ ನೊಂದ ಆ ವ್ಯಕ್ತಿ, ಲಕ್ಷ್ಮೀಪುರಂ ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿದ್ದಾರೆ. ಈ ಘಟನೆಯ ಬಗ್ಗೆ ಮೈಸೂರು ಪೊಲೀಸ್ ಆಯುಕ್ತರಾದ ರಮೇಶ್ ಬಾನೊತ್ ಅವರ ಗಮನಕ್ಕೂ 'ಮೈಸೂರು ಮಿತ್ರ' ತಂದಿದ್ದು, ಕೂಡಲೇ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಅವರು ಭರವಸೆ ನೀಡಿದ್ದಾರೆ.

ಬ್ರೇಕ್ ಹಾಕಲು ಮನವಿ: ನಂಬರ್ ಪ್ಲೇಟ್ ಇದ್ದರೆ ಯಾವುದಾದರೂ ಜಂಕ್ಷನ್‌ನಲ್ಲಿರುವ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿ ಸಿಕ್ಕಿಬೀಳುವ ಕಾರಣಕ್ಕೆ ಪುಂಡರು ಈಗ ನಂಬರ್ ಪ್ಲೇಟ್ ತೆಗೆದು ರಸ್ತೆಗಿಳಿಯುತ್ತಾರೆ. ವೇಗವಾಗಿ ಅಡ್ಡಾದಿಡ್ಡಿ ವಾಹನ ಓಡಿಸುತ್ತಾ ಮೋಜುಮಸ್ತಿ ಮಾಡುತ್ತಾರೆ. ಅವರ ಚೆಲ್ಲಾಟದಿಂದ ಅಮಾಯಕರು ಸಂಕಟ ಅನುಭವಿಸುವಂತಾಗಿದೆ. ಪುಂಡರಿಗೆ ಈಗಲಾದರೂ ಬ್ರೇಕ್ ಹಾಕದಿದ್ದರೆ ಮುಗ್ಧಜನ ಬಲಿಪಶುಗಳಾಗುತ್ತಾರೆ.

ಜೊತೆಗೆ ಪುಂಡರು ಮುಂದೆ ಸಮಾಜಘಾತುಕರಾಗಿ ವಿಜೃಂಭಿಸುವ ಆತಂಕವಿದೆ. ಅಪಘಾತ ಮಾಡಿದ್ದೀರಿ ಎಂದು ಕಾರು ಚಾಲಕರ ಸುಲಿಗೆ ಮಾಡುತ್ತಿದ್ದ ಗ್ಯಾಂಗ್ ರೀತಿಯಲ್ಲೇ ಈ ಪುಂಡರೂ ಸಾರ್ವಜನಿಕರ ಮೇಲೆ ಹಲ್ಲೆ ನಡೆಸಿ, ಸುಲಿಗೆ ಮಾಡ ಬಹುದು. ಹಾಗಾಗಿ ನಂಬರ್ ಪ್ಲೇಟ್ ಇಲ್ಲದ ವಾಹನಗಳನ್ನು ವಿಶೇಷ ತಪಾಸಣೆ ಮೂಲಕ ಜಪ್ತಿ ಮಾಡಿ, ಶಿಸ್ತು ಕ್ರಮ ಕೈಗೊಳ್ಳುವುದು ತುರ್ತಾಗಿ ಆಗಬೇಕಿದೆ ಎಂದು ಪುಂಡರಿಂದ ನೊಂದವರು ಮನವಿ ಮಾಡಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 11 ಶನಿವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 205 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ರಾಜ್ಯೋತ್ಸವದೊಂದಿಗೆ ಸಂಭ್ರಮದಿಂದ ಟಿಪ್ಪು ಜಯಂತಿ ಆಚರಣೆ

● ಸುಶ್ರಾವ್ಯವಾಗಿ ಮೊಳಗಿದ ನಾಡಗೀತೆ, ಕನ್ನಡ ಗೀತೆ, ದೇಶಭಕ್ತಿ ಗೀತೆಗಳು ● ಟಿಪ್ಪು ತ್ಯಾಗದ ಗುಣಗಾನ





ಮೈಸೂರು, ನ.10(ಎಂಕೆ)– ಟಿಪ್ಪು ಕನ್ನಡ ರಾಜ್ಯೋತ್ಸವ ವೇದಿಕೆ ವತಿಯಿಂದ ಕನ್ನಡ ರಾಜ್ಯೋತ್ಸವ ಹಾಗೂ ಟಿಪ್ಪು ಸುಲ್ತಾನ್ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಲಾಯಿತು.

ಮೈಸೂರಿನ ಬೆಂಗಳೂರು ರಸ್ತೆಯಲ್ಲಿರುವ ಮಿಲನ್ ಫಂಕ್ಷನ್ ಹಾಲ್‌ನಲ್ಲಿ ಶುಕ್ರವಾರ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಹಾಗೂ ಟಿಪ್ಪು ಸುಲ್ತಾನ್ ಜಯಂತಿ ಆಚರಣೆಗೆ ಧ್ವಜಾರೋಹಣ ನೆರವೇರಿಸುವ ಮೂಲಕ ಶಾಸಕ ತನ್ವೀರ್ ಸೇಠ್, ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಚಾಲನೆ ನೀಡಿದರು.

ಬಳಿಕ ಶೇಖ್ ಪಬ್ಲಿಕ್ ಶಾಲೆ ವಿದ್ಯಾರ್ಥಿಗಳು ಸುಶ್ರಾವ್ಯವಾಗಿ 'ನಾಡಗೀತೆ' ಹಾಡುವ ಮೂಲಕ ಕನ್ನಡ ರಾಜ್ಯೋತ್ಸವಕ್ಕೆ ಮೆರಗು ತಂದರು. ಅಲ್ಲದೆ 'ಹಚ್ಚೇವು ಕನ್ನಡದ ದೀಪ', 'ಭಾರತ ದೇಶದ ಮಕ್ಕಳು', 'ವಿಶ್ವ ವಿನೂತನ ವಿದ್ಯಾಚೇತನ' ಹಾಡಿಗೆ ಮನಮೋಹನ ನೃತ್ಯ ಪ್ರದರ್ಶನ ನೀಡಿದರು. ನಂತರ ಟಿಪ್ಪು ವೇಷದಲ್ಲಿದ್ದ ಪುಟಾಣಿಗಳು, ಕುದುರೆ ಸವಾರಿ ನಡೆಸಿದರಲ್ಲದೆ ಶೌರ್ಯ–ಪರಾಕ್ರಮದ ಡೈಲಾಗ್ ಮೂಲಕ ಎಲ್ಲರ ಮನಗೆದ್ದರು.

ನಂತರ ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಮಾತನಾಡಿ, ಕಾವೇರಿಯಿಂದ ಗೋದಾವರಿವರೆಗೆ ಸಾಮ್ರಾಜ್ಯ ವಿಸ್ತರಣೆ ಮಾಡಿದ ಭೂಪ ಟಿಪ್ಪು ಸುಲ್ತಾನ್, ಬ್ರಿಟಿಷರಿಗೆ ಶರಣಾಗದೆ ತನ್ನ ರಾಷ್ಟ್ರಕೋಸ್ಕರ ತಾನು ಹೆತ್ತ ಮಕ್ಕಳನ್ನೆ ಒತ್ತೆಯಾಗಿಟ್ಟು ಚರಿತ್ರೆಯಲ್ಲೇ ಯಾರು ಮಾಡದ ತ್ಯಾಗ ಮಾಡಿದ ಚೇತನ. ಟಿಪ್ಪು ಹಿಂದೂ–ಮುಸ್ಲಿಂ ಎನ್ನದೆ ಮೊದಲು ಭಾರತೀಯನಾಗಿರು ಎಂದು ಹೇಳುತ್ತಾನೆ. ಟಿಪ್ಪು ಎಂಬುದೇ ಅದ್ಭುತ. ಉಪ್ಪಿಗೆ ಹೇಗೆ ಹುಳ ಹಿಡಿಯುದಿಲ್ಲವೋ ಹಾಗೆ ಟಿಪ್ಪು ಇತಿಹಾಸಕ್ಕೆ ಸೂರ್ಯ–ಚಂದ್ರ ಇರುವವರೆಗೂ ಹುಳ ಹಿಡಿಯುವುದಿಲ್ಲ. ಜಾತಿ–ಧರ್ಮದ ಹೆಸರಿನಲ್ಲಿ ವಿವಾದ ಸೃಷ್ಟಿಸುತ್ತಿರುವ ಕಾಲದಲ್ಲಿ ಟಿಪ್ಪು ಕುರಿತು ಅಧ್ಯಯನ ಮಾಡಬೇಕಿದೆ. ಪ್ರತಿಯೊಬ್ಬರು ಓದಿಕೊಳ್ಳಬೇಕಿದೆ. ಹಾಗೆಯೇ ಟಿಪ್ಪು ಜಯಂತಿ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಬೇಕು. ಟಿಪ್ಪು ಕುರಿತು ನಾಟಕ ಪ್ರದರ್ಶನಗಳಾಗಬೇಕು. ಟಿಪ್ಪು ಸುಲ್ತಾನ್ ಒಂದು ಸೀಮಿತ ಜಾತಿ–ಧರ್ಮಕ್ಕಷ್ಟೇ ಅಲ್ಲದೆ ಜಗತ್ತಿಗೆ ಬೇಕಾದವನು. ಟಿಪ್ಪು ಈ ರಾಷ್ಟ್ರದ ಅಭಿಮಾನಿ ಎಂದು ಬಣ್ಣಿಸಿದರು.

ಕನ್ನಡ ಓದಬೇಕು: ಕನ್ನಡ ಭಾಷೆ ನಮ್ಮ ಆಡಳಿತ ಭಾಷೆಯಾಗಿದ್ದು, ಯಾವ ಕಾರಣಕ್ಕೂ ಬದಲಾವಣೆ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಪ್ರತಿಯೊಬ್ಬರು ಕನ್ನಡ ಓದಬೇಕು. ಬರೆಯಬೇಕು ಹಾಗೂ ನಿತ್ಯ ಬಳಸಬೇಕು. ಬಿಜಾಪುರದ ಆದಿಲ್ ಶಾಹಿಗಳು ಕನ್ನಡ ಭಾಷೆಯನ್ನು ತಮ್ಮ ಸಾಮ್ರಾಜ್ಯದ ಆಡಳಿತ ಭಾಷೆಯನ್ನಾಗಿಸಿಕೊಂಡಿದ್ದರು. ಹಾಗೆಯೇ ದೇವರಾಜ ಅರಸು ಅವರ ಕಾಲದಲ್ಲಿದ್ದ ಮುಸ್ಲಿಂಮರ ರಾಜಕೀಯ ಮೀಸಲಾತಿ, ಮತ್ತೆ ಜಾರಿ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಲಾಗುವುದು ಎಂದು ಹೇಳಿದರು.

ಟಿಪ್ಪು ಕಾಲದಲ್ಲೇ ಕರ್ನಾಟಕ ಪದ ಬಳಕೆ: ಶಾಸಕ ತನ್ವೀರ್ ಸೇಠ್ ಮಾತನಾಡಿ, ಟಿಪ್ಪು ಸುಲ್ತಾನ್ ಆಳ್ವಿಕೆಯ ಕಾಲದಲ್ಲಿ ಪರ್ಷಿಯನ್ ಭಾಷೆಯಲ್ಲಿ ದಕ್ಷಿಣ ಭಾರತದ ಕರ್ನಾಟಕ ಎಂಬ ಹೆಸರನ್ನು ಉಲ್ಲೇಖಿಸಲಾಗಿದೆ. ಇದನ್ನೂ ಸಹ ಗಮನದಲ್ಲಿಟ್ಟುಕೊಂಡು ಮೈಸೂರು ಸಂಸ್ಥಾನಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಲಾಗಿದೆ. ಹಾಗೆಯೇ ಮೈಸೂರು ದಸರಾ ಉತ್ಸವವನ್ನು ನಿಲ್ಲಿಸದೆ ಆಚರಿಸಿಕೊಂಡು ಬಂದ ಕೀರ್ತಿ ಟಿಪ್ಪು ಸುಲ್ತಾನ್‌ಗೆ ಸಲ್ಲುತ್ತದೆ ಎಂದರು.

ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್, ಚಿಂತಕರಾದ ಡಾ.ಹೆಚ್.ವಿ.ವಾಸು, ಗೋಪಾಲಕೃಷ್ಣ, ಟಿಪ್ಪು ಕನ್ನಡ ರಾಜ್ಯೋತ್ಸವ ವೇದಿಕೆ ಸಂಚಾಲಕ ಅಬ್ದುಲ್ ಖಾದರ್ ಶಾಹೀದ್, ಅಧ್ಯಕ್ಷ ಮಜ್ಹರ್ ಉಲ್ಲಾಖಾನ್, ಕಾರ್ಯದರ್ಶಿ ಸೈಯದ್ ಆಜ್ಹಮ್, ಮುಖಂಡ ಘಫೂರ್ ಮತ್ತಿತರರು ಉಪಸ್ಥಿತರಿದ್ದರು.

ಟಿಪ್ಪು ಜಯಂತಿ ಆಚರಿಸದಂತೆ ಸರ್ಕಾರಕ್ಕೆ ಮನವಿ ಮಾಡುತ್ತೇನೆ....!

ನಾವೆಂದು ಟಿಪ್ಪು ಸುಲ್ತಾನ್ ಜಯಂತಿ ಆಚರಣೆ ಮಾಡುವಂತೆ ಸರ್ಕಾರಕ್ಕೆ ಮನವಿ ಮಾಡಲಿಲ್ಲ. ಬಯಸದೆ ಬಂದ ಭಾಗ್ಯವೆಂಬಂತೆ ಅಂದಿನ ಸರ್ಕಾರವೇ ಆಚರಣೆಗೆ ಮುಂದಾಯಿತು. ಸರ್ಕಾರ ಟಿಪ್ಪು ಜಯಂತಿ ಆಚರಣೆ ಮಾಡಿದ್ದರಿಂದಾಗಿ ಸಾಕಷ್ಟು ಅವಾಂತರಗಳಾಗಿವೆ. ಆದ್ದರಿಂದ ಮತ್ತೊಮ್ಮೆ ಏನಾದರೂ ಸರ್ಕಾರ ಟಿಪ್ಪು ಜಯಂತಿ ಆಚರಣೆ ಮಾಡುತ್ತೇನೆ ಎಂದರೆ ನಾನೇ ಆಚರಿಸದಂತೆ ಮನವಿ ಮಾಡುತ್ತೇನೆ ಎಂದು ಶಾಸಕ ತನ್ವೀರ್ ಸೇಠ್ ಹೇಳಿದರು.

ಸರ್ಕಾರ ಟಿಪ್ಪು ಜಯಂತಿ ಆಚರಿಸುವುದು ಬೇಡ. ಅದಕ್ಕಿಂತಲೂ ಅದ್ಧೂರಿಯಾಗಿ ಜಯಂತಿ ಆಚರಣೆ ಮಾಡುವ ಸಾಮರ್ಥ್ಯ ನಮಗಿದೆ. ಕವಿಗೋಷ್ಠಿ, ಸಂಶೋದನೆ ಮೂಲಕ ಮತ್ತೆ ಟಿಪ್ಪು ಚರಿತ್ರೆ ಬರೆಯುತ್ತೇವೆ ಎಂದರಲ್ಲದೆ ಟಿಪ್ಪು ವಿಚಾರದಲ್ಲಿ ಕೇಳಿಬರುತ್ತಿರುವ ತಪ್ಪು ಗ್ರಹಿಕೆಗಳು ದೂರಾಗಬೇಕಾದರೆ ಸರ್ಕಾರದಿಂದಲೇ ವ್ಯವಸ್ಥಿತ ಸಂಶೋದನೆಯಾಗಬೇಕು. ಹಾಗೆಯೇ ಮೈಸೂರು ವಿವಿ ಅಥವಾ ರಾಜ್ಯದ ಇತರೆ ವಿಶ್ವ ವಿದ್ಯಾನಿಲಯದಲ್ಲಿ ಟಿಪ್ಪು ಅಧ್ಯಯನ ಪೀಠ ಸ್ಥಾಪನೆಗೆ ಶ್ರಮಿಸುವುದಾಗಿ ಭರವಸೆ ನೀಡಿದರು.

ರಾಜ್ಯ ಕಾನೂನು ಕಾರ್ಯದರ್ಶಿಯಾಗಿ ನ್ಯಾಯಾಧೀಶ ಜಿ.ಎಸ್.ಸಂಗ್ರೇಶಿ ನೇಮಕ


ಮೈಸೂರು, ನ.10–ಮೈಸೂರು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾಗಿದ್ದ ಜಿ.ಎಸ್.ಸಂಗ್ರೇಶಿ ಅವರು ರಾಜ್ಯ ಕಾನೂನು ಕಾರ್ಯದರ್ಶಿ ಯಾಗಿ ನೇಮಕಗೊಂಡಿದ್ದಾರೆ. 9 ತಿಂಗಳ ಹಿಂದೆ ಮೈಸೂರು ಜಿಲ್ಲಾ ಸತ್ರ ನ್ಯಾಯಾಧೀಶರಾಗಿ ನಿಯೋಜನೆಗೊಂಡಿದ್ದ ಸಂಗ್ರೇಶಿ ಅವರು, ತಮ್ಮ ಕಾರ್ಯಾವಧಿಯಲ್ಲಿ ಜನರಿಗೆ ತ್ವರಿತಗತಿಯಲ್ಲಿ ನ್ಯಾಯವನ್ನು ಒದಗಿಸುವ ನಿಟ್ಟಿನಲ್ಲಿ ಹಲವು ಸುಧಾರಣೆಗಳನ್ನು ತಂದಿದ್ದರು. ಶಿಸ್ತಿನ ಸಿಪಾಯಿಯಾಗಿದ್ದ ಸಂಗ್ರೇಶಿಯವರು ಸಮಯ ಪರಿಪಾಲನೆಗೆ



ಹೆಚ್ಚಿನ ಮಹತ್ವ ನೀಡುತ್ತಿದ್ದರು. ತಾವು ಮಾತ್ರವಲ್ಲ ತಮ್ಮ ನ್ಯಾಯಾಂಗ ಸಿಬ್ಬಂದಿಯಲ್ಲೂ ಶಿಸ್ತು ಮೂಡಿಸುವಲ್ಲಿ ಯಶಸ್ವಿಯಾಗಿದ್ದರು. ಕಳೆದ 9 ತಿಂಗಳಲ್ಲಿ ಲೋಕ ಅದಾಲತ್ ಮೂಲಕ ನೂರಾರು ಪ್ರಕರಣಗಳನ್ನು ಇತ್ಯರ್ಥಗೊಳಿಸುವಲ್ಲಿ ಯಶಸ್ವಿಯಾಗಿದ್ದರು. ಅದರಲ್ಲೂ ಸಣ್ಣ ಪುಟ್ಟ ಮನಸ್ತಾಪದಿಂದ ದೂರಾಗುತ್ತಿದ್ದ ದಂಪತಿ ಜೊತೆ ಖುದ್ದು ಮಾತನಾಡಿ, ಅವರ ಮನವೊಲಿಸಿ ಅವರನ್ನು ಒಂದು ಮಾಡಿ ಹೊಸ ಬಾಳಿಗೆ ಮುನ್ನುಡಿ ಬರೆದಿದ್ದು ವಿಶೇಷವಾಗಿತ್ತು. ಈ ಹಿಂದೆ 2008ರಲ್ಲಿ ಜಿ.ಎಸ್.ಸಂಗ್ರೇಶಿಯವರು ಮೈಸೂರು ಜಿಲ್ಲೆಯ ಪ್ರಧಾನ ಸಿವಿಲ್ ನ್ಯಾಯಾಧೀಶರಾಗಿ ಕಾರ್ಯ ನಿರ್ವಹಿಸಿದ್ದರು. ಇದಾದ ನಂತರ ತುಮಕೂರು, ಗದಗ, ಬೆಂಗಳೂರು ಸೇರಿ ವಿವಿಧ ಜಿಲ್ಲೆಗಳಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದ ಹೆಗ್ಗಳಿಕೆ ಇವರದ್ದು. ಇವರ ಜನಪರ ಕಾಳಜಿ, ಸಮಯ ಪರಿಪಾಲನೆ, ಶಿಸ್ತು ಅವರ ಬದ್ಧತೆಗೆ ಮಾನ್ಯತೆ ನೀಡಿ ಅವರಿಗೆ ಹೊಸ ಜವಾಬ್ದಾರಿ ನೀಡಲಾಗಿದೆ.

ಡಿಕೆ ಶಿವಕುಮಾರ್ ವಿರುದ್ಧದ ಪ್ರಕರಣ; ಹೈಕೋರ್ಟ್‌ನಲ್ಲೇ ಇತ್ಯರ್ಥಕ್ಕೆ ಸುಪ್ರೀಂ ಸೂಚನೆ

ನವದೆಹಲಿ, ನ.10– ಅಕ್ರಮ ಆಸ್ತಿಗಳಿಕೆ ಪ್ರಕರಣದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ತನಿಖೆಗೆ ತಡೆಯಾಜ್ಞೆ ನೀಡಿರುವ ಆದೇಶ ರದ್ದು ಕೋರಿ ಸಿಬಿಐ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾಗೊಳಿಸಿದೆ.



ಕರ್ನಾಟಕ ಹೈಕೋರ್ಟ್‌ನಲ್ಲಿ ಪ್ರಕರಣ ಇತ್ಯರ್ಥಗೊಳಿಸಲು ನ್ಯಾಯ ಮೂರ್ತಿ ಬೇಲಾ ಎಂ. ತ್ರಿವೇದಿ ನೇತೃತ್ವದ ದ್ವಿಸದಸ್ಯ ಪೀಠವು ನಿರ್ದೇಶನ ನೀಡಿದೆ.

ತನಿಖೆಗೆ ಹೈಕೋರ್ಟ್ ಏಕಸದಸ್ಯ ಪೀಠ ತಡೆ ನೀಡಿರಲಿಲ್ಲ. ವಿಭಾಗೀಯ ಪೀಠ ತಡೆ ನೀಡಿತ್ತು. ತಡೆಯಾಜ್ಞೆ ರದ್ದು ಕೋರಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿದೆ. ಪ್ರಕರಣದ ತನಿಖೆಗೆ ಅನುಮತಿ ನೀಡಬೇಕು ಎಂದು ಸಿಬಿಐ ವಕೀಲರು ಮನವಿ ಮಾಡಿದರು.

ಪ್ರಕರಣದ ವಿಚಾರಣೆ ಹೈಕೋರ್ಟ್‌ನಲ್ಲಿ ನಡೆಯುತ್ತಿದೆ. ಹಾಗಾಗಿ, ಅಲ್ಲೇ ಇತ್ಯರ್ಥಪಡಿಸಿಕೊಳ್ಳುವುದು ಸೂಕ್ತ. 15 ದಿನಗಳಲ್ಲಿ ಇದನ್ನು ಇತ್ಯರ್ಥಪಡಿಸಬೇಕು ಎಂದು ಪೀಠ ನಿರ್ದೇಶನ ನೀಡಿತು.

2017ರಲ್ಲಿ ಶಿವಕುಮಾರ್ ಅವರಿಗೆ ಸಂಬಂಧಿಸಿದ ಸ್ಥಳಗಳ ಮೇಲೆ ದಾಳಿ ಮಾಡಿದ್ದ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಶೋಧ ನಡೆಸಿದ್ದರು. ಆಗ ದೆಹಲಿಯ ವಿವಿಧ ಸ್ಥಳಗಳಲ್ಲಿ ರೂ. 8.59 ಕೋಟಿ ನಗದು ವಶಕ್ಕೆ ಪಡೆಯಲಾಗಿತ್ತು. ಬಳಿಕ ಶಿವಕುಮಾರ್ ಅವರನ್ನು ಬಂಧಿಸಲಾಗಿತ್ತು ನಂತರ ಅವರಿಗೆ ನ್ಯಾಯಾಲಯ ಜಾಮೀನು ನೀಡಿತ್ತು. ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ತನಿಖೆ ನಡೆಸಿತ್ತು ಸಿಬಿಐ ತನಿಖೆಗೆ ಇ.ಡಿ. ಶಿಫಾರಸು ಮಾಡಿತ್ತು ಬಿ.ಎಸ್.ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರವು ಸಿಬಿಐ ತನಿಖೆಗೆ ಒಪ್ಪಿಗೆ ನೀಡಿತ್ತು


ರಾಜ್ಯದ ಶಬರಿಮಲೆ ಭಕ್ತರು ತಂಗಲು ವೈನಾಡು ಬಳಿ ವಿಶ್ರಾಂತಿಧಾಮ; ನಾಳೆ ಉದ್ಘಾಟನೆ

ಮೈಸೂರು, ನ.10– ಕರ್ನಾಟಕದಿಂದ ಕೇರಳಕ್ಕೆ ಶಬರಿಮಲೆ ಯಾತ್ರೆ ಕೈಗೊಳ್ಳುವ ಭಕ್ತಾದಿಗಳು ತಂಗಲು ಕೇರಳದ ವೈನಾಡಿನ ಬತ್ತೇರಿ ಮಹಾಗಣಪತಿ ಕ್ಷೇತ್ರ ಸಮಿತಿ ವತಿಯಿಂದ ವಿಶ್ರಾಂತಿಧಾಮದ ವ್ಯವಸ್ಥೆ ಕಲ್ಪಿಸಲಾಗಿದೆ. ಕರ್ನಾಟಕ–ಕೇರಳ ಗಡಿ ಭಾಗದಲ್ಲಿನ ಪೊನ್‌ಗುಳಿ ಗ್ರಾಮದಲ್ಲಿ ಶ್ರೀರಾಮ ಮಂದಿರಕ್ಕೆ ಹೊಂದಿಕೊಂಡಿರುವ 10 ಎಕರೆ ವಿಶಾಲ ಪ್ರದೇಶದಲ್ಲಿರುವ 'ಪುಂಕಾವನಮ್' ಹೆಸರಿನ ಸ್ಥಳದಲ್ಲಿ ಯಾತ್ರಾರ್ಥಿಗಳು ತಂಗಲು ಕೊಠಡಿಗಳ ವ್ಯವಸ್ಥೆ, ವಿಶಾಲವಾದ ಹಾಲ್, 500ಕ್ಕೂ ಹೆಚ್ಚು ಕಾರು ಹಾಗೂ ಬಸ್‌ಗಳ ಪಾರ್ಕಿಂಗ್ ವ್ಯವಸ್ಥೆಯಿರುವ ವಿಶ್ರಾಂತಿಧಾಮವನ್ನು ನ.12 ರಂದು ಸ್ಥಳೀಯ ಶಾಸಕ ಐ.ಸಿ.ಬಾಲಕೃಷ್ಣ, ಕರ್ನಾಟಕ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಹಾಗೂ ಗುಂಡ್ಲುಪೇಟೆ ಶಾಸಕ ಗಣೇಶ್ ಪ್ರಸಾದ್ ಉದ್ಘಾಟಿಸಲಿದ್ದಾರೆ.

ಮಹಾಗಣಪತಿ ಕ್ಷೇತ್ರ ಸಮಿತಿ ಅಧ್ಯಕ್ಷ ಕೆ.ಜಿ.ಗೋಪಾಲ ಪಿಳ್ಳೈ ಉಪಸ್ಥಿತರಿರಲಿದ್ದು, ವಿಶ್ರಾಂತಿಧಾಮ ಸಂಪೂರ್ಣ ಉಚಿತವಾಗಿರಲಿದೆ. ಯಾತ್ರಾರ್ಥಿಗಳು ಯಾವುದೇ ರೀತಿಯ ಶುಲ್ಕ ಕಟ್ಟುವಂತಿಲ್ಲ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇಂದು ಮಂಚೇಗೌಡನಕೊಪ್ಪಲು ಸರ್ಕಾರಿ ಪ್ರೌಢಶಾಲೆ ರಜತ ಮಹೋತ್ಸವ ಕಾರ್ಯಕ್ರಮ

ಮೈಸೂರು, ನ.10– ಮೈಸೂರಿನ ಮಂಚೇಗೌಡನ ಕೊಪ್ಪಲು ಸರ್ಕಾರಿ ಪ್ರೌಢಶಾಲೆ (ಕರ್ನಾಟಕ ಪಬ್ಲಿಕ್ ಶಾಲೆ) ರಜತ ಮಹೋತ್ಸವ ಕಾರ್ಯಕ್ರಮ ನ.11ರಂದು ಶನಿವಾರ ಬೆಳಗ್ಗೆ 10.30ಕ್ಕೆ ಶಾಲಾವರಣದಲ್ಲಿ ನಡೆಯಲಿದೆ.



ಕಾರ್ಯಕ್ರಮವನ್ನು ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಉದ್ಘಾಟಿಸಲಿದ್ದು, ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ವಾರ್ಡ್.2, ಎಂ.ಜಿ.ಕೊಪ್ಪಲು ಮಹಾನಗರ ಪಾಲಿಕೆ ಸದಸ್ಯೆ ಪ್ರೇಮ ಶಂಕರೇಗೌಡ, ವಾರ್ಡ್ ನಂ.1 ಲಕ್ಷ್ಮಿಕಾಂತನಗರ ಮಹಾನಗರ ಪಾಲಿಕೆ ಸದಸ್ಯೆ ಲಕ್ಷ್ಮಿ ಶಿವಣ್ಣ, ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಹೆಚ್.ಕೆ.ಪಾಂಡು, ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ವಿವೇಕಾನಂದ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಅಫ್ಘಾನಿಸ್ತಾನ ವಿರುದ್ಧ ದಕ್ಷಿಣ ಆಫ್ರಿಕಾಕ್ಕೆ ಜಯ



ಅಹಮದಾಬಾದ್, ನ.10– ರಾಸ್ಸೀ ವ್ಯಾನ್ ಡೆರ್ ಡಸ್ಸೆನ್ ಅವರ ಅರ್ಧಶತಕ ಹಾಗೂ ಜೆರಾಲ್ಡ್ ಕೊಯೆಟ್ಜಿ ಅವರ ಬೌಲಿಂಗ್ ದಾಳಿ ನೆರವಿನಿಂದ ದಕ್ಷಿಣ ಆಫ್ರಿಕಾ ಅಫ್ಘಾನಿಸ್ತಾನ ವಿರುದ್ಧ 5 ವಿಕೆಟ್‌ಗಳ ಜಯ ಸಾಧಿಸಿದೆ.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಅಫ್ಘಾನಿಸ್ತಾನ ನೀಡಿದ 245 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ದಕ್ಷಿಣ ಆಫ್ರಿಕಾ 47.3 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 247ರನ್ ಗಳಿಸಿ ಗೆಲುವಿನ ನಗೆ ಬೀರಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಕ್ವಿಂಟನ್ ಡಿಕಾಕ್ ಹಾಗೂ ತೆಂಬಾ ಬವುಮಾ ಮೊದಲ ವಿಕೆಟ್‌ಗೆ 64 ರನ್ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಆದರೆ ನಾಯಕ ಬವುಮಾ 23 ರನ್ ಗಳಿಸಿ ನಿರ್ಗಮಿಸಿದರು. ಮತ್ತೊಂದೆಡೆ ಉತ್ತಮವಾಗಿ ಆಡುತ್ತಿದ್ದ 41 ರನ್ ಕ್ವಿಂಟನ್ ಡಿಕಾಕ್ ಸಹ ವಿಕೆಟ್ ಒಪ್ಪಿಸಿದರು. ನಂತರ ಬಂದ ರಾಸ್ಸೀ ವ್ಯಾನ್ ಡೆರ್ ಡಸ್ಸೆನ್ 1 ಸಿಕ್ಸರ್, 6 ಬೌಂಡರಿ ಒಳಗೊಂಡ ಅಜೇಯ 76 ರನ್ ಗಳಿಸಿ ತಂಡಕ್ಕೆ ಜಯ ತಂದು ಕೊಟ್ಟರು. ಉಳಿದಂತೆ ಏಡೆನ್ ಮಾರ್ಕ್ರಾಮ್ 25, ಹೆನ್ರಿಕ್ ಕ್ಲಾಸೆನ್ 10, ಡೇವಿಡ್ ಮಿಲ್ಲರ್ 24, ಆಂಡಿಲೆ ಫೆಹ್ಲುಕ್ವಾಯೊ 39 ರನ್ ಗಳಿಸಿದರು. ಅಫ್ಘಾನಿಸ್ತಾನ ಪರ ಮೊಹಮ್ಮದ್ ನಬಿ, ರಶೀದ್ ಖಾನ್ ತಲಾ 2, ಮುಜೀಬ್ ಉರ್ ರೆಹಮಾನ್ ಒಂದು ವಿಕೆಟ್ ಕಬಳಿಸಿದರು.

ಇದಕ್ಕೂ ಮುನ್ನಾ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಅಫ್ಘಾನಿಸ್ತಾನ 50 ಓವರ್‌ಗಳಲ್ಲಿ 244 ರನ್ ಗಳಿಗೆ ಆಲೌಟಾಯಿತು. ತಂಡದ ಪರ ಅಜ್ಮತುಲ್ಲಾ ಓಮರ್ಜಾಯ್ 107 ಎಸೆತಗಳಲ್ಲಿ 3 ಸಿಕ್ಸರ್, 7 ಬೌಂಡರಿ ಒಳಗೊಂಡ 97 ರನ್ ಗಳಿಸಿ ಅಜೇಯರಾಗಿ ಉಳಿದರು. ತಂಡದ ಪರ ರಹಮಾನುಲ್ಲಾ ಗುರ್ಬಾಜ್ 25, ಇಬ್ರಾಹಿಂ ಜದ್ರಾನ್ 15, ರಹಮತ್ ಶಾ 26, ಇಕ್ರಮ್ ಅಲಿಖಿಲ್ 12, ರಶೀದ್ ಖಾನ್ 14, ನೂರ್ ಅಹಮ್ಮದ್ 26ರನ್ ಗಳಿಸಿದರು. ದಕ್ಷಿಣ ಆಫ್ರಿಕಾ ಪರ ಜೆರಾಲ್ಡ್ ಕೊಯೆಟ್ಜಿ 4, ಲುಂಗಿ ಎನ್‌ಗಿಡಿ, ಕೇಶವ್ ಮಹಾರಾಜ್ ತಲಾ 2, ಆಂಡಿಲೆ ಫೆಹ್ಲುಕ್ವಾಯೊ ಒಂದು ವಿಕೆಟ್ ಪಡೆದರು. ರಾಸ್ಸೀ ವ್ಯಾನ್ ಡೆರ್ ಡಸ್ಸೆನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.



ಮೈಸೂರು ಸರ್ಕಲ್–2 ಉಸ್ತುವಾರಿ ಅಸಿಸ್ಟೆಂಟ್ ಡ್ರಗ್ ಕಂಟ್ರೋಲರ್(ಎಡಿಸಿ) ಆಗಿ ವಾಸಿಮ್ ಷರಿಫ್ ಅವರು ಶುಕ್ರವಾರ ಅಧಿಕಾರ ವಹಿಸಿಕೊಂಡರು. ಇವರನ್ನು ಡಿ.ಎ.ಹರೀಶ್, ನರಿಖಿಯಾ, ರಮೇಶ್, ಡಿಡಿ ಅರುಣ್ ಕುಮಾರ್, ನಿರ್ಗಮಿತ ಎಡಿಸಿ ನಾಗರಾಜ್ ಅಭಿನಂದಿಸಿ, ಸ್ವಾಗತಿಸಿದರು.

ನ. 16ಕ್ಕೆ ಮೈಸೂರು ಪಾಲಿಕೆ ಪ್ರಸಕ್ತ ಕೌನ್ಸಿಲ್ ಅಧಿಕಾರಾವಧಿ ಅಂತ್ಯ

ಮತ್ತೊಂದು ಲೋಕಲ್ ಫೈಟ್‌ಗೆ ಕಣ ಸಜ್ಜು

ಮೈಸೂರು, ನ.10(ಎಸ್‌ಬಿಡಿ)– ಮೈಸೂರು ಮಹಾನಗರ ಪಾಲಿಕೆ ಪ್ರಸಕ್ತ ಕೌನ್ಸಿಲ್‌ನ ಅಧಿಕಾರಾವಧಿ ನ.16ಕ್ಕೆ ಕೊನೆಗೊಳ್ಳಲಿದ್ದು, ಮತ್ತೊಂದು ಸ್ಥಳೀಯ ಚುನಾವಣೆಗೆ ಅಖಾಡ ಸಜ್ಜಾಗಲಿದೆ.



ಪಾಲಿಕೆ ಸದಸ್ಯರ ಅಧಿಕಾರದ ಅವಧಿ ನ.16ಕ್ಕೆ ಕೊನೆಗೊಳ್ಳಲಿದೆ. ಇತ್ತೀಚೆಗೆ ಮೈಸೂರಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ಪಾಲಿಕೆ ಚುನಾವಣೆ ವಿಳಂಬವಾಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಶೀಘ್ರದಲ್ಲೇ ಲೋಕಲ್ ಫೈಟ್ ಎದುರಾಗುವ ಸಾಧ್ಯತೆ ಇದೆ. ವಾರ್ಡ್‌ವಾರು ಮೀಸಲಾತಿ ಪ್ರಕಟವಾದ ಬಳಿಕ ರಾಜಕೀಯ ಗರಿಗೆದರಲಿದೆ.

ಪಾಲಿಕೆಗೆ 2018ರ ಆ.31ರಂದು ಚುನಾವಣೆ ಜರುಗಿತ್ತು. ಯಾವ ಪಕ್ಷವೂ ಸಂಪೂರ್ಣ ಬಹುಮತ ಗಳಿಸದ ಕಾರಣ ಮೈತ್ರಿಯೊಂದಿಗೆ ಐದು ವರ್ಷ ಆಡಳಿತ ನಡೆಸಿಕೊಂಡು ಬರಲಾಗಿದೆ. ಮೊದಲ ಅವಧಿಯಲ್ಲಿ ಜೆಡಿಎಸ್–ಕಾಂಗ್ರೆಸ್ ಮೈತ್ರಿಯಲ್ಲಿ ಪುಷ್ಪಾಲತಾ ಜಗನ್ನಾಥ್ (ಕಾಂಗ್ರೆಸ್) ಮೇಯರ್, ಶಫಿ ಅಹಮ್ಮದ್ (ಜೆಡಿಎಸ್) ಉಪಮೇಯರ್ ಆಗಿದ್ದರು. ಎರಡನೇ ಅವಧಿಯಲ್ಲಿ ತಸ್ಲಿಂ(ಜೆಡಿಎಸ್) ಮತ್ತು ಸಿ.ಶ್ರೀಧರ್(ಕಾಂಗ್ರೆಸ್) ಅಧಿಕಾರ ನಡೆಸಿದರು. ರಾಜ್ಯದಲ್ಲಿದ್ದ ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರ ಪತನವಾಗಿದ್ದರಿಂದ ಪಾಲಿಕೆಯಲ್ಲಿನ ಮೈತ್ರಿಯೂ ಹಾಳಾಯಿತು. ಹಾಗಾಗಿ 3ನೇ ಅವಧಿಯಲ್ಲಿ ಜೆಡಿಎಸ್‌ನ ರುಕ್ಮಿಣಿ ಮಾದೇಗೌಡ ಮೇಯರ್ ಆದರೆ ಕಾಂಗ್ರೆಸ್‌ನ ಅನ್ವರ್ ಉಪಮೇಯರ್ ಆದರು. ಆದರೆ ಚುನಾವಣೆಯಲ್ಲಿ ತಪ್ಪು ಮಾಹಿತಿ ನೀಡಿದ್ದರಿಂದ ರುಕ್ಮಿಣಿ ಮಾದೇಗೌಡ ಸದಸ್ಯತ್ವ ಕಳೆದುಕೊಂಡರು. ನಂತರ ನಡೆದ ಮೇಯರ್ ಚುನಾವಣೆಯಲ್ಲಿ ಬಿಜೆಪಿಯ ಸುನಂದಾ ಪಾಲನೇತ್ರ ಮೇಯರ್ ಗಾದಿಗೇರಿದರು. 4ನೇ ಅವಧಿಯಲ್ಲಿ ಬಿಜೆಪಿಯ ಶಿವಕುಮಾರ್ ಮೇಯರ್ ಹಾಗೂ ಡಾ.ಜಿ.ರೂಪಾ ಉಪಮೇಯರ್ ಆದರು. ಇವರ ಅಧಿಕಾರಾವಧಿ ಕಳೆದ ಸೆಪ್ಟೆಂಬರ್ 5ಕ್ಕೆ ಮುಕ್ತಾಯವಾಯಿತಾದರೂ ಸದಸ್ಯರ ಅಧಿಕಾರದ ಅವಧಿ ನ.16ರವರೆಗೆ ಇರುವುದರಿಂದ ಮೇಯರ್ ಹಾಗೂ ಉಪ ಮೇಯರ್ ಅಧಿಕಾರದಲ್ಲಿ ಮುಂದುವರಿದಿದ್ದಾರೆ. ಚುನಾವಣೆ ವಿಳಂಬ ಇನ್ನಿತರ ಕಾರಣಗಳಿಂದ ಐದನೇ ಅವಧಿ ಎರಡು ತಿಂಗಳಿಗೆ ಕ್ಷೀಣಿಸಿದ್ದರಿಂದ ಚುನಾವಣೆ ನಡೆಸಲಾಗಲಿಲ್ಲ

ಯುವಶಕ್ತಿಗೆ ಬಿಜೆಪಿ ಸಾರಥ್ಯ; ವಿಜಯೇಂದ್ರರಿಗೆ 'ಜೈ' ಎಂದ ಮೈಸೂರು ಬಿಜೆಪಿ ನಾಯಕರು

ಮೈಸೂರು, ನ.10(ಎಸ್‌ಬಿಡಿ)– ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಪುತ್ರ, ಶಿಕಾರಿಪುರ ಶಾಸಕ ಬಿ.ವೈ.ವಿಜಯೇಂದ್ರ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷರನ್ನಾಗಿ ನೇಮಕ ಮಾಡಿರುವುದರಿಂದ ಪಕ್ಷದಲ್ಲಿ ಹೊಸ ಚೈತನ್ಯ ಮೂಡಿದಂತಿದೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿನ ಸೋಲಿನ ಛಾಯೆ ಜೊತೆಗೆ ಕಾಂಗ್ರೆಸ್ ವ್ಯಂಗ್ಯಾಸ್ತ್ರಗಳಿಂದ ಪಕ್ಷ ಸಂಘಟನೆ ಬಗ್ಗೆ ನಿರಾಸಕ್ತಿ ಹೊಂದಿದ್ದ ಕಾರ್ಯಕರ್ತರಿಗೆ ಸ್ಫೂರ್ತಿ ಬಂದಂತಾಗಿದೆ. ಹೈಕಮಾಂಡ್ ನಿರ್ಧಾರವನ್ನು ಪಕ್ಷದ ಹಿರಿಯರಾದಿಯಾಗಿ ಎಲ್ಲಾ ನಾಯಕರು, ಮುಖಂಡರು ಸ್ವಾಗತಿಸಿದ್ದಾರೆ. ಮೈಸೂರಿನ ಹಲವು ಮುಖಂಡರೂ ವಿಜಯೇಂದ್ರ ಅವರ ಆಯ್ಕೆ ಬಗ್ಗೆ ಖುಷಿ ವ್ಯಕ್ತಪಡಿಸಿದ್ದಾರೆ.

ಯುವಶಕ್ತಿಗೆ ಅವಕಾಶ...



ಬಹಳ ತಿಂಗಳುಗಳಿಂದ ನೆನೆಗುದಿಗೆ ಬಿದ್ದಿದ್ದ ಬಿಜೆಪಿ ರಾಜ್ಯಾಧ್ಯಕ್ಷರ ಆಯ್ಕೆ ಇಂದು ನೆರವೇರಿದೆ. ಆ ಸ್ಥಾನಕ್ಕೆ ಯುವ ನಾಯಕರಾದ ವಿಜಯೇಂದ್ರ ಯಡಿಯೂರಪ್ಪನವರನ್ನು ನೇಮಕ ಮಾಡಲಾಗಿದೆ. ಅವರಿಗೆ ವೈಯಕ್ತಿಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇಡೀ ದೇಶಾದ್ಯಂತ ಅಭಿವೃದ್ಧಿ ಕಾರ್ಯಗಳಿಂದ ಹೊಸತನದ ರಾಜಕಾರಣದವರೆಗೂ ಎಲ್ಲಾ ಕಡೆ ಯುವಶಕ್ತಿಯೇ ಎದ್ದು ಕಾಣುತ್ತಿದೆ. ನಮ್ಮ ಕೇಂದ್ರದ ನಾಯಕರು ಹೊಸ ಚೈತನ್ಯವನ್ನು ನೀಡಬೇಕೆಂದು ಯುವಶಕ್ತಿಗೆ ಅವಕಾಶ ಮಾಡಿಕೊಟ್ಟಿದ್ದಾರೆ. ವಿಜಯೇಂದ್ರ ಅವರಿಗೆ ಶುಭವಾಗಲಿ.

-ಪ್ರತಾಪ್ ಸಿಂಹ, ಸಂಸದರು ಮೈಸೂರು–ಕೊಡಗು

ವಿಜಯೇಂದ್ರರ ಆಯ್ಕೆ ಸಂತೋಷ ತಂದಿದೆ



ವಿಜಯೇಂದ್ರ ಅವರ ಆಯ್ಕೆ ನಮಗೆಲ್ಲಾ ಸಂತೋಷ ತಂದಿದೆ. ಪಕ್ಷದ ರಾಜ್ಯದ ಜವಾಬ್ದಾರಿಯನ್ನು ಸಮರ್ಥ ಯುವಕನ ಕೈಗೆ ನೀಡಿರುವ ಕೇಂದ್ರದ ನಾಯಕರ ನಿರ್ಧಾರ ಸ್ವಾಗತಾರ್ಹ. ಯುವಮೋರ್ಚಾ ಪ್ರಧಾನ ಕಾರ್ಯದರ್ಶಿಯಾಗಿ, ರಾಜ್ಯ ಘಟಕದ ಉಪಾಧ್ಯಕ್ಷರಾಗಿ ಕೆಲಸ ಮಾಡಿದ ವಿಜಯೇಂದ್ರ ಅವರಿಗೆ ಈಗ ಅಧ್ಯಕ್ಷರಾಗಿ ಬಡ್ತಿ ಸಿಕ್ಕಿದೆ. ತಂದೆಯವರ ಅಪಾರ ಅನುಭವವನ್ನು ಬಳಸಿಕೊಂಡು ತಮ್ಮ ವರ್ಚಸ್ಸಿನೊಂದಿಗೆ ಕೆಲಸ ಮಾಡಲಿದ್ದಾರೆ. ಕೆ.ಆರ್.ಪೇಟೆ ವಿಧಾನಸಭಾ ಕ್ಷೇತ್ರದ ಉಸ್ತುವಾರಿಯಾಗಿದ್ದಾಗ ನಾನೂ ಅವರೊಂದಿಗೆ ಕೆಲಸ ಮಾಡಿದ್ದೇನೆ. ಅವರ ಕೆಲಸದ ವೈಖರಿ, ಸಂಘಟನೆಯನ್ನು ತಿಳಿದಿದ್ದೇನೆ. ಕೋವಿಡ್ ಸಂದರ್ಭದಲ್ಲಿ ಯುವಮೋರ್ಚಾ ವತಿಯಿಂದ ಮನೆ ಮನೆಗೆ ಔಷಧಿ ತಲುಪಿಸುವ ಮಾದರಿ ಕಾರ್ಯಕ್ರಮದ ಮೂಲಕ ದೇಶದ ಗಮನ ಸೆಳೆದಿದ್ದರು. ಹಿರಿಯರು ಸೇರಿದಂತೆ ಎಲ್ಲರನ್ನೂ ಒಟ್ಟಿಗೆ ಕರೆದುಕೊಂಡು ಹೋಗುವ ಮೂಲಕ ಪಕ್ಷಕ್ಕೆ ಶಕ್ತಿ ತುಂಬುವ ಸಾಮರ್ಥ್ಯ ಅವರಿಗಿದೆ. ಅದೇ ರೀತಿಯಲ್ಲಿ ಮುಂದುವರೆಯುತ್ತಾರೆ.

-ಟಿ.ಎಸ್.ಶ್ರೀವತ್ಸ, ಶಾಸಕರು

ಅತ್ಯುತ್ತಮ ನಿರ್ಧಾರವಿದು...



ಪಕ್ಷದ ಸಂಘಟನೆ ದೃಷ್ಟಿಯಿಂದ ಬಿಜೆಪಿ ಹೈಕಮಾಂಡ್ ಅತ್ಯುತ್ತಮ ತೀರ್ಮಾನ ತೆಗೆದುಕೊಂಡಿದೆ. ಇದರಿಂದ ವಿಜಯೇಂದ್ರ ಅವರಿಗೆ ಮಾತ್ರ ಉಜ್ವಲ ಭವಿಷ್ಯವಿದೆ ಎಂದುಕೊಳ್ಳಬಾರದು. ರಾಜ್ಯದಲ್ಲಿ ನೆಲಕಚ್ಚಿರುವ ಸಂಘಟನೆಗೆ ಇವರ ಮುಖಾಂತರ ಶಕ್ತಿ ತುಂಬುವುದಕ್ಕೆ ಇದು ದಾರಿಯಾಗಿದೆ. ರಾಷ್ಟ್ರೀಯ ನಾಯಕರು ರಾಜ್ಯದ ಪರಿಸ್ಥಿತಿ, ಕಾರ್ಯಕರ್ತರು ಹಾಗೂ ಜನರ ಭಾವನೆ ಅರ್ಥ ಮಾಡಿಕೊಂಡು ಸಕಾಲದಲ್ಲಿ ಅತ್ಯುತ್ತಮ ನಿರ್ಧಾರ ಕೈಗೊಂಡಿದ್ದಾರೆ. ಈ ನಿರ್ಧಾರವನ್ನು ರಾಜ್ಯದ ಕಾರ್ಯಕರ್ತರು ಒಮ್ಮನಸ್ಸಿನಿಂದ ಸ್ವೀಕಾರ ಮಾಡಿದ್ದಾರೆ. ರಾಷ್ಟ್ರೀಯ ನಾಯಕರಿಗೆ ಹೃದಯ ಪೂರ್ವಕ ಅಭಿನಂದನೆ ಸಲ್ಲಿಸುತ್ತೇನೆ. ವಿಜಯೇಂದ್ರ ಅವರ ನಾಯಕತ್ವದಲ್ಲಿ ಕೆಲಸ ಮಾಡಲು ನಾವು ತಯಾರಿದ್ದೇವೆ. ಅವರ ಮುಖಾಂತರ ರಾಜ್ಯದಲ್ಲಿ ಮುಂದಿನ ದಿನಗಳಲ್ಲಿ ಒಳ್ಳೆಯ ದಿನಗಳನ್ನು ನಿಶ್ಚಿತವಾಗಿ ಕಾಣುತ್ತೇವೆ ಎಂಬ ವಿಶ್ವಾಸವಿದೆ.

-ಸಿ.ಹೆಚ್.ವಿಜಯಶಂಕರ್, ಮಾಜಿ ಸಚಿವರು

ಸಂಘಟನೆಗೆ ಕೈಜೋಡಿಸುತ್ತೇವೆ...



ಉತ್ಸಾಹಿ ಯುವ ಶಾಸಕ, ಅತ್ಯುತ್ತಮ ಸಂಘಟಕ ಬಿ.ವೈ.ವಿಜಯೇಂದ್ರ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷರನ್ನಾಗಿ ನೇಮಕ ಮಾಡಿದ್ದು ಒಳ್ಳೆಯ ನಿರ್ಧಾರ. ಅವರ ತಂದೆ ಯಡಿಯೂರಪ್ಪನವರು ರಾಜ್ಯದಲ್ಲಿ ಪಕ್ಷ ಕಟ್ಟಿ ಬೆಳೆಸಿ, ಅಧಿಕಾರಕ್ಕೆ ತಂದವರು. ತಂದೆಯ ಪ್ರಭಾವ ಹಾಗೂ ಸ್ವಶಕ್ತಿಯಿಂದ ವಿಜಯೇಂದ್ರ ಅವರು ಪಕ್ಷದ ಕೆಲಸ ಮಾಡಿದ್ದಾರೆ. ಪಕ್ಷದ ರಾಜ್ಯ ನಾಯಕ ಸ್ಥಾನಕ್ಕೆ ಯುವ ಉತ್ಸಾಹಿಯನ್ನು ಆಯ್ಕೆ ಮಾಡಿರುವುದಕ್ಕಾಗಿ ಪ್ರಧಾನಿ ಮೋದಿಯವರು, ರಾಷ್ಟ್ರಾಧ್ಯಕ್ಷರಾದ ನಡ್ಡಾ ಹಾಗೂ ಅಮಿತ್ ಶಾ ಅವರಿಗೆ ಧನ್ಯವಾದ ತಿಳಿಸುತ್ತೇನೆ. ಹಾಗೆಯೇ ವಿಜಯೇಂದ್ರ ಅವರಿಗೆ ಅಧಿದೇವತೆ ತಾಯಿ ಚಾಮುಂಡೇಶ್ವರಿ ಮತ್ತಷ್ಟು ಶಕ್ತಿ ನೀಡಿ, ಆಶೀರ್ವದಿಸಲಿ. ಮುಂಬರುವ ದಿನಗಳಲ್ಲಿ ಪಕ್ಷದ ಸಂಘಟನೆಗೆ ಶಕ್ತಿಮೀರಿ ಅವರೊಂದಿಗೆ ಕೈಜೋಡಿಸುತ್ತೇವೆ.

-ಎಲ್.ನಾಗೇಂದ್ರ, ಮಾಜಿ ಶಾಸಕ

ಎಲ್ಲರೊಂದಿಗೆ ಪಕ್ಷ ಸಂಘಟಿಸಲಿದ್ದಾರೆ...



ಬಿಜೆಪಿ ಹೈಕಮಾಂಡ್ ಸೂಕ್ತ ಸಮಯದಲ್ಲಿ ಉತ್ತಮ ನಿರ್ಧಾರ ತೆಗೆದುಕೊಂಡಿದೆ. ಹಿರಿಯರಾದ ಬಿ.ಎಸ್.ಯಡಿಯೂರಪ್ಪನವರು ಬಹಳಷ್ಟು ಹೋರಾಟ ಮಾಡಿ, ಬಿಜೆಪಿಯನ್ನು ಅಧಿಕಾರಕ್ಕೆ ತಂದಿದ್ದರು. ಅವರ ಸುಪುತ್ರ ವಿಜಯೇಂದ್ರ ಅವರು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಖಂಡಿತವಾಗಿ ಲೋಕಸಭೆ ಸೇರಿದಂತೆ ಮುಂಬರುವ ಎಲ್ಲಾ ಚುನಾವಣೆಯಲ್ಲೂ ಪಕ್ಷವನ್ನು ಮುನ್ನಡೆಸಲು ಶಕ್ತರಿದ್ದಾರೆ. ಯುವನಾಯಕನ ಆಯ್ಕೆ ಮಾಡಿದ ಹೈಕಮಾಂಡ್‌ಗೆ ಅಭಿನಂದನೆ ಸಲ್ಲಿಸುತ್ತೇನೆ. ನೂತನ ರಾಜ್ಯಾಧ್ಯಕ್ಷರಾದ ವಿಜಯೇಂದ್ರ ಅವರಿಗೂ ಆತ್ಮೀಯ ಅಭಿನಂದನೆಗಳು.

-ಸಂದೇಶ್ ಸ್ವಾಮಿ, ಮಾಜಿ ಮೇಯರ್

ತಂದೆಯಂತೆ ಅತ್ಯುತ್ತಮ ಸಂಘಟಕ...



ಬಿ.ವೈ.ವಿಜಯೇಂದ್ರ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷರನ್ನಾಗಿ ನೇಮಕ ಮಾಡಿದ್ದರಿಂದ ಜಾತ್ಯಾತೀತವಾಗಿ ಯುವ ಸಮೂಹ ಸಂಭ್ರಮಿಸುತ್ತಿದೆ. ಹಿರಿಯ ನಾಯಕರಾದ ಬಿ.ಎಸ್.ಯಡಿಯೂರಪ್ಪನವರು ಯಾವ ರೀತಿಯಲ್ಲಿ ಪಕ್ಷ ಸಂಘಟನೆ ಮಾಡಿದರೋ ಅವರ ಸುಪುತ್ರ ವಿಜಯೇಂದ್ರ ಅವರ ನೇತೃತ್ವದಲ್ಲೂ ಬಿಜೆಪಿ ಶಕ್ತಿ ಹೆಚ್ಚಲಿದೆ. ಅದರಲ್ಲೂ ಹಳೇ ಮೈಸೂರು ಭಾಗದಲ್ಲಿ ಬಿಜೆಪಿ ಮತ್ತಷ್ಟು ಬಲಿಷ್ಠಗೊಳ್ಳಲಿದೆ. ಕೇಂದ್ರದ ನಾಯಕರಿಗೆ ಧನ್ಯವಾದ ಸಲ್ಲಿಸುತ್ತೇನೆ.

-ಎಲ್.ಆರ್.ಮಹದೇವಸ್ವಾಮಿ, ಮಾಜಿ ಅಧ್ಯಕ್ಷ ಕರ್ನಾಟಕ ಮೃಗಾಲಯ ಪ್ರಾಧಿಕಾರ

ಸಕಾಲಿಕ ಸೂಕ್ತ ನಿರ್ಧಾರ



ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ವಿಜಯೇಂದ್ರರ ನೇಮಕ ಸೂಕ್ತ ಮತ್ತು ಸಕಾಲಿಕ ನಿರ್ಧಾರ. ಪಕ್ಷದ ವರಿಷ್ಠರು ಯುವ ನಾಯಕನ ಗುರುತಿಸಿ, ಮಹತ್ವದ ಜವಾಬ್ದಾರಿ ನೀಡಿರುವುದು ಸೂಕ್ತವಾಗಿದೆ. ವರಿಷ್ಠರ ಈ ಒಂದು ನಿರ್ಧಾರ ಮುಂದಿನ ದಿನಗಳಲ್ಲಿ ಪಕ್ಷಕ್ಕೆ ಯಶಸ್ಸು ತಂದು ಕೊಡಲಿದೆ. ವಿಜಯೇಂದ್ರರ ನೇಮಕವನ್ನು ಆತ್ಮೀಯವಾಗಿ ಸ್ವಾಗತಿಸುತ್ತೇನೆ.

-ಮೋಹನ್, ಬಿಜೆಪಿ ವಕ್ತಾರ

ಪಕ್ಷಕ್ಕೆ ಮತ್ತಷ್ಟು ಬಲ ಬಂದಿದೆ...



ಬಿಜೆಪಿ ನೂತನ ರಾಜ್ಯಾಧ್ಯಕ್ಷರಾಗಿ ನೇಮಕವಾಗಿರುವ ಶಾಸಕರಾದ ವಿಜಯೇಂದ್ರರವರಿಗೆ ಅಭಿನಂದನೆಗಳು. ಇವರ ಆಯ್ಕೆಗೆ ಕಾರಣಕರ್ತರಾದ ರಾಷ್ಟ್ರೀಯ ನಾಯಕರಿಗೆ ಧನ್ಯವಾದಗಳು. ವಿಜಯೇಂದ್ರರ ನೇಮಕದಿಂದ ಪಕ್ಷ ಮತ್ತಷ್ಟು ಬಲಗೊಳ್ಳಲಿದೆ. ಯುವ ಸಮುದಾಯ ಬಿಜೆಪಿಯನ್ನು ಹೆಚ್ಚು ಬೆಂಬಲಿಸಲಿದೆ.

-ಬಿ.ವಿ.ಮಂಜುನಾಥ್, ನಗರ ಪಾಲಿಕೆ ಸದಸ್ಯ

ರಾಜ್ಯ ಬಿಜೆಪಿಗೆ ಬಲಿಷ್ಠ ನಾಯಕತ್ವ...



ಕರ್ನಾಟಕ ಬಿಜೆಪಿ ನೂತನ ಸಾರಥಿಯಾಗಿ ಯುವ ನಾಯಕರಾದ ಬಿ.ವೈ. ವಿಜಯೇಂದ್ರರವರನ್ನು ನೇಮಕ ಮಾಡಿ ಆದೇಶ ಹೊರಡಿಸಿರುವ ರಾಷ್ಟ್ರೀಯ ಅಧ್ಯಕ್ಷರಾದ ಜೆಪಿ ನಡ್ಡಾರವರಿಗೆ ಅಭಿನಂದನೆಗಳು. ಯುವ ನಾಯಕ, ಸಂಘಟಕ, ಎಲ್ಲಾ ಸಮುದಾಯಗಳ ವಿಶ್ವಾಸ ಗಳಿಸಿರುವ ವಿಜಯೇಂದ್ರ ಅವರನ್ನು ನೇಮಿಸುವ ಮೂಲಕ ಕರ್ನಾಟಕಕ್ಕೆ ಒಂದು ಬಲಿಷ್ಠ ನಾಯಕತ್ವವನ್ನು ನೀಡಿದಂತಾಗಿದೆ.

-ಕೆ.ವಸಂತ ಕುಮಾರ್, ಬಿಜೆಪಿ ಜಿಲ್ಲಾ ಸಹ ವಕ್ತಾರ

ಮೈಸೂರು ಮಿತ್ರ

ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ 'ಕನ್ನಡ ಯುವ ರತ್ನ' ಪ್ರಶಸ್ತಿ ಪ್ರದಾನ

ಮೈಸೂರು, ನ.10(ಎಂಟಿವೈ)– ಪವರ್‌ಸ್ಟಾರ್ ಡಾ.ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ 'ಕನ್ನಡದ ಯುವರತ್ನ' ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.



ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲಾಮಂಟಪದಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಹಾಗೂ ನಟ ಡಾ. ಪುನೀತ್ ರಾಜ್‌ಕುಮಾರ್ ಸ್ಮರಣ ಕಾರ್ಯಕ್ರಮದಲ್ಲಿ ಎಂಟು ಮಂದಿಗೆ ಕನ್ನಡದ ಯುವರತ್ನ ಪ್ರಶಸ್ತಿ ಪ್ರಧಾನ ಮಾಡಲಾಯಿತು. ಕಾರ್ಯಕ್ರಮದಲ್ಲಿ ಸಮಾಜ ಸೇವಕ ಡಾ.ಕೆ.ರಘುರಾಮ್ ವಾಜಪೇಯಿ ಮಾತನಾಡಿ, ಕರ್ನಾಟಕ ಎಂದು ನಾಮಕರಣ ಮಾಡಿ 50 ವರ್ಷ ಸಂದಿರುವ ಹಿನ್ನೆಲೆಯಲ್ಲಿ ಈ ಬಾರಿ ಸುವರ್ಣ ಕನ್ನಡರಾಜ್ಯೋತ್ಸವ ಆಚರಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನವು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಆಯೋಜಿಸಿ ಸಾಧಕರಿಗೆ ಪ್ರಶಸ್ತಿ ನೀಡಿ ಗೌರವಿಸುತ್ತಿರುವುದು ಶ್ಲಾಘನೀಯ ಎಂದರು.

ಇದೇ ವೇಳೆ ರೈತಪರ ಹೋರಾಟಗಾರ ಕಣೇನೂರು ಜಗದೀಶ್, ಸಮಾಜಸೇವಕಿ ಮಂಜುಳಾ, ಪತ್ರಿಕಾ ಛಾಯಾಗ್ರಾಹಕ ಗವಿಮಠ ರವಿ, ಉದ್ಯಮಿ ಶಿವರಾಜ್ ಅರಸ್, ಬಾಲ ಪ್ರತಿಭೆ ಮೊಹಮ್ಮದ್ ಹಸೇನ್ ಖಾನ್, ಸಹಕಾರ ಕ್ಷೇತ್ರದಿಂದ ಚೇತನ್ ಆರಾಧ್ಯ, ಉದ್ಯಮ ಕ್ಷೇತ್ರದ ಮನುಗೌಡ, ಪೈಲಟ್ ಕುಮಾರಿ ಅನನ್ಯ ಎ.ಜೈನ್ ಅವರಿಗೆ ಕನ್ನಡದ ಯುವರತ್ನ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಮೇಲುಕೋಟೆ ವೆಂಗಿಪುರ ಮಠ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ ಸಾನಿಧ್ಯವಹಿಸಿದ್ದ ಕಾರ್ಯಕ್ರಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸಂಸ್ಕೃತ ವಿದ್ವಾಂಸರಾದ ಡಾ.ಕೆ.ಲೀಲಾ ಪ್ರಕಾಶ್, ಸಮಾಜ ಸೇವಕಿ ವಿದ್ಯಾ, ಶ್ರೀಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ಬಸವರಾಜೇಂದ್ರ ಸ್ವಾಮಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೂರನೇ ಪುಟದಿಂದ

ಬಿ.ವೈ.ವಿಜಯೇಂದ್ರ ರಾಜ್ಯ ಬಿಜೆಪಿ ಸಾರಥಿ

ಪ್ರತಿಭಟನೆ ವ್ಯಕ್ತಪಡಿಸಿದ್ದರು ಎಂಬುದು ಗಮನಾರ್ಹ. ಬಿಜೆಪಿ ರಾಜ್ಯ ಯುವ ಮೋರ್ಚಾ ಕಾರ್ಯದರ್ಶಿಯಾಗಿ ನಂತರ ರಾಜ್ಯ ಉಪಾಧ್ಯಕ್ಷರಾಗಿ ಸಂಘಟನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ವಿಜಯೇಂದ್ರ, ಚಿಕ್ಕ ವಯಸ್ಸಿನಲ್ಲೇ ಸಂಘಟನಾ ಚತುರರಾಗಿ ಹೊರ ಹೊಮ್ಮಿದ್ದರು. ಬಿಜೆಪಿ ಆಡಳಿತದಲ್ಲಿ ನಡೆದ ಬಹುತೇಕ ಎಲ್ಲಾ ಉಪ ಚುನಾವಣೆಗಳಲ್ಲೂ ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ವಿಜಯೇಂದ್ರ ಕಾರಣಕರ್ತರಾಗಿದ್ದರು. ಆ ಸಂದರ್ಭದಲ್ಲಿ ಅವರನ್ನು 'ಬೈ ಎಲೆಕ್ಷನ್ ಹೀರೋ' ಎಂದು ಕಾರ್ಯಕರ್ತರು ಅಕ್ಕರೆಯಿಂದ ಕರೆಯುತ್ತಿದ್ದರು. ಇತ್ತೀಚೆಗೆ ನಡೆದ ಸಾರ್ವತ್ರಿಕ ವಿಧಾನಸಭಾ ಚುನಾವಣೆಯಲ್ಲೂ ಕೂಡ ವರುಣ ಸೇರಿದಂತೆ ಕೆಲ ಕ್ಷೇತ್ರಗಳಲ್ಲಿ ವಿಜಯೇಂದ್ರ ಸ್ಪರ್ಧಿಸಬೇಕು ಎಂದು ಕಾರ್ಯಕರ್ತರು ಅಭಿಮಾನದಿಂದ ಆಗ್ರಹಿಸಿದ್ದರು. ಆದರೆ ಅವರು ತಮ್ಮ ತಂದೆ ಸ್ಪರ್ಧಿಸುತ್ತಿದ್ದ ಶಿಕಾರಿಪುರ ಕ್ಷೇತ್ರದಲ್ಲಿ ಸ್ಪರ್ಧಿಸಿ ಪ್ರಥಮ ಪ್ರಯತ್ನದಲ್ಲೇ ಶಾಸಕರಾಗಿ ವಿಧಾನಸಭೆ ಪ್ರವೇಶಿಸಿದ್ದಾರೆ.

ವಿಧಾನಸಭೆ ಚುನಾವಣೆಗೂ ಮುನ್ನವೇ ಪಕ್ಷದ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರ ಅಧಿಕಾರಾವಧಿ ಮುಗಿದಿತ್ತು. ಆದರೆ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ವರಿಷ್ಠರು ಅವರನ್ನೇ ಅಧ್ಯಕ್ಷರನ್ನಾಗಿ ಮುಂದುವರೆಸಿದ್ದರು. ಚುನಾವಣೆಯಲ್ಲಿ ಬಿಜೆಪಿ ಸೋಲನುಭವಿಸಿದ ಹಿನ್ನೆಲೆಯಲ್ಲಿ ಸಮರ್ಥ ನಾಯಕರನ್ನು ರಾಜ್ಯಾಧ್ಯಕ್ಷರನ್ನಾಗಿ ಮಾಡಬೇಕು ಎಂಬ ನಿಟ್ಟಿನಲ್ಲಿ ವರಿಷ್ಠರು ಚಿಂತನೆ ನಡೆಸುತ್ತಿದ್ದರು. ಲಿಂಗಾಯತ ಸಮಾಜದಲ್ಲಿ ಹಿರಿಯ ಮುಖಂಡರಾದ ಬಸನಗೌಡ ಪಾಟೀಲ್ ಯತ್ನಾಳ್ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿದ್ದರೆ, ಮಾಜಿ ಸಚಿವ ವಿ.ಸೋಮಣ್ಣ ಅವರು ತಮಗೆ ಅಧ್ಯಕ್ಷ ಸ್ಥಾನ ನೀಡಬೇಕು ಎಂದು ಬಹಿರಂಗವಾಗಿಯೇ ವರಿಷ್ಠರಲ್ಲಿ ಮನವಿ ಸಲ್ಲಿಸಿದ್ದರು. ಒಕ್ಕಲಿಗ ಸಮಾಜದಿಂದ ಸಿ.ಟಿ.ರವಿ, ಡಾ. ಅಶ್ವತ್ಥನಾರಾಯಣ್ ಹೆಸರುಗಳು ಕೇಳಿಬಂದಿದ್ದವು. ಈ ಮಧ್ಯೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ರಾಜ್ಯಾಧ್ಯಕ್ಷರಾಗುತ್ತಾರೆ ಎಂಬ ಮಾತುಗಳೂ ಕೂಡ ಬಲವಾಗಿ ಕೇಳಿಬಂದಿತ್ತು. ರಾಜ್ಯಾಧ್ಯಕ್ಷರ ಅಧಿಕಾರದ ಅವಧಿ ಮುಗಿದು ತಿಂಗಳುಗಟ್ಟಲೇ ಆದರೂ ನೂತನ ಅಧ್ಯಕ್ಷರನ್ನು ನೇಮಕ ಮಾಡದೇ ಇರುವುದು ಹಾಗೂ ವಿಧಾನಸಭೆ ವಿಪಕ್ಷ ನಾಯಕನ ಆಯ್ಕೆಯಾಗದಿರುವುದನ್ನು ಆಡಳಿತಾರೂಢ ಕಾಂಗ್ರೆಸ್ ಪಕ್ಷ ಅಸ್ತ್ರವಾಗಿ ಬಳಸಿಕೊಂಡು ಟೀಕಾ ಪ್ರಯೋಗ ಮಾಡುತ್ತಿತ್ತು. ಕೊನೆಗೂ ಬಿಜೆಪಿ ವರಿಷ್ಠರು ವರ್ಚಸ್ವಿ ಯುವ ನಾಯಕ ಬಿ.ವೈ.ವಿಜಯೇಂದ್ರ ಅವರಿಗೆ ರಾಜ್ಯಾಧ್ಯಕ್ಷ ಸ್ಥಾನ ವಹಿಸಿದ್ದಾರೆ.

ಲೋಕಸಭಾ ಚುನಾವಣೆ ಸವಾಲಾಗಿ ಸ್ವೀಕರಿಸಿದ್ದೇನೆ...

ನನ್ನ ಮುಂದೆ ಲೋಕಸಭೆ ಚುನಾವಣೆ ಇದೆ. ಅದನ್ನು ಸವಾಲಾಗಿ ಸ್ವೀಕರಿಸುತ್ತೇನೆ. ರಾಜ್ಯಾದ್ಯಂತ ಪ್ರವಾಸ ಮಾಡಿ ಬಿಜೆಪಿಗೆ ಹೊಸ ಚೈತನ್ಯ ತುಂಬಲು ಕಾರ್ಯಕರ್ತರೊಂದಿಗೆ ಕಾರ್ಯಕರ್ತನಾಗಿ ದುಡಿಯುವ ಸಂಕಲ್ಪ ತೊಟ್ಟಿದ್ದೇನೆ. ನಾಡಿನ ಜನರ ಆಶೀರ್ವಾದವೇ ನನಗೆ ಶ್ರೀರಕ್ಷೆ ಎಂದು ಹೇಳಿದರು. ಯಡಿಯೂರಪ್ಪ ಅವರ ಮಗ ಎಂದು ಹೇಳಿಕೊಳ್ಳಲು ತನಗೆ ಹೆಮ್ಮೆ ಇದೆ. ಆದರೆ ಅವರ ಮಗ ಎಂಬ ಕಾರಣಕ್ಕಾಗಿಯೇ ನನಗೆ ಪಕ್ಷದ ರಾಜ್ಯಾಧ್ಯಕ್ಷ ಸ್ಥಾನವನ್ನು ನೀಡಲಾಗಿದೆ ಎಂಬುದು ಸರಿಯಲ್ಲ ಎಂದ ಅವರು, ಪಕ್ಷದ ಹಿರಿಯರಾದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿ.ಸೋಮಣ್ಣ, ಆರ್.ಅಶೋಕ್, ಬಸನಗೌಡ ಪಾಟೀಲ್ ಯತ್ನಾಳ್ ಸೇರಿದಂತೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷವನ್ನು ಸಂಘಟಿಸುತ್ತೇನೆ. ಪಕ್ಷ ಬಿಡುವ ಯೋಚನೆಯಲ್ಲಿರುವವರನ್ನೂ ಕೂಡ ಕರೆದುಕೊಂಡು ಪಕ್ಷ ಸಂಘಟಿಸುತ್ತೇನೆ ಎಂದು ವಿಜಯೇಂದ್ರ ಹೇಳಿದರು.

ಮರು ಪರೀಕ್ಷೆಗೆ ಹೈಕೋರ್ಟ್ ಆದೇಶ

ಬಂದ ನಂತರ 800 ಪಿಎಸ್‌ಐ ಹುದ್ದೆಗಳನ್ನು ಭರ್ತಿ ಮಾಡಲು ತೀರ್ಮಾನ ಕೈಗೊಂಡಿತ್ತು. ಆದರೆ, ಹಳೆಯ ನೇಮಕಾತಿ ವಿಚಾರದಲ್ಲಿ ನ್ಯಾಯಾಲಯ ತೀರ್ಪು ನೀಡದ ಕಾರಣ ಹೊಸ ನೇಮಕಾತಿ ಪ್ರಕ್ರಿಯೆಗೆ ಇನ್ನು ಚಾಲನೆ ನೀಡಿರಲಿಲ್ಲ.

ಇದೀಗ ನ್ಯಾಯಾಲಯ ತೀರ್ಪು ಪ್ರಕಟಿಸಿರುವುದರಿಂದ 545ರ ಜೊತೆಗೆ 800 ಹುದ್ದೆಗಳಿಗೂ ಏಕಕಾಲದಲ್ಲಿ ಪರೀಕ್ಷೆ ನಡೆಸಲಿದೆಯೇ ಎಂದು ಕಾದು ನೋಡಬೇಕು.

ರಾಜ್ಯ ಸರ್ಕಾರ ಮರು ಪರೀಕ್ಷೆ ನಡೆಸಲು ಉದ್ದೇಶಿಸಿದ್ದ ತೀರ್ಮಾನದಲ್ಲಿ ನ್ಯಾಯಾಲಯ ಮಧ್ಯೆ ಪ್ರವೇಶ ಮಾಡಲಾಗದು ಎಂದು ವಿಭಾಗೀಯ ಪೀಠ ಈ ಹಿಂದೆಯೇ ಮೌಖಿಕವಾಗಿ ತಿಳಿಸಿತ್ತು. 545 ಹುದ್ದೆಗೆ 2021ರ ಅಕ್ಟೋಬರ್ 3ರಂದು ಲಿಖಿತ ಪರೀಕ್ಷೆ ನಡೆಸಿದ್ದು ಈ ಪರೀಕ್ಷೆಗೆ 54,289 ಅಭ್ಯರ್ಥಿಗಳು ಹಾಜರಾಗಿದ್ದರು. ಪರೀಕ್ಷೆ ಬರೆದವರಲ್ಲಿ 52 ಅಭ್ಯರ್ಥಿಗಳು ಅಕ್ರಮ ಎಸಗಿದ ಕಾರಣ ಆಯ್ಕೆಗೊಂಡಿದ್ದ ಇತರೆ ಅಭ್ಯರ್ಥಿಗಳಿಗೆ ತೀರ್ಪು ನಿರಾಸೆ ತಂದಿದೆ.

ಬಗರ್ ಹುಕುಂ ಮಂಜೂರಾತಿ ಸಮಿತಿ ರಚನೆ

ಮೇಲಿನಂತೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು. ರೈತರು ಎಲ್ಲಾ ಸರ್ವೆ ನಂಬರ್‌ಗಳ ಜಮೀನಿನ ಮಾಹಿತಿಯನ್ನು ಫ್ರೂಟ್ಸ್ ತಂತ್ರಾಂಶದಲ್ಲಿ ನವೆಂಬರ್ ಅಂತ್ಯದೊಳಗೆ ದಾಖಲಿಸಬೇಕು. ಒಂದೆರಡು ಸರ್ವೆ ನಂಬರ್‌ಗಳ ಮಾಹಿತಿಯನ್ನು ದಾಖಲಿಸಿದರೆ ಅಷ್ಟೆ ಮಾತ್ರ ಬೆಳೆ ಪರಿಹಾರ ಸಿಗುತ್ತದೆ. ಬರ ಪರಿಹಾರ ನೀಡುವಂತೆ ಸಲ್ಲಿಸಿರುವ ಮನವಿ ಬಗ್ಗೆ ಕೇಂದ್ರ ಸರ್ಕಾರ ನಿರ್ಧಾರ ಕೈಗೊಂಡ ನಂತರ ರಾಜ್ಯ ಸರ್ಕಾರ ಬೆಳೆ ಪರಿಹಾರ ನೀಡುವ ಬಗ್ಗೆ ಕ್ರಮ ಕೈಗೊಳ್ಳಲಿದೆ ಎಂದರು.

ಕುಡಿಯುವ ನೀರಿಗೆ ಸಮಸ್ಯೆ ಆಗದಂತೆ ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆ ಪಡೆಯಲು ಸೂಚಿಸಿದ್ದು, ಸಮಸ್ಯೆ ಉಂಟಾದ 24 ಗಂಟೆಯೊಳಗೆ ಟ್ಯಾಂಕರ್ ಮೂಲಕ ನೀರು ಒದಗಿಸಲು ನಿರ್ದೇಶನ ನೀಡಲಾಗಿದೆ. ಡಿಸೆಂಬರ್‌ನಿಂದ ಜಾನುವಾರುಗಳ ಮೇವಿಗೆ ಅಭಾವ ಉಂಟಾಗುವ ಸಂಭವವಿದ್ದು, ಮೇವು ಖರೀದಿಸಿ ಗೋಶಾಲೆ ಮೂಲಕ ವಿತರಿಸಲು ಸೂಚಿಸಲಾಗಿದೆ. ಈಗಾಗಲೇ ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಕಾರ್ಯಪಡೆ ರಚಿಸಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿದ್ದು, ನರೇಗಾ ಯೋಜನೆಯಡಿ ಹೆಚ್ಚು ಉದ್ಯೋಗ ನೀಡುವಂತೆಯೂ ತಿಳಿಸಲಾಗಿದೆ.

ಭೂ ವ್ಯಾಜ್ಯ ತ್ವರಿತ ವಿಲೇವಾರಿ: ಒಂದು ವರ್ಷಕ್ಕೂ ಹೆಚ್ಚು ಕಾಲದಿಂದ ತಹಶೀಲ್ದಾರ್ ನ್ಯಾಯಾಲಯದಲ್ಲಿ ಬಾಕಿ ಇದ್ದ 2,215 ಪ್ರಕರಣಗಳನ್ನು 750ಕ್ಕೆ ಇಳಿಸಲಾಗಿದೆ. ಜನವರಿ ವೇಳೆಗೆ 90 ದಿನಕ್ಕೂ ಹೆಚ್ಚು ಅವಧಿಯ ಪ್ರಕರಣಗಳು ಇರಬಾರದು. ಈಗ ಬಾಕಿ ಇರುವ ಪ್ರಕರಣಗಳನ್ನು ಡಿಸೆಂಬರ್ ಅಂತ್ಯದೊಳಗೆ ವಿಲೇವಾರಿ ಮಾಡಲು ಕಟ್ಟಾದೇಶ ಮಾಡಲಾಗಿದೆ. ಪ್ರಕರಣಗಳ ಸರಾಸರಿ ವಿಲೇವಾರಿ ಅವಧಿಯನ್ನು 212 ದಿನಗಳಿಂದ 130 ದಿನಕ್ಕೆ ಇಳಿಸಲಾಗಿದೆ. ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಒಂದು ವರ್ಷ ಮೇಲ್ಪಟ್ಟ 59,339 ಪ್ರಕರಣಗಳು ಬಾಕಿ ಇದ್ದವು ಈಗ ಅವು 30,000 ಇಳಿಕೆಯಾಗಿವೆ, ಮಾರ್ಚ್ ವೇಳೆಗೆ 6 ತಿಂಗಳಿಗಿಂತ ಹೆಚ್ಚು ಅವಧಿಯ ಪ್ರಕರಣ ಇರದಂತೆ ಇತ್ಯರ್ಥಪಡಿಸಬೇಕು, ಇದಕ್ಕಾಗಿ ಎಸಿಗೆ ತತ್ಸಮನಾದ ಅಧಿಕಾರಿಯನ್ನು ನಿಯೋಜಿಸಲಾಗುವುದು ಎಂದು ತಿಳಿಸಿದರು. ತಾಂಡ ಸೇರಿದಂತೆ 1800 ಜನ ವಸತಿ ಪ್ರದೇಶಗಳು ಕಂದಾಯ ಗ್ರಾಮಗಳಾಗಿ ಮಾರ್ಪಾಡು ಮಾಡಿಲ್ಲ, ಜನವರಿ ಅಂತ್ಯಕ್ಕೆ 1500 ಜನ ವಸತಿಗಳನ್ನು ಕಂದಾಯ ಗ್ರಾಮ ಇಲ್ಲವೇ ಉಪಗ್ರಾಮವಾಗಿ ಘೋಷಿಸಲು ಸೂಚಿಸಲಾಗಿದೆ. ಇ–ಕಚೇರಿ ಎಲ್ಲಾ ತಾಲೂಕು ಕಚೇರಿಗಳಲ್ಲಿ ಪ್ರಾಂಭವಾಗಿದ್ದು ಡಿಸೆಂಬರ್ 1ರಿಂದ ಹೊಸ ಇ–ಕಡತ ಆರಂಭಿಸಲು ನಿರ್ದೇಶನ ನೀಡಲಾಗಿದೆ.

17 ಮಂದಿ ಆಸ್ಪತ್ರೆಗೆ ದಾಖಲು


ಗಾಯಗಳಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರೆಲ್ಲರೂ ಸುರಕ್ಷಿತವಾಗಿದ್ದಾರೆ. ದಾಖಲಾದ 17 ಮಂದಿ ಯಲ್ಲಿ ಐವರು ಈಗಾಗಲೇ ಡಿಸ್ಚಾರ್ಜ್ ಆಗಿದ್ದಾರೆ. ಉಳಿದವರು ಆರೋಗ್ಯವಾಗಿ ದ್ದಾರೆ ಎಂದು ಅವರು ತಿಳಿಸಿದರು. ಘಟನೆ ನಡೆದ ಕೆಲವೇ ನಿಮಿಷಗಳಲ್ಲಿ ಪರಿಸ್ಥಿತಿ ಸಹಜ ಸ್ಥಿತಿಗೆ ಮರಳಿದ್ದು, ಭಕ್ತರಿಗೆ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಮತ್ತು ಹಲವಾರು ಸಚಿವರು ಮತ್ತು ರಾಜಕೀಯ ಮುಖಂಡರು ಇತ್ತೀಚಿಗೆ ದೇವಾಲಯಕ್ಕೆ ಭೇಟಿ ನೀಡಿದ್ದರು.

ಪಾಲಿಕೆ ಪರಿಸರ ಅಭಿಯಂತರರ ತಂಡದಿಂದ ಪಟಾಕಿ ಮಳಿಗೆಗಳ ಪರಿಶೀಲನೆ

●ಮೈಸೂರಿನ ಜೆ.ಕೆ.ಮೈದಾನದಲ್ಲಿ ಪಟಾಕಿ ಮಳಿಗೆಗಳಿಗೆ ಅಧಿಕಾರಿ ಭೇಟಿ ●ಹಸಿರು ಪಟಾಕಿ ಬಿಟ್ಟು ಅಪಾಯಕಾರಿ ಪಟಾಕಿ ಮಾರಾಟ ಮಾಡಿದರೆ ಕ್ರಮದ ಎಚ್ಚರಿಕೆ



ಜೆ.ಕೆ.ಮೈದಾನದಲ್ಲಿರುವ ಪಟಾಕಿ ಮಳಿಗೆಗಳಿಗೆ ಪಾಲಿಕೆಯ ಪರಿಸರ ಅಭಿಯಂತರರ ತಂಡ ಭೇಟಿ ನೀಡಿ ಪರಿಶೀಲಿಸಿತು.



ಹಸಿರು ಪಟಾಕಿ ಬಾಕ್ಸ್ ಮೇಲಿರುವ ಕ್ಯೂಆರ್ ಕೋಡ್

ಮೈಸೂರು,ನ.10(ಎಂಟಿವೈ)– ದೇಶದಾದ್ಯಂತ ಅಪಾಯಕಾರಿ ಹಾಗೂ ಪರಿಸರಕ್ಕೆ ಮಾರಕವಾದ ಪಟಾಕಿ ಮಾರಾಟಕ್ಕೆ ಸುಪ್ರೀಂಕೋರ್ಟ್ ನಿಷೇಧ ಹೇರಿರುವ ಹಿನ್ನೆಲೆಯಲ್ಲಿ ಮೈಸೂರು ಮಹಾನಗರ ಪಾಲಿಕೆಯ ಪರಿಸರ ಅಭಿಯಂತರರ ತಂಡ ಶುಕ್ರವಾರ ಪಟಾಕಿ ಅಂಗಡಿಗಳಿಗೆ ತೆರಳಿ ಪರಿಶೀಲನೆ ನಡೆಸಿತು.

ಬೆಳಕಿನ ಹಬ್ಬ ದೀಪಾವಳಿ ಸಮೀಪಿಸುತ್ತಿದ್ದಂತೆಯೇ ಎಲ್ಲೆಡೆ ಪಟಾಕಿ ಮಾರಾಟಕ್ಕೆ ಮಳಿಗೆ ನಿರ್ಮಾಣ ಮಾಡಲಾಗುತ್ತಿದ್ದು, ನ್ಯಾಯಾಲಯದ ನಿರ್ದೇಶನದಂತೆ ಮೈಸೂರಲ್ಲಿ ಪರಿಸರಕ್ಕೆ ಹಾನಿಯುಂಟು ಮಾಡುವ ಹಾಗೂ ಅಪಾಯಕಾರಿ ಪಟಾಕಿ ಮಾರಾಟಕ್ಕೆ ಕಡಿವಾಣ ಹಾಕಲು ಜಿಲ್ಲಾಡಳಿತ, ಮೈಸೂರು ಮಹಾನಗರ ಪಾಲಿಕೆ ಹಾಗೂ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಮುಂದಾಗಿದೆ. ಮೈಸೂರಿನ ವಿವಿಧೆಡೆ ನಿರ್ಮಿಸಲಾಗುತ್ತಿರುವ ಪಟಾಕಿ ಮಳಿಗೆಗಳ ಮೇಲೆ ಹದ್ದಿನ ಕಣ್ಣಿಟ್ಟಿರುವ ಅಧಿಕಾರಿಗಳು, ನಿಯಮ ಉಲ್ಲಂಘಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ನಿರ್ಧರಿಸಲಾಗಿದೆ.

ಮಳಿಗೆಗಳ ಪರಿಶೀಲನೆ: ಮೈಸೂರು ಮಹಾನಗರ ಪಾಲಿಕೆಯಿಂದ ಅನುಮತಿ ಪಡೆದು ಜೆ.ಕೆ. ಮೈದಾನದಲ್ಲಿ ಪಟಾಕಿ ವ್ಯಾಪಾರಿಗಳು 17 ಮಳಿಗೆ ನಿರ್ಮಿಸಿದ್ದಾರೆ. ದೀಪಾವಳಿ ಹಬ್ಬಕ್ಕೆ ನಾಲ್ಕು ದಿನ ಇರುವಂತೆಯೇ ಇಂದಿನಿಂದ ಪಟಾಕಿ ವ್ಯಾಪಾರ ಆರಂಭವಾಗಿದ್ದು, ವ್ಯಾಪಾರಿಗಳು ತಮಿಳು ನಾಡಿನ ಶಿವಕಾಶಿಯಿಂದ ತಂದಿರುವ ಪಟಾಕಿಗಳನ್ನು ಮಳಿಗೆಗಳಲ್ಲಿ ಗ್ರಾಹಕರನ್ನು ಆಕರ್ಷಿಸುವಂತೆ ಜೋಡಣೆ ಮಾಡಿದ್ದಾರೆ. ಈ ನಡುವೆ ಕೆಲವರು ಈಗಾಗಲೇ ಪಟಾಕಿ ಖರೀದಿಗೆ ಮುಂದಾಗಿದ್ದಾರೆ, ಮೊದಲ ದಿನವೇ ಪಟಾಕಿ ವ್ಯಾಪಾರ ಚುರುಕುಗೊಂಡಿದೆ.

ಸುಪ್ರೀಂಕೋರ್ಟ್ ಆದೇಶ ಪಾಲನೆ ಮಾಡುವ ದೃಷ್ಟಿಯಿಂದ ಪಟಾಕಿ ಅವಘಡಕ್ಕೆ ಕಡಿವಾಣ ಹಾಕಲು ಜಿಲ್ಲಾಡಳಿತ ಕಟ್ಟುನಿಟ್ಟಿನ ಹೆಜ್ಜೆ ಇಡಲು ಉದ್ದೇಶಿಸಿರುವ ಬೆನ್ನಲ್ಲೇ, ಇದೀಗ ಪಾಲಿಕೆ ಪರಿಸರ ಅಭಿಯಂತರ ತಂಡ ಜೆ.ಕೆ.ಮೈದಾನದಲ್ಲಿರುವ ಪಟಾಕಿ ಮಳಿಗೆಗಳಲ್ಲಿ ಸಂಗ್ರಹ ಮಾಡಿರುವ ಪಟಾಕಿ ದಾಸ್ತಾನು ಪರಿಶೀಲನೆ ಮಾಡಿ, ಪಟಾಕಿ ಬಾಕ್ಸ್ ಮೇಲಿರುವ ಕ್ಯೂಆರ್ ಕೋಡ್, ಹಸಿರು ಪಟಾಕಿ ಮುದ್ರೆ ಸೇರಿದಂತೆ ಇನ್ನಿತರ ಮಾರ್ಗಸೂಚಿ ಪರಿಶೀಲಿಸಿತು. ಪಟಾಕಿ ವ್ಯಾಪಾರದ ಮೊದಲ ದಿನವಾದ ಇಂದು ತಪಾಸಣೆ ವೇಳೆ ಮಳಿಗೆಗಳಲ್ಲಿ ಹಸಿರು ಪಟಾಕಿ ಮಾತ್ರ ದಾಸ್ತಾನು ಮಾಡಿದ್ದು ಕಂಡು ಬಂದಿತು. ಈ ವೇಳೆ ಮಳಿಗೆದಾರರಿಗೆ ನಿಯಮ ಗಾಳಿಗೆ ತೂರಿ ಅಪಾಯಕಾರಿ ಪಟಾಕಿ ಮಾರಾಟಕ್ಕೆ ಮುಂದಾದರೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುವುದಾಗಿ ಅಧಿಕಾರಿಗಳು ಎಚ್ಚರಿಕೆ ನೀಡಿದರು.

ಪರಿಸರ ಅಭಿಯಂತರ ವೃತ್ತಿ ನೇತೃತ್ವದ ತಂಡದಲ್ಲಿ ಪಾಲಿಕೆಯ ಆರೋಗ್ಯ ನಿರೀಕ್ಷ ಮಂಜುಕುಮಾರ್, ಬಸವರಾಜು ಹಾಗೂ ಸಿಬ್ಬಂದಿಗಳ ತಂಡ ಪಟಾಕಿ ಪರಿಶೀಲಿಸಿತು.

ಅಪಾಯಕಾರಿ ಪಟಾಕಿ ಖರೀದಿಸಿರುವ ಶಂಕೆ: ಹಸಿರು ಪಟಾಕಿ ಹೊರತುಪಡಿಸಿ, ಅಪಾಯಕಾರಿ ಪಟಾಕಿ ಮಾರಾಟ ಮಾಡದಂತೆ ನ್ಯಾಯಾಲಯ ನಿರ್ಬಂಧ ಹೇರಿ ಆದೇಶ ಹೊರಡಿಸುವ ಮುನ್ನವೇ ಮೈಸೂರಿನ ಕೆಲ ಪಟಾಕಿ ವ್ಯಾಪಾರಿಗಳು ತಮಿಳುನಾಡಿನ ಶಿವಕಾಶಿಯಿಂದ ಸಾಮಾನ್ಯ ಪಟಾಕಿ ಖರೀದಿಸಿ ತಂದಿರುವ ಶಂಕೆ ವ್ಯಕ್ತವಾಗಿದೆ. ಶಿವಕಾಶಿ ಪಟಾಕಿ ತಯಾರಿಕಾ ಘಟಕದಿಂದ ಪಟಾಕಿ ಖರೀದಿಸಬೇಕಾದರೆ 6 ತಿಂಗಳ ಮುನ್ನವೇ ಇಂಡೆಂಟ್ ಸಲ್ಲಿಸಿ, ಮುಂಗಡ ಹಣ ಪಾವತಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕೆಲವರು ಸಾಮಾನ್ಯ ಪಟಾಕಿ ಖರೀದಿಸಿ ತಂದು ಮೈಸೂರಿನ ಹೊರವಲಯದ ಗೋದಾಮುಗಳಲ್ಲಿ ದಾಸ್ತಾನು ಮಾಡಿರುವ ಶಂಕೆ ವ್ಯಕ್ತವಾಗಿದೆ. ದೀಪಾವಳಿಯ ಹಬ್ಬದಂದು ಪಟಾಕಿ ಖರೀದಿ ಭರಾಟೆಯಲ್ಲಿ ಹಸಿರು ಪಟಾಕಿಯೊಂದಿಗೆ ಈಗಾಗಲೇ ಖರೀದಿಸಿ ತಂದಿರುವ ಸಾಮಾನ್ಯ ಪಟಾಕಿಗಳನ್ನು ಗ್ರಾಹಕರಿಗೆ ಮಾರಾಟ ಮಾಡುವ ಆಲೋಚನೆ ವ್ಯಾಪಾರಿಗಳದ್ದಾಗಿದೆ ಎಂದು ಹೇಳಲಾಗಿದೆ. ಈ ನಿಟ್ಟಿನಲ್ಲಿ ಭಾನುವಾರದಿಂದ ತಪಾಸಣಾ ಕಾರ್ಯ ಇನ್ನಷ್ಟು ತ್ವರಿತಗೊಳಿಸಲು ಪಾಲಿಕೆ ಹಾಗೂ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಮುಂದಾಗಿದ್ದಾರೆ.

ಪರಿಸರ ಪ್ರೇಮಿಗಳ ಮನವಿ

ದೀಪಾವಳಿ ಬೆಳಕಿನ ಹಬ್ಬವಾಗಿದ್ದು, ಕೆಲವರು ಪ್ರತಿಷ್ಠೆಗಾಗಿ ಹೆಚ್ಚು ಪಟಾಕಿ ಸಿಡಿಸಲು ಮುಂದಾಗುತ್ತಾರೆ. ಹೆಚ್ಚು ಶಬ್ದವುಳ್ಳ ಪಟಾಕಿ ಸಿಡಿತದಿಂದಾಗಿ ಪ್ರಾಣಿ–ಪಕ್ಷಿ ಸಂಕುಲ ಮಾತ್ರವಲ್ಲದೆ, ನೆಲದ ಮೇಲೆ ವಾಸಿಸುವ ಕೀಟಗಳ ಸಂಕುಲಕ್ಕೂ ಭಾರಿ ಪ್ರಮಾಣದ ಹಾನಿಯಾಗುತ್ತದೆ. ಬೀದಿ ಶ್ವಾನಗಳು ಪಟಾಕಿ ಶಬ್ದದಿಂದ ಕಂಗೆಟ್ಟು ರಸ್ತೆಯಲ್ಲಿ ದಿಕ್ಕು ತೋಚದಂತೆ ಓಡುತ್ತವೆ. ಈ ವೇಳೆ ವಾಹನಗಳಿಗೆ ಸಿಲುಕಿ ಮೃತಪಡುತ್ತವೆ. ಸಾಕು ಶ್ವಾನಗಳ ಪರಿಸ್ಥಿತಿಯೂ ಶೋಚನೀಯವಾಗಿರುತ್ತದೆ. ಕೆಲವು ಪಕ್ಷಿಗಳು ಹೃದಯಾಘಾತಕ್ಕೆ ಒಳಗಾಗಿ ಉಸಿರು ನಿಲ್ಲಿಸುತ್ತವೆ. ಈ ಹಿನ್ನೆಲೆಯಲ್ಲಿ ಪಟಾಕಿ ಸಿಡಿಸುವುದನ್ನು ಕಡಿಮೆ ಮಾಡಿ, ಪ್ರಾಣಿ–ಪಕ್ಷಿ ಹಾಗೂ ಕೀಟ ಸಂಕುಲದ ರಕ್ಷಣೆಗೆ ಸಹಕರಿಸುವಂತೆ ಪ್ರಾಣಿ ಪ್ರಿಯರು ಮನವಿ ಮಾಡಿದ್ದಾರೆ.

ಕಟ್ಟಡ ಮತ್ತು ಇತರೆ ನಿರ್ಮಾಣ ಕಲ್ಯಾಣ ಮಂಡಳಿ ಅವ್ಯವಹಾರದ ತನಿಖೆಗಾಗಿ ಪ್ರತಿಭಟನೆ



ಮೈಸೂರು, ನ.10(ಜಿಎ)– ಲ್ಯಾಪ್‌ಟಾಪ್, ವಿವಿಧ ಕಿಟ್, ಟ್ಯಾಬ್ ವಿತರಣೆ, ಆರೋಗ್ಯ ತಪಾಸಣೆ ಮತ್ತು ಕಾರ್ಮಿಕರ ಕೌಶಲ್ಯಾಭಿವೃದ್ಧಿ ತರಬೇತಿ ನೀಡುತ್ತೇವೆಂದು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ದುಂದು ವೆಚ್ಚ ಮಾಡುತ್ತಿದ್ದು, ಇವು ಗಳನ್ನು ತಕ್ಷಣ ನಿಲ್ಲಿಸಿ, ಅವ್ಯವಹಾರ ಗಳನ್ನು ತನಿಖೆಗೆ ಒಳಪಡಿಸಬೇಕೆಂದು ಕರ್ನಾಟಕ ರಾಜ್ಯ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘದ ಜಿಲ್ಲಾ ಘಟಕದ ಪದಾಧಿಕಾರಿ ಗಳು ಮತ್ತು ಎಐಟಿಯುಸಿ ವತಿಯಿಂದ ನಗರದ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ಈ ಹಿಂದೆಯೆ ದುಂದು ವೆಚ್ಚದ ಕುರಿತು ಬಿಜೆಪಿ ಸರ್ಕಾರ ಮತ್ತು ಪ್ರಸ್ತುತ ಕಾಂಗ್ರೆಸ್ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿತ್ತು. ಆದರೆ, ಎರಡೂ ಸರ್ಕಾರಗಳು ಈ ಅವ್ಯವಹಾರದ ಬಗ್ಗೆ ಗಮನ ಹರಿಸಲಿಲ್ಲ. ಕಾರ್ಮಿಕ ಮಂತ್ರಿಗಳು ಆ.20ರಂದು ನಡೆದ ಸಭೆಯಲ್ಲಿ ಯಾವುದೇ ಕಿಟ್ ಅಥವಾ ಇತರೆ ವಸ್ತು ರೂಪದಲ್ಲಿ ಈ ಹಿಂದೆ ನೀಡುತ್ತಿದ್ದ ಎಲ್ಲವನ್ನು ನಮ್ಮ ಸರ್ಕಾರದಿಂದ ಸ್ಥಗಿತಗೊಳಿಸಲಾಗಿದೆ ಎಂದು ತಿಳಿಸಿದ್ದರು.

ಸಭೆ ನಂತರ ಪ್ರಥಮ, ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ 7 ಸಾವಿರ ಲ್ಯಾಪ್‌ಟಾಪ್ ಖರೀದಿಸಲಾಗಿದೆ. ಹಾಗೇ ಆರೋಗ್ಯ ತಪಾಸಣೆ ಹೆಸರಿನಲ್ಲಿ ಪ್ರತಿ ಜಿಲ್ಲೆಗೆ 33 ಸಾವಿರ ಕಾರ್ಮಿಕರಿಗೆ ತಲಾ 2,850 ರೂ.ಗಳಂತೆ ಪ್ರತಿ ಜಿಲ್ಲೆಗೆ 10 ಕೋಟಿ ರೂ.ಗಳಂತೆ 31 ಜಿಲ್ಲೆಗೆ 310 ಕೋಟಿ ರೂ. ಗಳನ್ನು ಕಾರ್ಮಿಕರ ಹಾಗೂ ಅವರ ಅವಲಂಬಿತರ ಆರೋಗ್ಯ ತಪಾಸಣೆಯ ಹೆಸರಿನಲ್ಲಿ ಮಂಡಳಿ ಹಣವನ್ನು ತೆಗೆದುಕೊಳ್ಳಲಾಗಿದೆ ಎಂದು ಆರೋಪಿಸಿದರು.

ಆರೋಗ್ಯ ತಪಾಸಣೆ ಮತ್ತು ಲ್ಯಾಪ್‌ಟಾಪ್ ಖರೀದಿಯನ್ನು ನಿಲ್ಲಿಸುವಂತೆ ಒತ್ತಾಯಿಸಿ ಆ.31ರಂದು ಮುಖ್ಯಮಂತ್ರಿಗಳಿಗೆ ಪತ್ರ ಬರೆಯಲಾಗಿತ್ತು. ಆದರೆ, ಇದನ್ನು ತಡೆಗಟ್ಟುವಲ್ಲಿ ವಿಫಲರಾಗಿದ್ದಾರೆ. ಈಗಾಗಲೇ ತುಮಕೂರು, ರಾಮನಗರ, ಬೆಳಗಾವಿ ಜಿಲ್ಲೆಗಳಲ್ಲಿ ಆರೋಗ್ಯ ತಪಾಸಣೆ ಆರಂಭವಾಗಿದ್ದು, ಇದರಿಂದ ಕಾರ್ಮಿಕರಿಗೆ ಯಾವುದೇ ಪ್ರಯೋಜನವಾಗಿಲ್ಲ. ಆದ್ದರಿಂದ ತಕ್ಷಣ ಈ ಆರೋಗ್ಯ ತಪಾಸಣೆಯನ್ನು ನಿಲ್ಲಿಸಿ, ಆರೋಗ್ಯ ಇಲಾಖೆಯಿಂದ ಉಚಿತ ತಪಾಸಣೆ ನಡೆಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಎಐಟಿಯುಸಿ ರಾಜ್ಯ ಸಮಿತಿ ಕಾರ್ಯದರ್ಶಿ ಹೆಚ್.ಬಿ.ರಾಮಕೃಷ್ಣ, ಜಿಲ್ಲಾಧ್ಯಕ್ಷ ಎನ್.ಕೆ.ದೇವದಾಸ್, ಕೆ.ಜೆ.ಸೋಮರಾಜೇ ಅರಸ್, ಕೆ.ಎಸ್.ರೇವಣ್ಣ, ಮುಜಾಹಿದ್ ಪಾಷ, ಮಹದೇವ, ಹೊನ್ನೇಶ್, ಶಿವಣ್ಣ, ನಂಜನಾಯಕ ಚನ್ನಪ್ಪನಾಯಕ ಪಾಲ್ಗೊಂಡಿದರು.



ವಿಶ್ವ ರೋಗ ನಿರೋಧಕ ದಿನಾಚರಣೆ ಅಂಗವಾಗಿ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಿಂದ ಆರಂಭವಾದ ವಾಕಥಾನ್‌ಗೆ ಜೆಎಸ್‌ಎಸ್ ಮಹಾ ವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ ಚಾಲನೆ ನೀಡಿದರು. ಅರಿವಿನ ನಡಿಗೆ ವಿಶ್ವ ರೋಗ ನಿರೋಧಕ ದಿನ ಘೋಷ ವಾಕ್ಯದೊಂದಿಗೆ ನಡೆದ ವಾಕಥಾನ್ ನಗರದ ಹಲವು ರಸ್ತೆಗಳಲ್ಲಿ ಸಂಚರಿಸಿತು.

ರಾಗಿ ಬೆಳೆ ಬಗ್ಗೆ ರೈತರಿಗೆ ಜಾಗೃತಿ



ಮೈಸೂರು, ನ.10(ಎಂಟಿವೈ)– ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಡಿ ಕೃಷಿ ಇಲಾಖೆಯ ಅಧಿಕಾರಿಗಳು ಇಲವಾಲ ಹೋಬಳಿಯ ಕಮರವಳ್ಳಿ ಗ್ರಾಮದಲ್ಲಿ ರಾಗಿ ಬೆಳೆ ಕ್ಷೇತ್ರೋತ್ಸವ ಕಾರ್ಯಕ್ರಮ ನಡೆಸಿ, ರಾಗಿ ಬೆಳೆಯ ಮಹತ್ವದ ಬಗ್ಗೆ ಜಾಗೃತಿ ಮೂಡಿಸಿದರು.

ಮೈಸೂರು ತಾಲೂಕಿನ ಇಲವಾಲ ಹೋಬಳಿಯ ಕಮರವಳ್ಳಿ ಗ್ರಾಮದಲ್ಲಿ 2023–24ನೇ ಸಾಲಿನ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಡಿ ಹಮ್ಮಿಕೊಳ್ಳಲಾಗಿದ್ದ ರಾಗಿ ಬೆಳೆ ಕ್ಷೇತ್ರೋತ್ಸವ ಕಾರ್ಯಕ್ರಮದಲ್ಲಿ ಕೃಷಿ ಕ್ಷೇತ್ರದ ಸಂಪನ್ಮೂಲ ವ್ಯಕ್ತಿ ಶ್ರೀನಿವಾಸ್ ಶೆಟ್ಟಿ ಮಾತನಾಡಿ, ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಡಿ ರೈತರಿಗೆ ವಿತರಿಸಿರುವ ರಾಗಿ ತಳಿ ಎಂ.ಎಲ್–365 ಹಲವಾರು ವಿಶೇಷ ಗುಣಲಕ್ಷಣ ಹೊಂದಿದೆ. ಈ ತಳಿಯನ್ನು ವರ್ಷದ ಎಲ್ಲಾ ಕಾಲದಲ್ಲೂ ಬೆಳೆಯಬಹುದಾಗಿದೆ. ಇದು 105–115 ದಿನಗಳಲ್ಲಿ ಕಟಾವಿಗೆ ಬರುವ ಅಲ್ಪಾವಧಿ ತಳಿಯಾಗಿದೆ. ಮುಂಗಾರು ತಡವಾದರೂ ಈ ತಳಿಯನ್ನು ಬೆಳೆಯಬಹುದಾಗಿದೆ. ಬೆಂಕಿ ರೋಗದ ನಿರೋಧಕ ಶಕ್ತಿಯನ್ನು ಹೊಂದಿದೆ. ಇದರಿಂದ ರೈತರಿಗೆ ನೆರವಾಗಲಿದೆ ಎಂದರು.

ಮೈಸೂರು ಭಾಗದಲ್ಲಿ ಖುಷ್ಕಿ ಜಮೀನಿನಲ್ಲಿ ರಾಗಿ ಬೆಳೆಯಲು ಪೂರಕವಾದ ವಾತಾವರಣವಿದೆ. ಈ ತಳಿಯನ್ನು ರೈತರು ಹೆಚ್ಚಿನ ಬೆಳೆಯಲು ಮುಂದಾಗಬೇಕು. ಸಾವಯವ ಗೊಬ್ಬರದೊಂದಿಗೆ 2 ಕೆ.ಜಿ. ಪೊಟ್ಯಾಷ್ 100 ಲೀ.ನಲ್ಲಿ ಕರಗಿಸಿ ಒಂದು ಎಕರೆಗೆ ಸಿಂಪಡಿಸುವುದರಿಂದ ರಾಗಿ ಬೆಳೆಗೆ ನಿರೋಧಕ ಶಕ್ತಿಯನ್ನು ಹೆಚ್ಚಿಸಬಹುದು ಎಂದು ತಿಳಿಸಿದರು.

ಇದೇ ವೇಳೆ ಕೃಷಿ ಅಧಿಕಾರಿ ಪಿ.ಎನ್. ಜೀವನ್ ಮಾತನಾಡಿ, ರಾಗಿ ಬೆಳೆ ಕ್ಷೇತ್ರೋತ್ಸವದ ಉದ್ದೇಶ ರೈತರಿಗೆ ಲಾಭದಾಯಕವಾದ ತಳಿಯ ಬಗ್ಗೆ ಮಾಹಿತಿ ನೀಡುವುದೇ ಆಗಿದೆ. ಅಲ್ಲದೆ, ಕೃಷಿ ಮಾಡಲು ರೈತರಿಗೆ ಕೃಷಿ ಇಲಾಖೆ ನಿಡುವ ಸೌಲಭ್ಯ ಹಾಗೂ ವಿವಿಧ ಸವಲತ್ತುಗಳ ಮಾಹಿತಿ ರೈತರಿಗೆ ಈ ಕಾರ್ಯಕ್ರಮದ ಮೂಲಕ ನೀಡಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಸಹಾಯಕ ಕೃಷಿ ಅಧಿಕಾರಿ ಸಿ.ಎಂ.ಕಾರ್ತಿಕ್, ಸಹಾಯಕ ತಾಂತ್ರಿಕ ವ್ಯವಸ್ಥಾಪಕಿ ರಾಜಲಕ್ಷ್ಮಿ, ಗ್ರಾ.ಪಂ.ಸದಸ್ಯ ಚಾಮಯ್ಯ, ಗ್ರಾಮದ ಮುಖಂಡರಾದ ಜವರನಾಯ್ಕ, ಚೌಡನಾಯ್ಕ, ಶಿವಣ್ಣ ಮೂರ್ತಿ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ನ.10–ಮೈಸೂರಿನ ನೀಲಗಂಗಾ ಮಹಿಳಾ ಬಳಗದ ವಾರ್ಷಿಕೋತ್ಸವದ ಅಂಗವಾಗಿ ಮೈಸೂರಿನ ವೀರಶೈವ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಂದ ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

2022–23ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದಿರುವವರು, ಕ್ರೀಡೆ, ಗಾಯನ, ಸಾಹಸ, ಚಿತ್ರಕಲೆಯಲ್ಲಿ ರಾಜ್ಯ ಅಥವಾ ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಿರುವವರು ನ.15ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ ಹೆಚ್ಚಿನ ವಿವರಗಳಿಗಾಗಿ ಶೋಭಾ ಶಿವಾನಂದ್(98808 25525) ಅಥವಾ ಗೀತಾ ರಾಜಶೇಖರ್(98807 47065) ಅವರನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಸರ್ಕಾರ ಕಾಂತರಾಜ್ ವರದಿ ಸ್ವೀಕರಿಸಿ, ಅನುಷ್ಠಾನಗೊಳಿಸಲಿ

ಮೈಸೂರು, ನ.10– ರಾಜ್ಯ ಸರ್ಕಾರ ಕಾಂತರಾಜ್ ನೇತೃತ್ವದ ಸಮಿತಿ ತಯಾರಿಸಿರುವ ವರದಿಯನ್ನು ಸ್ವೀಕರಿಸಿ ಅನುಷ್ಠಾನಕ್ಕೆ ತರಲಿ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ನಿಕಟಪೂರ್ವ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ ಒತ್ತಾಯಿಸಿದ್ದಾರೆ.



ಕಾಂತರಾಜು ವರದಿ ಜಾತಿ ಜನಾಂಗದ ಗಣತಿಯಲ್ಲ. ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸಮೀಕ್ಷೆ. ಇದಕ್ಕೆ ಸರ್ಕಾರ 170 ಕೋಟಿ ರೂ. ಖರ್ಚು ಮಾಡಿ 1.30 ಲಕ್ಷಕ್ಕೂ ಅಧಿಕ ಮಂದಿಯಿಂದ ಸಮೀಕ್ಷಾ ಕಾರ್ಯ ಕೈಗೊಂಡಿತ್ತು. ವರದಿಯಿಂದ ಹಿಂದುಳಿದ ವರ್ಗಗಳಿಗೆ ನ್ಯಾಯ ಲಭಿಸುತ್ತದೆ. ಹಾಗಾಗಿ ವರದಿಯನ್ನು ಅನುಷ್ಠಾನಗೊಳಿಸಬೇಕು. ನಂತರ ಬೇಕಿದ್ದರೆ ಜನಾಭಿಪ್ರಾಯಕ್ಕೆ ಬಿಟ್ಟು ತಪ್ಪು ಒಪ್ಪುಗಳಿದ್ದರೆ ತಿದ್ದುಪಡಿ ತರಲಿ. ಅದನ್ನು ಬಿಟ್ಟು ಆಡಳಿತ ಸರ್ಕಾರದ ವಿರುದ್ಧ ಸ್ವ ಪಕ್ಷೀಯರೇ ಆಗಲಿ ವಿಪಕ್ಷಗಳೆ ಆಗಲಿ ಮನಸ್ತಾಪದ ಹೇಳಿಕೆ ನೀಡುವುದರಿಂದ ಭಿನ್ನಾಭಿಪ್ರಾಯ ಉಂಟಾಗುತ್ತದೆ. ಇವರೆಲ್ಲರೂ ಹಿಂದುಳಿದ ವರ್ಗಗಳ ವಿರುದ್ಧ ಇದ್ದಾರೆ ಎಂಬ ಭಾವನೆ ಮೂಡುತ್ತದೆ ಎಂದು ಅವರು ಅಭಿಪ್ರಾಯಿಸಿದ್ದಾರೆ.

ತಮಿಳುನಾಡಿನಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ಜಾತಿಗಳಿಗೆ ಒಟ್ಟು ಶೇ.69ರಷ್ಟು ಮೀಸಲಾತಿ ಜಾರಿಯಲ್ಲಿದೆ. ಜಾತಿ ಗಣತಿಯ ದತ್ತಾಂಶಗಳ ಆಧಾರದಲ್ಲೇ ಆ ಮೀಸಲಾತಿಯನ್ನು ಜಾರಿಗೆ ತರಲಾಗಿದೆ ಮತ್ತು ಜನಸಂಖ್ಯೆಗೆ ಅನುಗುಣವಾಗಿ ಒಳಮೀಸಲಾತಿಯನ್ನೂ ನೀಡಲಾಗಿದೆ. ಮೀಸಲಾತಿಯನ್ನು ಶೇ.50ರಿಂದ ಶೇ.65ಕ್ಕೆ ಏರಿಕೆ ಮಾಡಬೇಕು ಎಂದು ಈಗ ಬಿಹಾರ ಸರ್ಕಾರ ಸಹ ಜಾತಿ ಗಣತಿಯ ಆಧಾರದಲ್ಲೇ ನಿರ್ಧಾರ ತೆಗೆದುಕೊಂಡಿದೆ. ಇದರಿಂದ ಆರ್ಥಿಕವಾಗಿ ಹಿಂದುಳಿದವರಿಗಾಗಿ 10%ರಷ್ಟು ಮೀಸಲಾತಿಯನ್ನು ಹೊರಗಿಡಲಾಗಿದೆ. ಈ ಮೀಸಲಾತಿಯೂ ಸೇರಿದರೆ ಒಟ್ಟಾರೆ ಮೀಸಲಾತಿ ಪ್ರಮಾಣ 75% ಹೆಚ್ಚಲಿದೆ. ಈ ಸಂಬಂಧ ಮಸೂದೆಯನ್ನೂ ಅಂಗೀಕರಿಸಿದೆ. ಕರ್ನಾಟಕದಲ್ಲಿ ಬಿಹಾರಕ್ಕೂ ಮೊದಲೇ ಅಂತಹ ಸಮೀಕ್ಷೆ ನಡೆದಿದೆ. ಸಮೀಕ್ಷೆಯ ದತ್ತಾಂಶಗಳು ಮೀಸಲಾತಿ ಹೆಚ್ಚಳ ಮತ್ತು ಒಳಮೀಸಲಾತಿ ಬೇಡಿಕೆಗೆ ವೈಜ್ಞಾನಿಕ ತಳಹದಿ ಒದಗಿಸಲಿದೆ. ಆದ್ದರಿಂದ ಹಿರಿಯ ನಾಯಕರು ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು ವರದಿ ಅನುಷ್ಠಾನಕ್ಕೆ ತರಲು ಸಹಕರಿಸಬೇಕು ಎಂದಿದ್ದಾರೆ.

ನವಜಾತ ಶಿಶುಗಳಿಗೆ ವಾಕ್ ಮತ್ತು ಶ್ರವಣ ಪರೀಕ್ಷೆಗೆ ಸಲಹೆ

ಮೈಸೂರು,ನ.10(ಎಂಟಿವೈ)– ನವಜಾತ ಶಿಶುಗಳಿಗೆ ಕಡ್ಡಾಯವಾಗಿ ವಾಕ್ ಮತ್ತು ಶ್ರವಣ ಪರೀಕ್ಷೆ ಮಾಡಿಸಲು ಪೋಷಕರು ಮುಂದಾಗಬೇಕು ಎಂದು ವಾಕ್ ಮತ್ತು ಶ್ರವಣ ಸಂಸ್ಥೆಯ ಸಂಹವನ ನ್ಯೂನತೆಗಳ ತಡೆಗಟ್ಟುವಿಕೆ ವಿಭಾಗದ ಮುಖ್ಯಸ್ಥ ಡಾ.ಎಂ. ಸಂದೀಪ್ ಸಲಹೆ ನೀಡಿದ್ದಾರೆ.

ಮೈಸೂರಿನ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ಶುಕ್ರವಾರ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಹಾಗೂ ವಾಕ್ ಮತ್ತು ಶ್ರವಣ ಸಂಸ್ಥೆಯ ಸಹಯೋಗದಲ್ಲಿ ಆಯೋಜಿಸಿದ್ದ ಆಶ್ರಮ ಶಾಲೆಯ ವಿದ್ಯಾರ್ಥಿಗಳ ವಾಕ್ ಮತ್ತು ಶ್ರವಣ ಪರೀಕ್ಷಾ ಅಭಿಯಾನದಲ್ಲಿ ಮಾತನಾಡಿದ ಅವರು, ಮಕ್ಕಳ ವ್ಯವಸ್ಥೆಯಲ್ಲಿದ್ದಾಗಲೇ ವಾಕ್ ಮತ್ತು ಶ್ರವಣ ಪರೀಕ್ಷೆ ಮಾಡಿಸುವುದರಿಂದ ಪ್ರೌಢಾವಸ್ಥೆಯಲ್ಲಿ ಉಂಟಾಗಬಹುದಾದ ಸಮಸ್ಯೆ ತಡೆಗಟ್ಟಬಹುದಾಗಿದೆ. ಅಲ್ಲದೆ, ಸಮಸ್ಯೆ ಚಿಕ್ಕದಲ್ಲಿದ್ದಾಗಲೇ ಗುರುತಿಸಿದರೆ, ಸಕಾಲದಲ್ಲಿ ಸೂಕ್ತ ಚಿಕಿತ್ಸೆ ನೀಡಿ ಸಮಸ್ಯೆ ಉಲ್ಬಣಗೊಳ್ಳದಂತೆ ಕಟ್ಟೆಚ್ಚರ ವಹಿಸಬಹುದು. ಈ ಹಿನ್ನೆಲೆಯಲ್ಲಿ ಎಲ್ಲಾ ಪೋಷಕರು ನವಜಾತ ಶಿಶುಗಳಿಗೆ 1 ತಿಂಗಳು ಪೂರೈಸುತ್ತಿದ್ದಂತೆಯೇ ಶ್ರವಣ ಪರೀಕ್ಷೆ ಮಾಡಿಸಲು ಮುಂದಾಗಬೇಕು. ಇದರಿಂದ ಮಗುವಿಗೆ ಮುಂದೆ ಆಗುವ ವಾಕ್ ಮತ್ತು ಶ್ರವಣ ದೋಷವನ್ನು ತಡೆಗಟ್ಟಬಹುದು ಎಂದರು.



ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಹಾಗೂ ವಾಕ್ ಮತ್ತು ಶ್ರವಣ ಸಂಸ್ಥೆಯ ಸಹಯೋಗದಲ್ಲಿ ಹೆಚ್.ಡಿ. ಕೋಟೆ ತಾಲ್ಲೂಕು ಬಸವನಗಿರಿ ಮೇಟಿಕುಪ್ಪೆ ಆಶ್ರಮ ಶಾಲೆಗಳ 32 ವಿದ್ಯಾರ್ಥಿಗಳಿಗೆ ಶ್ರವಣ ಸಂಸ್ಥೆಯಲ್ಲಿ ಹೆಚ್ಚಿನ ಚಿಕಿತ್ಸೆಗಾಗಿ ಕರೆತಂದು ಉಚಿತ ಚಿಕಿತ್ಸೆ ನೀಡುತ್ತಿದ್ದೇವೆ ಎಂದ ಅವರು, ಕಿವಿ ಸಮಸ್ಯೆ ಕೆಲವರಿಗೆ ವಂಶಪಾರಂಪರ್ಯವಾಗಿ ಬರಬಹುದು. ಕೆಲವರಿಗೆ ಹುಟ್ಟಿನಿಂದಲೇ ಹಲವಾರು ಕಾರಣಗಳಿಂದ ಬಂದಿರಬಹುದು. ಆದರೆ ಶಾಲಾ ಮಕ್ಕಳಿಗೆ ಕಿವಿ ಸೋರುವಿಕೆ ಸಾಮಾನ್ಯವಾಗಿರುತ್ತದೆ. ಆದರೆ ಮಕ್ಕಳ ತಜ್ಞವೈದ್ಯರು ಮಗುವಿನ ಪೋಷಕರಿಗೆ ಮಗು ಹುಟ್ಟಿದ 1 ತಿಂಗಳಲ್ಲಿ ಕಿವಿಯ ತಪಾಸಣೆ ಮಾಡಿಸಲು ಸೂಚಿಸಬೇಕು ಹಾಗೂ ಮಕ್ಕಳ ವೈದ್ಯರು ಆಸ್ಪತ್ರೆಯಲ್ಲಿ ಹಿಯರಿಂಗ್ ಸ್ಕ್ರೀನಿಂಗ್ ಅಳವಡಿಸಿಕೊಂಡರೆ ಮಕ್ಕಳಿಗೆ ಮುಂದೆ ಆಗುವ ಶ್ರವಣ ದೋಷಗಳನ್ನು ತಡೆಗಟ್ಟಬಹುದು ಎಂದರು.

ಈ ಸಂದರ್ಭದಲ್ಲಿ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪ ನಿರ್ದೇಶಕಿ ಬಿ.ಎಸ್. ಪ್ರಭಾ ಅರಸ್, ಡಾ. ಮಹಾದೇವಪ್ಪ, ಡಾ.ರವೀಶ್‌ಗಣಿ, ಮುಖ್ಯಶಿಕ್ಷಕ ಬಿ.ಕೆ. ನಂಜಯ್ಯ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಭತ್ತದ ಗದ್ದೆಗಳಿಗೆ ಕಾಡಾನೆಗಳ ದಾಳಿ, ಅಪಾರ ನಷ್ಟ

ಕಾಡುಪ್ರಾಣಿಗಳ ಹಾವಳಿ ತಡೆಗಟ್ಟದಿದ್ದರೆ ರಸ್ತೆ ತಡೆ ನಡೆಸುವ ಎಚ್ಚರಿಕೆ



ಮಡಿಕೇರಿ,ನ.10– ಭತ್ತದ ಗದ್ದೆಗಳಿಗೆ ಕಾಡಾನೆಗಳ ಹಿಂಡು ದಾಳಿ ನಡೆಸಿ ಫಸಲು ನಾಶಪಡಿಸಿರುವ ಘಟನೆ ವಿರಾಜ ಪೇಟೆ ತಾಲೂಕಿನ ಬಿಳುಗುಂದ ನಲ್ವ ತ್ತೋಕ್ಲು ಗ್ರಾಮದಲ್ಲಿ ನಡೆದಿದೆ. ಕಾಡಾನೆ ಹಾವಳಿಯಿಂದ ಹೈರಾಣಾಗಿರುವ ಅಲ್ಲಿನ ಬೆಳೆಗಾರರು ಮತ್ತು ಕೃಷಿಕರು ರಸ್ತೆ ತಡೆ ಮೂಲಕ ಪ್ರತಿಭಟನೆ ನಡೆಸುವ ಎಚ್ಚರಿಕೆ ನೀಡಿದ್ದಾರೆ.

ಬಿಳುಗುಂದ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಲ್ವತ್ತೋಕ್ಲು ಗ್ರಾಮದ ಕಾಫಿ ತೋಟಗಳಲ್ಲಿ ಬೀಡು ಬಿಟ್ಟಿರುವ ಕಾಡಾನೆಗಳ ಹಿಂಡು ರಾತ್ರಿ ವೇಳೆ ಫಸಲು ತುಂಬಿರುವ ಭತ್ತದ ಗದ್ದೆಗಳಿಗೆ ಲಗ್ಗೆಯಿಟ್ಟು ಅಪಾರ ಪ್ರಮಾಣದ ನಷ್ಟ ಉಂಟು ಮಾಡಿವೆ. ಪರಿಣಾಮ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ.

ಕಾಡಾನೆಗಳ ದಾಳಿ ಮತ್ತು ವನ್ಯ ಮೃಗಗಳ ಭೀತಿಯಿಂದ ಕಾಫಿ ತೋಟಗಳು ಸೇರಿದಂತೆ ಕೃಷಿ ಕೆಲಸ ಕಾರ್ಯಗಳಿಗೆ ಕಾರ್ಮಿಕರು ಬರಲು ಹಿಂದೇಟು ಹಾಕುತ್ತಿದ್ದಾರೆ. ತೋಟದ ಅಂಚಿನಲ್ಲಿ ಮನೆಗಳಿದ್ದು, ಜನರು ಭಯದಿಂದ ಮನೆಯಿಂದ ಹೊರಗೆ ಬರಲು ಪರದಾಡುವಂತಾಗಿದೆ. ಕಾಡಾನೆಗಳನ್ನು ಕಾಡಿಗಟ್ಟುವಂತೆ ಮನವಿ ಮಾಡಿದರೂ ಅರಣ್ಯ ಇಲಾಖೆ ಅರ್ಜಿ ಸ್ವೀಕರಿಸಿ ಬಳಿಕ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಕಾಡಾನೆಗಳು ಅರಣ್ಯವನ್ನು ಬಿಟ್ಟು ನಾಡಿನಲ್ಲಿಯೇ ಬೀಡುಬಿಡುವ ಸ್ಥಿತಿ ಎದುರಾಗಿದೆ ಎಂದು ಗ್ರಾಮಸ್ಥರು ಅರಣ್ಯ ಇಲಾಖೆ ವಿರುದ್ಧ ಆಕ್ರೋಶವನ್ನು ಹೊರಹಾಕಿದ್ದಾರೆ.

ಈ ವ್ಯಾಪ್ತಿಯಲ್ಲಿ ಸುಮಾರು 20 ವರ್ಷಗಳಿಂದ ಕಾಡಾನೆಯ ಸಮಸ್ಯೆ ತಲೆದೋರಿದೆ. ವನ್ಯ ಮೃಗಗಳಿಂದ ಜಾನುವಾರು ಸೇರಿದಂತೆ ಮಾನವ ಪ್ರಾಣ ಹಾನಿಯೂ ಸಂಭವಿಸಿದೆ. ಗ್ರಾಮದಲ್ಲಿ ಬಹುತೇಕ ಮಂದಿ ರೈತಾಪಿ ವರ್ಗಕ್ಕೆ ಸೇರಿದ್ದು, ಬೆಳೆಯನ್ನೇ ನಂಬಿ ಜೀವನ ಸಾಗಿಸುತ್ತಿದ್ದಾರೆ. ಕಾಡಾನೆಗಳ ನಿರಂತರ ದಾಳಿಯಿಂದಾಗಿ ಭತ್ತ ಬೆಳೆಯುವ ರೈತರು ಗದ್ದೆಗಳನ್ನು ಪಾಳುಬಿಡುವ ಪರಿಸ್ಥಿತಿ ಎದುರಾಗಿದೆ. ಅರಣ್ಯ ಇಲಾಖೆ ಕಾಡಾನೆಗಳ ನಿಯಂತ್ರಣ ಮಾಡಬೇಕು. ತಪ್ಪಿದಲ್ಲಿ ಗ್ರಾಮಸ್ಥರ ಸಹಯೋಗದೊಂದಿಗೆ ಪ್ರಮುಖ ರಸ್ತೆಯಲ್ಲಿ ರಸ್ತೆತಡೆ ಮಾಡುವುದಾಗಿ ಗ್ರಾಮಸ್ಥರು ಎಚ್ಚರಿಕೆ ನೀಡಿದರು.

ಗ್ರಾಮದಲ್ಲಿ ಕಾಡಾನೆ, ಹುಲಿ ದಾಳಿ ಸಮಸ್ಯೆಗಳಿದ್ದರೂ ಜನಪತ್ರಿನಿಧಿಗಳು ಹಾಗೂ ಇಲಾಖೆಯ ಸಿಬ್ಬಂದಿಗಳು ಜಾಣ ಮೌನವಹಿಸಿದ್ದಾರೆ. ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಕಾರ್ಯಾಚರಣೆ ಹೆಸರಿನಲ್ಲಿ ಒಂದು ತೋಟದಿಂದ ಮತ್ತೊಂದು ತೋಟಕ್ಕೆ ಕಾಡಾನೆಗಳನ್ನು ಅಟ್ಟುತ್ತಿದ್ದಾರೆ. ಕಾಡಾನೆಗಳನ್ನು ಅರಣ್ಯಕ್ಕೆ ಅಟ್ಟಬೇಕು ಮತ್ತು ಶಾಶ್ವತ ಪರಿಹಾರವಾಗಬೇಕು. ಬೆಳೆಯನ್ನು ನಂಬಿಕೊಂಡು ಜೀವನ ಮಾಡುವ ಕೃಷಿಕರಿಗೆ ಹೆಚ್ಚಿನ ಪರಿಹಾರ ಒದಗಿಸಬೇಕು. ಪ್ರಾಣ ಹಾನಿಯಾದ ಸಂದರ್ಭದಲ್ಲಿ ಮಾತ್ರ ಸ್ಪಂದಿಸುವ ಇಲಾಖೆ ಸರ್ಕಾರಗಳು ಬೆಳೆ ಹಾನಿಗೂ ಸ್ಪಂದಿಸುಂತಾಗಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಈ ಸಂದರ್ಭ ಗ್ರಾಮಸ್ಥರಾದ ಮಂಡೇಡ ಆಕಾಶ್, ಮಂಡೇಡ ರಾಜ ದೇವಯ್ಯ, ಗಿರೀಶ್ ಕಾವೇರಪ್ಪ, ಜೀವನ್, ಅಯ್ಯಪ್ಪ, ಮುಕ್ಕಾಟೀರ ಯೋಗೇಶ್, ನೆಲ್ಲಚಂಡ ನಾಚಪ್ಪ, ಬೆಳ್ಯಪ್ಪ, ದುದ್ದಿಯಂಡ ಹುಸೈನ್, ಶಿರಾಜುದ್ದೀನ್ ಮತ್ತು ಚೋಕಂಡಳ್ಳಿ, ನಲ್ವತ್ತೋಕ್ಲು, ಬಾಚೆಟ್ಟಿ, ಕೆಂದೋಣಿ ಗ್ರಾಮದ ಗ್ರಾಮಸ್ಥರು ಹಾಜರಿದ್ದರು.

ಡೆತ್‌ನೋಟ್ ಬರೆದಿಟ್ಟು ಮಾಜಿ ಸೈನಿಕ ಸಾವಿನ ಪ್ರಕರಣ

ಮಹಿಳೆ ಬಂಧನ

ಮಡಿಕೇರಿ, ನ.10– ಮನೆಯಲ್ಲಿ ಡೆತ್ ನೋಟ್ ಬರೆದಿಟ್ಟು ನಾಪತ್ತೆಯಾಗಿ,



ನಗರದ ಉಕ್ಕುಡ ಪಂಪಿನ ಕೆರೆಯಲ್ಲಿ ಶವವಾಗಿ ಪತ್ತೆಯಾಗಿದ್ದ ಮಾಜಿ ಸೈನಿಕ ಸಂದೇಶ್ ಸಾವು ಪ್ರಕರಣಕ್ಕೆ ಸಂಬಂಧಿಸಿದಂತೆ ಓರ್ವ ಮಹಿಳಾ ಆರೋಪಿಯನ್ನು ಬಂಧಿಸಲಾಗಿದೆ.

ಸಂದೇಶ್ ಅವರನ್ನು ಹನಿಟ್ರ್ಯಾಪ್ ಮಾಡಿದ ಆರೋಪದ ಮೇಲೆ ಜೀವಿತ ಎಂಬಾಕೆಯನ್ನು ಮಡಿಕೇರಿ ನಗರ ಪೊಲೀಸರು ಬಂಧಿಸಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಇನ್ನು ನಿವೃತ್ತ ಯೋಧ ಸಂದೇಶ್ ನಾಪತ್ತೆಯಾಗುವ ಮುನ್ನ ಡೆತ್ ನೋಟ್ ಬರೆದಿಟ್ಟಿದ್ದು, ಪೊಲೀಸರು ಅದನ್ನು ವಶಕ್ಕೆ ಪಡೆದು ತನಿಖೆ ನಡೆಸುತ್ತಿದ್ದಾರೆ. ಡೆತ್‌ನೋಟ್‌ನಲ್ಲಿ ನನ್ನ ಸಾವಿಗೆ ಜೀವಿತ ಎಂಬ ಮಹಿಳೆ ಕಾರಣ ಎಂದು ಉಲ್ಲೇಖಿಸಿದ್ದಲ್ಲದೇ ಪ್ರೀತಿ ಎಂದು ಹನಿಟ್ರ್ಯಾಪ್ ಮಾಡಿ ನನ್ನ ಬ್ಲಾಕ್ ಮೇಲ್ ಮಾಡಿದ್ದಾರೆ. ಜೊತೆಗೆ ಆಕೆಯ ತಾಯಿ ಹಾಗೂ ತಂಗಿ ಕೂಡ ಬ್ಲಾಕ್ ಮೇಲ್ ಮಾಡಿದ್ದಾರೆ. ಹಾಗೆ ಆಕೆಯ ಪರಿಚಯಸ್ಥರು ಕೂಡ ನನಗೆ ಟಾರ್ಚರ್ ಮಾಡಿದ್ದಾರೆ ಎಂದು ಡೆತ್‌ನೋಟ್ ನಲ್ಲಿ ಸಂದೇಶ್ ನಮೂದಿಸಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮೃತ ಸಂದೇಶ್ ಅವರ ಪತ್ನಿ ಯಶೋಧ ಅವರು ನಗರ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಆತ್ಮಹತ್ಯೆಗೆ ಶರಣಾದ ಮಾಜಿ ಸೈನಿಕನ ನಿವಾಸಕ್ಕೆ ಶಾಸಕ ಡಾ.ಮಂಥರ್‌ಗೌಡ ಭೇಟಿ



ಮಡಿಕೇರಿ, ನ.10– ಓರ್ವ ಮಹಿಳೆ ಸೇರಿದಂತೆ ಕೆಲವರಿಂದ ನನಗೆ ಕಿರುಕುಳವಾಗುತ್ತಿದೆ ಎಂದು ಆರೋಪಿಸಿ ಕಳೆದ ಎರಡು ದಿನಗಳ ಹಿಂದೆ ಪಂಪಿನಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದ ನಗರದ ಉಕ್ಕುಡ ನಿವಾಸಿ ಮಾಜಿ ಸೈನಿಕ ಸಂದೇಶ್ ಅವರ ಮನೆಗೆ ಮಡಿಕೇರಿ ಶಾಸಕ ಡಾ.ಮಂಥರ್‌ಗೌಡ ಭೇಟಿ ನೀಡಿದರು.

ಸಂದೇಶ್ ಅವರ ಪತ್ನಿ ಹಾಗೂ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದ ಅವರು ಘಟನೆಯ ಕುರಿತು ಸಂಪೂರ್ಣ ಮಾಹಿತಿಯನ್ನು ಪಡೆದರು. ಈಗಾಗಲೇ ತನಿಖೆ ನಡೆಯುತ್ತಿದ್ದು, ತಪ್ಪಿತಸ್ಥರಿಗೆ ಕಾನೂನಿನ ಚೌಕಟ್ಟಿನಡಿ ಶಿಕ್ಷೆಯಾಗಲಿದೆ. ಕಾನೂನು ವ್ಯಾಪ್ತಿಯಲ್ಲಿ ನಾನು ಸಂಪೂರ್ಣ ಸಹಕಾರ ನೀಡುತ್ತೇನೆ ಎಂದು ಭರವಸೆ ನೀಡಿದರು. ಕಾಂಗ್ರೆಸ್ ನಗರಾಧ್ಯಕ್ಷ ಬಿ.ವೈ.ರಾಜೇಶ್, ಉಪಾಧ್ಯಕ್ಷ ಪ್ರಕಾಶ್ ಆಚಾರ್ಯ, ಸ್ಥಳೀಯ ನಗರಸಭಾ ಸದಸ್ಯ ಮನ್ಸೂರ್ ಮತ್ತಿತರ ಪ್ರಮುಖರು ಈ ಸಂದರ್ಭ ಹಾಜರಿದ್ದರು.

ಮೇಕೆಗಳು ಬಲಿ: ಹುಲಿ ದಾಳಿ ಶಂಕೆ

ಮಡಿಕೇರಿ,ನ.10– ಮೇಯಲು ಕಟ್ಟಿ ಹಾಕಿದ್ದ ಆಡುಗಳ ಮೇಲೆ ಹಾಡ ಹಗಲೇ ವನ್ಯ ಮೃಗವೊಂದು ದಾಳಿ ನಡೆಸಿ ಕೊಂದು ಹಾಕಿರುವ ಘಟನೆ ಪೊನ್ನಂಪೇಟೆ ತಾಲೂಕಿನಲ್ಲಿ ಸಂಭವಿಸಿದೆ.



ಪೊನ್ನಂಪೇಟೆ ತಾಲೂಕಿನ ಬಾಳಲೆ ಗ್ರಾಪಂ ವ್ಯಾಪ್ತಿಯ ರುದ್ರಬೀಡು ಗ್ರಾಮದಲ್ಲಿ ಈ ಘಟನೆ ನಡೆದಿದೆ.

ಹೊನ್ನಿಕೊಪ್ಪಲು ನಿವಾಸಿ ಎಂ.ಬಿ.ಸಣ್ಣಪ್ಪ ಎಂಬುವರು 3 ಆಡುಗಳನ್ನು ತಮ್ಮ ಗದ್ದೆಯಲ್ಲಿ ಕಟ್ಟಿ ಹಾಕಿದ್ದರು. ಶುಕ್ರವಾರ ಮಧ್ಯಾಹ್ನ 12.30ರ ವೇಳೆಯಲ್ಲಿ ಮೂರು ಆಡುಗಳ ಮೇಲೆ ವನ್ಯಜೀವಿ ದಾಳಿ ನಡೆಸಿ ಕೊಂದು ಹಾಕಿದೆ.

ಕಳೆದ 25 ದಿನಗಳ ಹಿಂದೆಯಷ್ಟೇ ಇದೇ ಸ್ಥಳದಲ್ಲಿ ಹುಲಿ ದಾಳಿಗೆ 1 ಹಸು ಮತ್ತು 10 ದಿನಗಳ ಹಿಂದೆ ಸಾವನ್ನಪ್ಪಿದ್ದ ಸ್ಥಿತಿಯಲ್ಲಿ ಕಾಡು ಹಂದಿ ಕಳೇಬರ ಕಾಫಿ ತೋಟದಲ್ಲಿ ಪತ್ತೆಯಾಗಿತ್ತು. ಘಟನಾ ಸ್ಥಳಕ್ಕೆ ತಿತಿಮತಿ ಆರ್‌ಎಫ್‌ಓ ಗೋಪಾಲ್, ಡಿಆರ್‌ಎಫ್‌ಓ ಹಾಲೇಶ್ ಮತ್ತು ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ಸಂದರ್ಭ ಮಾತನಾಡಿದ ಅರಣ್ಯಾಧಿಕಾರಿ ಗೋಪಾಲ್, ಆಡುಗಳ ಮೇಲೆ ಹುಲಿ ದಾಳಿ ನಡೆಸಿರುವ ಸಾಧ್ಯತೆ ಕಡಿಮೆ ಇದೆ. ಈ ಹಿಂದೆ ಹಸುವಿನ ಮೇಲೆ ದಾಳಿ ಮಾಡಿಕೊಂದು ಹಾಕಿದ್ದ ಹುಲಿ ಕಲ್ಲಳ್ಳ ಮಾರ್ಗವಾಗಿ ಕಾಡು ಸೇರಿದೆ. ಟ್ರ್ಯಾಪಿಂಗ್ ಕ್ಯಾಮರಾದಲ್ಲಿ ಹುಲಿ ಜಾಡು ಕೂಡ ಪತ್ತೆಯಾಗಿದೆ ಎಂದು ಹೇಳಿದರು. ಆಡುಗಳ ಸಾವಿನ ಕುರಿತು ಪಶು ವೈದ್ಯರು ನೀಡುವ ವರದಿಯನ್ನಾಧರಿಸಿ ಮುಂದಿನ ಕಾನೂನು ಕ್ರಮ ಕೈಗೊಳ್ಳುವು ದಾಗಿ ಹೇಳಿದರು.

ಗ್ರಾಮಸ್ಥರಾದ ಪ್ರಶಾಂತ್ ಮಾತನಾಡಿ, ತಮ್ಮ ತೋಟದಲ್ಲಿ ಕಳೆದ ಕೆಲವು ಸಮಯದ ಹಿಂದೆ ಕಾಡು ಹಂದಿಯ ಕಳೇಬರ ಪತ್ತೆಯಾಗಿತ್ತಲ್ಲದೇ, ಹುಲಿಯ ಹೆಜ್ಜೆ ಗುರುತುಗಳು ಕಂಡು ಬಂದಿತ್ತು ಆ ಸಮಯದಲ್ಲಿ ಅರಣ್ಯಾ ಇಲಾಖೆ ಬೋನು ಅಳವಡಿಸದೇ ಹಾಗೇ ಬಿಟ್ಟಿದ್ದರು. ಇದೀಗ ಹುಲಿ ದಾಳಿ ನಡೆಸಿ ಆಡುಗಳನ್ನು ಕೊಂದು ಹಾಕಿದೆ ಎಂದು ಆರೋಪಿಸಿದರು. ಈ ಹಿನ್ನೆಲೆಯಲ್ಲಿ ಹುಲಿ ಸೆರೆಗೆ ಬೋನು ಅಳವಡಿಸಬೇಕು ಎಂದು ಆಗ್ರಹಿಸಿದರು.

ತೀರ್ಪುಗಾರರಾಗಿ ಆಯ್ಕೆ



ನಾಪೋಕ್ಲು, ನ.10– 3ನೇ ಹಾಕಿ ಇಂಡಿಯಾ ಹಿರಿಯ ಪುರುಷರ (senior national) ಹಾಕಿ ಚಾಂಪಿಯನ್ ಶಿಪ್ ತೀರ್ಪುಗಾರರಾಗಿ ಹರ್ಷಿತ್ ಅಯ್ಯಪ್ಪ ಆಯ್ಕೆಯಾಗಿದ್ದಾರೆ. ಪಂದ್ಯಾವಳಿಯು ನ.16 ರಿಂದ 28ರವರೆಗೆ ಚೆನ್ನೈನಲ್ಲಿ ನಡೆಯಲಿದೆ. ಹರ್ಷಿತ್ ಅಯ್ಯಪ್ಪ ಮಡಿಕೇರಿ ತಾಲೂಕಿನ ಬಲ್ಲಮಾವಟ್ಟಿ ಗ್ರಾಮದ ಅಪ್ಪ ಚಟ್ಟೋಳಂಡ ಬೋಪಯ್ಯ ಮತ್ತು ಭೋಜಮ್ಮ ನವರ ಪುತ್ರ.

ಸಾರಿಗೆ ಬಸ್ ನಿಲುಗಡೆಗೆ ಆಗ್ರಹಿಸಿ ಪ್ರತಿಭಟನೆ



ಪಾಂಡವಪುರ, ನ.10– ಕೆಎಸ್‌ಆರ್‌ಟಿಸಿ ಬಸ್ ನಿಲುಗಡೆಗೆ ಆಗ್ರಹಿಸಿ ತಾಲೂಕಿನ ಕೆ.ಹೊಸೂರು ಗೇಟ್ ಬಳಿ ಶಾಲಾ–ಕಾಲೇಜು ವಿದ್ಯಾರ್ಥಿಗಳು ಪಾಂಡವಪುರ–ನಾಗಮಂಗಲ ಮುಖ್ಯರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಸಾರಿಗೆ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿದ ವಿದ್ಯಾರ್ಥಿಗಳು, ಪಾಂಡವಪುರ–ನಾಗಮಂಗಲ, ಜಕ್ಕನಹಳ್ಳಿ ಮಾರ್ಗವಾಗಿ ಸಂಚರಿಸುವ ಸಾರಿಗೆ ಬಸ್‌ಗಳು ಕೆ.ಹೊಸೂರು ಗೇಟ್ ಬಳಿ ನಿಲ್ಲಿಸುತ್ತಿಲ್ಲ. ಇದರಿಂದ ವಿದ್ಯಾರ್ಥಿಗಳು ಶಾಲಾ–ಕಾಲೇಜಿಗೆ ತೆರಳಲು ಅನಾನೂಕೂಲವಾಗುತ್ತಿದೆ ಎಂದು ಆಕ್ರೋಶ ಹೊರ ಹಾಕಿದರು.

ಕಳೆದ 6 ತಿಂಗಳಿಂದ ಬಸ್ ನಿಲುಗಡೆಗೆ ಆಗ್ರಹಿಸಿ ಹಲವು ಬಾರಿ ಪ್ರತಿಭಟನೆ ನಡೆಸಿದರೂ, ಅಧಿಕಾರಿಗಳು ಕೆ.ಹೊಸೂರು ಗೇಟ್ ಬಳಿ ಬಸ್ ನಿಲುಗಡೆಗೆ ವ್ಯವಸ್ಥೆ ಮಾಡಿಲ್ಲ ಎಂದು ಕಿಡಿಕಾರಿದರು.

ನಿಲ್ದಾಣದಲ್ಲಿ ಎಕ್ಸ್‌ಪ್ರೆಸ್ ಬಸ್ ನಿಲ್ಲಿಸುವುದು ಬೇಡ. ಸ್ಥಳೀಯ ಸಾರಿಗೆ ಬಸ್ ನಿಲ್ಲಿಸಿದರೇ ಸಾಕು. ಆದರೆ ಈ ರಸ್ತೆಯಲ್ಲಿ ಸ್ಥಳೀಯವಾಗಿ ಓಡಾಡುವ ಬಸ್‌ಗಳು ಸಹ ನಿಲ್ಲಿಸುವುದಿಲ್ಲ. ನಿರ್ವಾಹಕರು ವಿದ್ಯಾರ್ಥಿಗಳಿಗೆ ಬಾಯಿಗೆ ಬಂದಂತೆ ನಿಂದಿಸುತ್ತಾರೆ. ಕೆಲವು ಬಸ್ ಡ್ರೈವರ್‌ಗಳು ನಮ್ಮೂರಿನ ಗೇಟ್ ಬಿಟ್ಟು 2 ಕಿಮೀ ದೂರದ ಟಿ.ಎಸ್.ಛತ್ರ ಗ್ರಾಮದಲ್ಲಿ ನಿಲ್ಲಿಸುತ್ತಾರೆ. ಇದರಿಂದ ಸಂಜೆ ವೇಳೆ ಹೆಣ್ಣು ಮಕ್ಕಳು, ವೃದ್ಧರು ಸೇರಿದಂತೆ ಸಾರ್ವಜನಿಕರು ಅಲ್ಲಿಂದ ನಡೆದುಕೊಂಡು ಬರಲು ಸಾಧ್ಯವೇ ಎಂದು ಹರಿಹಾಯ್ದರು.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ಅಪ್ಪಿರೆಡ್ಡಿ ಅವರಿಗೆ ಸಾರಿಗೆ ಬಸ್‌ಗಳು ಕೆ.ಹೊಸೂರು ಗೇಟ್ ಬಳಿ ನಿಲುಗಡೆಗೆ ಕ್ರಮ ಕೈಗೊಳ್ಳದಿದ್ದರೇ ನಮ್ಮ ಪ್ರತಿಭಟನೆ ಹಿಂಪಡೆಯುವುದಿಲ್ಲ. ಒಂದು ದಿನ ವ್ಯರ್ಥವಾದರೂ ಪರವಾಗಿಲ್ಲ ಹೋರಾಟ ಮುಂದುವರೆಸುತ್ತೇವೆ ಎಂದು ತರಾಟೆಗೆ ತೆಗೆದುಕೊಂಡರು. ಇದೇ ವೇಳೆ ಸಾರಿಗೆ ವ್ಯವಸ್ಥಾಪಕ ಅಪ್ಪಿರೆಡ್ಡಿಗೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಕರೆ ಮಾಡಿ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗದಂತೆ ಕ್ರಮಕೈಗೊಳ್ಳುವಂತೆ ಸೂಚಿಸಿದರು. ಬಳಿಕ ಅಪ್ಪಿರೆಡ್ಡಿ ಅವರು ಸ್ಥಳೀಯ ವಾಗಿ ಓಡಾಡುವ ಎಲ್ಲಾ ಬಸ್‌ಗಳು ಕೆ.ಹೊಸೂರು ಗೇಟ್ ಬಳಿ ನಿಲ್ಲಿಸಲು ಹಾಗೂ ಒಂದು ಬಸ್ ಕೆ.ಹೊಸೂರು ಗ್ರಾಮದ ಮೇಲೆ ಓಡಾಡಲು ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದ ಮೇರೆಗೆ ಪ್ರತಿಭಟನೆ ವಾಪಸ್ ಪಡೆದರು. ಪ್ರತಿಭಟನೆಯಲ್ಲಿ ವಿದ್ಯಾರ್ಥಿಗಳಾದ ಶ್ರುತಿ, ಸುಚಿತ್ರ, ಭಾವನ ಸೇರಿದಂತೆ ಹಲವರಿದ್ದರು.

ಜೆಡಿಎಸ್ ಮುಖಂಡರಿಂದ ಮದ್ದೂರಲ್ಲಿ ಬರ ಅಧ್ಯಯನ

ಮಾಜಿ ಸಚಿವ ತಮ್ಮಣ್ಣ ಅಧ್ಯಕ್ಷತೆಯಲ್ಲಿ ರೈತರ ಸಮಸ್ಯೆ ಆಲಿಸಿದ ಮುಖಂಡರು



ಮದ್ದೂರು, ನ.10– ಮಳೆ ಕೊರತೆಯಿಂದ ಜಿಲ್ಲೆಯಲ್ಲಿ ಬರ ಪರಿಸ್ಥಿತಿ ಉಂಟಾಗಿರುವ ಹಿನ್ನೆಲೆಯಲ್ಲಿ ಜೆಡಿಎಸ್ ಮುಖಂಡರು ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಅವರ ಅಧ್ಯಕ್ಷತೆಯಲ್ಲಿ ಶುಕ್ರವಾರ ಬರ ಅಧ್ಯಯನ ನಡೆಸಿದರು.

ತಾಲೂಕಿನ ಹೂತಗೆರೆ ಗ್ರಾಮದ ಬಕಪ್ಪನ ಜಮೀನಿನಲ್ಲಿ ರಾಗಿ ತೆನೆ ವೀಕ್ಷಿಸಿದ ಮುಖಂಡರು ಬಳಿಕ ಅಂಕನಾಥಪುರ, ಹರಕನಹಳ್ಳಿ, ಮಲ್ಲನಕುಪ್ಪೆ, ಕೆ.ಹೊನ್ನಲಗೆರೆ, ಎಸ್.ಐ.ಹಾಗಲಹಳ್ಳಿ ಸೇರಿದಂತೆ ವಿವಿಧೆಡೆ ರೈತರ ಜಮೀನುಗಳಿಗೆ ತೆರಳಿ ಬೆಳೆಗಳ ಸ್ಥಿತಿಗತಿ ವೀಕ್ಷಿಸಿ, ನಷ್ಟದ ಬಗ್ಗೆ ಅಧ್ಯಯನ ನಡೆಸಿತು.

ಮಲ್ಲನಾಯಕನಹಳ್ಳಿ ಗ್ರಾಮಕ್ಕೆ ಭೇಟಿ ನೀಡಿದ ವೇಳೆ ರೈತರಾದ ನಿಂಗಯ್ಯ ಮತ್ತು ಸುರೇಶ್ ಮಾತನಾಡಿ, ಮಳೆ ನಂಬಿ ಮೊದಲು ಜಮೀನಿನಲ್ಲಿ ರಾಗಿ ಬಿತ್ತನೆ ಮಾಡಿದೆವು. ಆದರೆ ಮಳೆ ಬಾರದ ಕಾರಣ ಬೆಳೆ ಬರಲಿಲ್ಲ. ಬಳಿಕ ಉರುಳಿ ಹಾಕಿದೆವು. ಅದು ಸಹ ಬರಲಿಲ್ಲ. ಇದರಿಂದ ಸಾವಿರಾರು ರೂ. ನಷ್ಟ ಸಂಭವಿಸಿದೆ. ರಾತ್ರಿ ವೇಳೆ ವಿದ್ಯುತ್ ನೀಡುತ್ತಾರೆ. ಈ ಭಾಗದಲ್ಲಿ ಚಿರತೆಗಳ ಹಾವಳಿ ಹೆಚ್ಚಾಗಿದ್ದು, ಹಲವು ಮಂದಿ ಮೇಲೆ ದಾಳಿ ನಡೆಸಿ ಗಾಯಗೊಳಿಸಿದೆ. ಹೀಗಾಗಿ ಬೆಳಗ್ಗಿನ ವೇಳೆ ವ್ಯವಸಾಯಕ್ಕೆ ಸಮರ್ಪಕ ವಿದ್ಯುತ್ ನೀಡಲು ಕ್ರಮ ವಹಿಸಬೇಕು. ಅಧಿಕಾರಿಗಳು ಒಣಗಿದ ಬೆಳೆಯ ಸರ್ವೆಯನ್ನು ಕಾಟಾಚಾರಕ್ಕೆ ಮಾಡಿದ್ದಾರೆ. ಇದರಿಂದ ನಮಗೆ ಸೂಕ್ತ ಪರಿಹಾರ ಸಿಗುವುದು ಕಷ್ಟವಾಗಿದೆ. ಮುಂದಿನ ದಿನಗಳಲ್ಲಿ ಸಮಸ್ಯೆ ಮತ್ತಷ್ಟು ಜಟಿಲವಾಗಲಿರುವುದರಿಂದ ಸರ್ಕಾರದ ಮಟ್ಟದಲ್ಲಿ ಹೋರಾಡಿ ನ್ಯಾಯ ಒದಗಿಸಿಕೊಡುವಂತೆ ಅಳಲು ತೋಡಿಕೊಂಡರು.

ಕೆಸ್ತೂರಲ್ಲಿ ರೈತ ಮಾಸ್ತಿಗೌಡ ಮಾತನಾಡಿ, ಡಿ.ಸಿ.ತಮ್ಮಣ್ಣ ಶಾಸಕರಾಗಿದ್ದ ವೇಳೆ ಏತ ನೀರಾವರಿ ಮೂಲಕ ಆತಗೂರು ಹೋಬಳಿಯ ಎಲ್ಲಾ ಕೆರೆಗಳಿಗೆ ನೀರು ತುಂಬಿಸಿದ್ದರು. ಇದರಿಂದ ಈ ಭಾಗದ ರೈತರಿಗೆ ಅನುಕೂಲವಾಗಿತ್ತು. ಈಗ ಶಿಂಷಾ ನದಿ ಮೂಲಕ ತಮಿಳುನಾಡಿಗೆ ನೀರು ಹರಿಯುತ್ತಿದ್ದರೂ ಈ ಭಾಗದ ಕೆರೆಗಳಿಗೆ ನೀರು ತುಂಬಿಸುವ ಆಸಕ್ತಿಯನ್ನು ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ತೋರುತ್ತಿಲ್ಲ ಎಂದು ಆರೋಪಿಸಿದರು. ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಮಾತನಾಡಿ, ಜಿಲ್ಲೆಯ 7 ತಾಲೂಕುಗಳಲ್ಲಿ ಬರ ಅಧ್ಯಯನ ಮಾಡಿ ವಸ್ತು ಸ್ಥಿತಿಯ ವಿಸ್ತೃತ ವರದಿ ನೀಡುವಂತೆ ಜೆಡಿಎಸ್ ವರಿಷ್ಠರು ತಿಳಿಸಿದ್ದಾರೆ. ಆದ್ದರಿಂದ ಎಲ್ಲಾ ತಾಲೂಕಿನಲ್ಲೂ ಅಧ್ಯಯನ ಮಾಡಿ ವರದಿ ಸಂಗ್ರಹಿಸಲಾಗುತ್ತಿದೆ. ಬಳಿಕ ಈ ವರದಿಯನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿ ರೈತರಿಗೆ ಅನುಕೂಲ ಕಲ್ಪಿಸುವಂತೆ ಅಧಿವೇಶನದಲ್ಲಿ ಜೆಡಿಎಸ್ ಹೋರಾಟ ಮಾಡಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾಂಗ್ರೆಸ್ ಸರ್ಕಾರದ ಬಿಟ್ಟಿ ಯೋಜನೆಗಳಿಗೆ ಮನಸೋತು ರಾಜ್ಯದ ಜನರು ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತಂದು 3 ತಿಂಗಳಲ್ಲೇ ರೋಸಿ ಹೋಗಿದ್ದಾರೆ. ಕುಮಾರಸ್ವಾಮಿ ಅವರನ್ನು ಸಿಎಂ ಮಾಡಿದ್ದರೆ ಪಂಚರತ್ನ ಯೋಜನೆಗಳನ್ನು ಜಾರಿಗೆ ತಂದು ಎಲ್ಲರಿಗೂ ಅನುಕೂಲ ಕಲಿಸುತ್ತಿದ್ದರು ಎಂದರು.

ಮಾಜಿ ಶಾಸಕ ಸುರೇಶ್‌ಗೌಡ ಮಾತನಾಡಿದರು. ಈ ವೇಳೆ ಶಾಸಕ ಮಂಜು, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಮಾಜಿ ಶಾಸಕರಾದ ಸುರೇಶ್‌ಗೌಡ, ಅನ್ನದಾನಿ, ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ ಶ್ರೀಕಂಠೇಗೌಡ, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಪಿ.ಸಂದರ್ಶ, ರಾಜ್ಯ ಸಂಘಟನಾ ಕಾರ್ಯದರ್ಶಿಗಳಾದ ಬಿಳಿಯಪ್ಪ ಚಾಮನಹಳ್ಳಿ ಸಿ.ಕೆ.ಸ್ವಾಮಿಗೌಡ, ತಾಲೂಕು ಪ್ರಧಾನ ಕಾರ್ಯದರ್ಶಿ ಮಾದನಾಯಕನಹಳ್ಳಿ ರಾಜಣ್ಣ ಇದ್ದರು.

ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ: ಮೂವರ ಬಂಧನ

ಮದ್ದೂರು, ನ.10– ಅಪ್ರಾಪ್ತೆ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ ಆರೋಪದ ಮೇಲೆ ಮದ್ದೂರು ಪೊಲೀಸರು ಮೂವರನ್ನು ಬಂಧಿಸಿದ್ದಾರೆ.

ಪ್ರಮುಖ ಆರೋಪಿ ಹಾಗೂ ಬಾಲಕಿ ಮೈಸೂರಿನ ಕಾಲೇಜೊಂದರಲ್ಲಿ ದ್ವಿತೀಯ ಪಿಯುಸಿ ವ್ಯಾಸಾಂಗ ಮಾಡುತ್ತಿದ್ದು, ಆರೋಪಿಯು ಬಾಲಕಿಯನ್ನು ಪ್ರೀತಿಸುವ ನಾಟಕವಾಡಿ ಮೈಸೂರಿನಲ್ಲಿ ನಡೆದ ಯುವ ದಸರಾ ಸೇರಿದಂತೆ ವಿವಿಧೆಡೆ ಆಕೆಯೊಂದಿಗೆ ಸುತ್ತಾಡಿದ್ದ ಎನ್ನಲಾಗಿದೆ. ನ.4ರಂದು ಮದ್ದೂರಿಗೆ ಬಾಲಕಿಯನ್ನು ಕರೆಸಿಕೊಂಡಿದ್ದ ಆರೋಪಿ, ಬೆಂಗಳೂರು– ಮೈಸೂರು ಹೆದ್ದಾರಿಯಲ್ಲಿರುವ ಲಾಡ್ಜ್‌ಗೆ ಕರೆದೊಯ್ದು ಆಕೆ ಮೇಲೆ ಅತ್ಯಾಚಾರ ಎಸಗಿ ಅದನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿದ್ದ. ನಂತರ ತನ್ನ ಇಬ್ಬರು ಗೆಳೆಯರನ್ನು ಲಾಡ್ಜ್‌ಗೆ ಕರೆಸಿ ಅವರ ಜೊತೆಯೂ ಸಹಕರಿಸುವಂತೆಯೂ ಇಲ್ಲದಿದ್ದರೇ ಜಾಲತಾಣಗಳಲ್ಲಿ ವಿಡಿಯೋ ಹರಿಬಿಡುವುದಾಗಿ ಬೆದರಿಸಿ ಮೂವರೂ ಸಾಮೂಹಿಕವಾಗಿ ಅತ್ಯಾಚಾರ ಎಸಗಿದ್ದಲ್ಲದೇ ಅದನ್ನು ಕೂಡ ವಿಡಿಯೋ ಮಾಡಿದ್ದರು. ಘಟನೆ ಕುರಿತು ಯಾರಿಗಾದರೂ ತಿಳಿಸಿದರೆ ಎಲ್ಲಾ ವಿಡಿಯೋ ಬಿಡುವುದಾಗಿ ಆರೋಪಿಗಳೆಲ್ಲರೂ ಬೆದರಿಕೆ ಹಾಕಿದ್ದರು. ಜೊತೆಗೆ ಕರೆ ದಾಗಲೆಲ್ಲಾ ಬರಬೇಕು ಎಂದೂ ತಾಕೀತು ಮಾಡಿದ್ದರು. ಆರೋಪಿಗಳು ಮತ್ತೆ ಮತ್ತೆ ಕರೆ ಮಾಡಿ ಬೆದರಿಸುತ್ತಿದ್ದ ಕಾರಣ ಬಾಲಕಿ ಘಟನೆ ಕುರಿತು ತನ್ನ ತಾಯಿ ಬಳಿ ಹೇಳಿ ಕೊಂಡಿದ್ದರು. ಈ ಕುರಿತು ಬಾಲಕಿ ತಾಯಿ ಮದ್ದೂರು ಠಾಣೆಯಲ್ಲಿ ಸಾಮೂಹಿಕ ಅತ್ಯಾಚಾರ, ಜಾತಿ ನಿಂದನೆ, ಕೊಲೆ ಬೆದರಿಕೆಯ ದೂರು ದಾಖಲಿಸಿದ್ದರು. ಆರೋಪಿಗಳೆಲ್ಲರೂ ಬಾಲಕಿಯ ಅಕ್ಕಪಕ್ಕದ ಗ್ರಾಮದವರೇ ಆಗಿದ್ದಾರೆ. ಪ್ರಮುಖ ಆರೋಪಿ ಹಾಗೂ ಆತನ ಗೆಳೆಯ ಬಾಲಕರಾಗಿದ್ದು ಬಾಲಕರ ಬಾಲ ಮಂದಿರಕ್ಕೆ ಕಳುಹಿಸಲಾಗಿದೆ. ಮತ್ತೊಬ್ಬ ಆರೋಪಿ ಪ್ರಾಪ್ತ ವಯಸ್ಕನಾಗಿದ್ದು ಜೈಲಿಗೆ ಕಳುಹಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಹೇಳಿದರು.

ಇಂದು ವಿದ್ಯುತ್ ವ್ಯತ್ಯಯ

ಮಂಡ್ಯ, ನ.10– ಬಸರಾಳು ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯ ಹಮ್ಮಿಕೊಂಡಿರುವುದರಿಂದ ನ.11 ರಂದು ಬೆಳಗ್ಗೆ 9 ರಿಂದ ಸಂಜೆ 6 ರವರೆಗೆ ಬಸರಾಳು, ಶಿವಪುರ, ಬೇಬಿ, ಕಂಬದಹಳ್ಳಿ, ಬಿದರಕಟ್ಟೆ, ಮಾರಸಿಂಗನಹಳ್ಳಿ, ಅಂಕುಶಾಪುರ, ಬೆನ್ನಹಟ್ಟಿ, ಶಾನಭೋಗನಹಳ್ಳಿ, ಬೊಮ್ಮನಹಳ್ಳಿ, ಅನುಕುಪ್ಪೆ, ಮನುಗನಹಳ್ಳಿ, ಎಂ.ಹಟ್ನ, ಗಣಿಗ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಕೊಳ್ಳೇಗಾಲ ವ್ಯಾಪ್ತಿಯಲ್ಲಿ ರೇಷ್ಮೆ ಕಾರ್ಖಾನೆಗಳ ಪುನಶ್ಚೇತನಕ್ಕೆ ಕ್ರಮ

ಶಾಸಕ ಎ.ಆರ್.ಕೃಷ್ಣಮೂರ್ತಿ ಭರವಸೆ



ಯಳಂದೂರು, ನ.10– ಕೊಳ್ಳೇಗಾಲ ಮೀಸಲು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಮಾಂಬಳ್ಳಿ, ಸಂತೆಮರಹಳ್ಳಿ, ಮುಡಿಗುಂಡ, ಹಂಪಾಪುರದಲ್ಲಿರುವ ರೇಷ್ಮೆ ಕಾರ್ಖಾನೆಗಳ ಪುನಶ್ಚೇತನಕ್ಕೆ ಕ್ರಮ ವಹಿಸಲಾಗುವುದು ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ಭರವಸೆ ನೀಡಿದ್ದಾರೆ.

ಶುಕ್ರವಾರ ತಾಲೂಕಿನ ಹೊನ್ನೂರು ಹಾಗೂ ಕೆಸ್ತೂರು ಗ್ರಾಮಗಳಲ್ಲಿ ರೇಷ್ಮೆ ಇಲಾಖೆಯ ವತಿಯಿಂದ ರೇಷ್ಮೆ ನೂಲು ಬಿಚ್ಚಾಣಿಕೆ ಭಾಗಿದಾರರಿಗೆ ರೇಷ್ಮೆ ಇಲಾಖೆಯ ವಿಶೇಷ ಘಟಕದ ರೇಷ್ಮೆ ಕೃಷಿ ಅಭಿವೃದ್ಧಿ ಯೋಜನೆಯಡಿಯಲ್ಲಿ ನೂತನ ಕಾಟೇಜ್ ಬೇಸಿನ್ ಘಟಕಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು. ರೇಷ್ಮೆಗೆ ಚಾಮರಾಜನಗರ ಜಿಲ್ಲೆ ಈ ಹಿಂದೆ ಹೆಚ್ಚು ಪ್ರಸಿದ್ಧಿಯನ್ನು ಪಡೆದಿತ್ತು. ಕುದೇರು ಗ್ರಾಮದಲ್ಲಿ ರೇಷ್ಮೆ ತರಬೇತಿ ಕೇಂದ್ರವೂ ಇತ್ತು. ಅಲ್ಲದೆ ಸಂತೆಮರಹಳ್ಳಿ ಮುಡಿಗುಂಡ ರೇಷ್ಮೆ ಕಾರ್ಖಾನೆಗಳಿಗೆ ರಾಜ್ಯದ ಇತರೆ ಭಾಗಗಳಿಂದಲೂ ರೇಷ್ಮೆ ಗೂಡು ವಹಿವಾಟು ನಡೆಸಲು ಅನೇಕರು ಬರುತ್ತಿದ್ದರು. ಆದರೆ ಈಗ ರೇಷ್ಮೆ ಗೂಡಿನ ಅವಕ ಕಡಿಮೆಯಾಗಿದೆ. ಈ ಮಾರುಕಟ್ಟೆಗಳು ಇನ್ನೂ ಚಾಲ್ತಿಯಲ್ಲಿದ್ದರೂ ನಿರೀಕ್ಷಿತ ಪ್ರಮಾಣದಲ್ಲಿ ಇಲ್ಲಿ ಗೂಡು ಲಭ್ಯವಾಗುತ್ತಿಲ್ಲ. ಅಲ್ಲದೆ ಮಾಂಬಳ್ಳಿ ಹಾಗೂ ಹಂಪಾಪುರ ಗ್ರಾಮಗಳಲ್ಲಿನ ರೇಷ್ಮೆ ಕಾರ್ಖಾನೆಗಳು ಸಂಪೂರ್ಣ ಮುಚ್ಚಿ ಹೋಗಿವೆ ಎಂದು ಅವರು ಹೇಳಿದರು.

ಇದಕ್ಕೆಲ್ಲ ಪ್ರಮುಖ ಕಾರಣ ಗೂಡಿನ ಪ್ರಮಾಣ ಇಳಿದಿರುವುದೇ ಆಗಿದೆ. ರೇಷ್ಮೆ ಬೆಳೆಯನ್ನು ಉತ್ತೇಜಿಸುವ ಸಲುವಾಗಿ ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ. ಕಾಟೇಜ್ ಬೇಸಿನ್‌ಗೆ ಸರ್ಕಾರದ ವತಿಯಿಂದ ಪರಿಶಿಷ್ಟ ಜಾತಿ, ವರ್ಗದವರಿಗೆ ಶೇ. 95 ರಷ್ಟು ಸಬ್ಸಿಡಿ ಇತರೆ ವರ್ಗದವರಿಗೆ ಶೇ. 75 ರಷ್ಟು ಸಬ್ಸಿಡಿ ದೊರೆಯಲಿದೆ. ಇಂದು ಅನೇಕರು ಇದರ ಲಾಭವನ್ನು ಪಡೆದುಕೊಂಡಿದ್ದಾರೆ. ಸರ್ಕಾರ ನೀಡುವ ಈ ಸೌಲಭ್ಯವನ್ನು ಪಡೆದುಕೊಂಡು ಆರ್ಥಿಕವಾಗಿ ಸಬಲರಾಗಲು ಇದು ಉತ್ತಮ ಅವಕಾಶವಾಗಿದೆ. ಯುವಜನತೆ ಸ್ವಂತ ಉದ್ಯೋಗ ಮಾಡಲು ಇದು ಉತ್ತಮ ಅವಕಾಶವಿದ್ದು ಇದರ ಲಾಭ ಪಡೆದುಕೊಳ್ಳಬೇಕು ಎಂದರು.

ಕಾರ್ಖಾನೆ ಮತ್ತೆ ಆರಂಭಕ್ಕೆ ಕ್ರಮ: ಮಾಂಬಳ್ಳಿ ಹಾಗೂ ಹಂಪಾಪುರ ಗ್ರಾಮದಲ್ಲಿರುವ ರೇಷ್ಮೆ ಕಾರ್ಖಾನೆಗಳನ್ನು ಮತ್ತೆ ಆರಂಭಿಸಲು, ಈಗಿರುವ ಸಂತೆಮರಹಳ್ಳಿ, ಮುಡಿಗುಂಡ ರೇಷ್ಮೆ ಕಾರ್ಖಾನೆಗಳ ಪುನಶ್ಚೇತನ, ಕುದೇರು ಗ್ರಾಮದ ತರಬೇತಿ ಕೇಂದ್ರದ ಮರುಚಾಲನೆ ವಿಷಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಜಿಲ್ಲೆಯ ಉಸ್ತುವಾರಿ ಸಚಿವರೂ, ರೇಷ್ಮೆ ಇಲಾಖೆಯ ಸಚಿವರೂ ಆದ ವೆಂಕಟೇಶ್ ಅವರ ಗಮನಕ್ಕೆ ಈ ವಿಷಯವನ್ನು ತಂದು ಇದರ ಪುನಶ್ಚೇತನಕ್ಕೆ ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ಹೊನ್ನೂರು ಗ್ರಾಮದ ಒಂದು ಹಾಗೂ ಕೆಸ್ತೂರು ಗ್ರಾಮದ ವೆಂಕಟೇಶ್ ಹಾಗೂ ಪುಟ್ಟಮ್ಮರವರ ನೂತನ ಕಾಟೇಜ್ ಬೇಸಿನ್ ಘಟಕಗಳನ್ನು ಉದ್ಘಾಟಿಸಿ ಮಾಹಿತಿ ಪಡೆದು ಕೊಂಡರು. ಜಿಪಂ ಮಾಜಿ ಉಪಾಧ್ಯಕ್ಷ ಜೆ. ಯೋಗೇಶ್, ಚೇತನ್ ದೊರೆರಾಜ್, ರೇಷ್ಮೆ ಇಲಾಖೆಯ ಉಪ ನಿರ್ದೇಶಕ ರಾಚಪ್ಪ, ಸಹಾಯಕ ನಿರ್ದೇಶಕ ಕನಕರಾಜು, ವೆಂಕಟೇಶ್, ಪುಟ್ಟಮ್ಮ, ಜೆಇ ಮಂಜು, ಚೇತನ್, ತೋಟೇಶ್, ರಾಘವೇಂದ್ರ, ಕೆಸ್ತೂರು ನಾಗರಾಜು ಸೇರಿದಂತೆ ಅನೇಕರು ಇದ್ದರು.

ಶ್ರೀಮಂಟೇಸ್ವಾಮಿ ದೇವಸ್ಥಾನ ಅಭಿವೃದ್ಧಿ ಸಮಿತಿ ಧಾರ್ಮಿಕ ಪ್ರವಾಸಕ್ಕೆ ಚಾಲನೆ



ಚಾಮರಾಜನಗರ, ನ.10– ನಗರದ 15 ನೇ ವಾರ್ಡ್ ನ ಬಾಬು ಜಗಜೀವನರಾಂ ಬಡಾವಣೆಯ ಶ್ರೀ ಮಂಟೇಸ್ವಾಮಿ ದೇವಸ್ಥಾನ ಅಭಿವೃದ್ಧಿ ಸಮಿತಿ ಕೈಗೊಂಡಿರುವ ಶ್ರೀ ಕುರುಬನಕಟ್ಟೆ ಕ್ಷೇತ್ರದ ಧಾರ್ಮಿಕ ಪ್ರವಾಸಕ್ಕೆ ವಾರ್ಡ್‌ನ ಸದಸ್ಯ ಆರ್.ಪಿ.ನಂಜುಂಡಸ್ವಾಮಿ ಚಾಲನೆ ನೀಡಿದರು.

ಬೀದಿಯಲ್ಲಿರುವ ಶ್ರೀಮಂಟೇಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಎರಡು ಬಸ್‌ನಲ್ಲಿ ಹೊರಟ ಪ್ರವಾಸಕ್ಕೆ ಚಾಲನೆ ನೀಡಿದ ನಂಜುಂಡಸ್ವಾಮಿ ಮಾತನಾಡಿ, ಈ ಭಾಗದ ಹಿಂದುಳಿದ ವರ್ಗಗಳ ಆರಾಧ್ಯ ದೈವರಾಗಿರುವ ಮಂಟೇಸ್ವಾಮಿ ಕೆಲ ಶತಮಾನಗಳ ಹಿಂದೆ ಧರ್ಮಕ್ರಾಂತಿಯನ್ನೆಸಗಿ ತನ್ನದೆ ಆದ ಪರಂಪರೆಯನ್ನು ನಿರ್ಮಿಸಿದರು. ಅಂತಹ ಧಾರ್ಮಿಕ ಸ್ಥಳಕ್ಕೆ ಪ್ರವಾಸ ಕೈಗೊಂಡಿರುವ ಶ್ರೀ ಮಂಟೇಸ್ವಾಮಿ ದೇವಸ್ಥಾನ ಅಭಿವೃದ್ಧಿ ಸಮಿತಿ ಪದಾಧಿಕಾರಿಗಳ ಪ್ರಯಾಣ ಸುಖಕರವಾಗಲಿ ಎಂದು ಆಶಿಸಿದರು.

ಸಮಿತಿ ಅಧ್ಯಕ್ಷ ಚಾ.ಗು.ನಾಗರಾಜು ಮಾತನಾಡಿ, ಧರೆಗೆ ದೊಡ್ಡವರು ಪರಂಜ್ಯೋತಿ ಮಂಟೇದಲಿಂಗಯ್ಯ ಕಾಲಜ್ಞಾನ ಸಾರಿದ ಕಂಡಾಯದೊಡೆಯರ ಪರಂಪರೆಯನ್ನು ನಮ್ಮ ಪೂರ್ವಜರು ಆಚರಣೆ ಮಾಡಿಕೊಂಡು ಅ ಪರಂಪರೆ ಉಳಿಸಿ– ಬೆಳಸುವ ಸಲುವಾಗಿ ಶ್ರೀ ಮಂಟೇಸ್ವಾಮಿ ದೇವಸ್ಥಾನ ಅಭಿವೃದ್ಧಿ ಸಮಿತಿ ವತಿಯಿಂದ ಶ್ರೀ ಕುರುಬನಕಟ್ಟೆ ಕ್ಷೇತ್ರದ ಧಾರ್ಮಿಕ ಪ್ರವಾಸ ಕೈಗೊಂಡು ಚೆನ್ನಯ್ಯ, ಲಿಂಗಯ್ಯ ಕಂಡಾಯಗಳಿಗೆ ಪೂಜೆ ಸಲ್ಲಿಸಲಾಗುವುದು ಎಂದರು. ಸಮಿತಿಯ ಕಾರ್ಯದರ್ಶಿ ಹೆಚ್.ಹೆಚ್.ನಾಗರಾಜು, ಉಪಾಧ್ಯಕ್ಷರಾದ ಶಶಿಕಲಾ, ಸಿದ್ದಪ್ಪಾಜಿ, ನಿಂಗಣ್ಣ, ಭಾಗ್ಯ, ಗೀತಾ, ಶಶಿಕಲಾ, ಸ್ವಾಮಿ, ರೇವಣ್ಣ, ಚಿನ್ನಸ್ವಾಮಿ, ಜಯಮ್ಮ, ನಿಂಗಮ್ಮ ಹಾಜರಿದ್ದರು.

ಗೌಡಿಕೆ ವೃಷಬೇಂದ್ರಪ್ಪ ನಿಧನ

ಚಾಮರಾಜನಗರ, ನ.10– ತಾಲೂಕಿನ



ನಂಜೇದೇವನಪುರ ಗ್ರಾಮದ ಹಿರಿಯ ರಾದ ಗೌಡಿಕೆ ವೃಷಬೇಂದ್ರಪ್ಪ (85) ಅನಾರೋಗ್ಯದಿಂದ ನಿನ್ನೆ ರಾತ್ರಿ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರಾದ ಎನ್.ವಿ. ಮಹದೇವಸ್ವಾಮಿ, ಎನ್.ವಿ. ಶಾಂತಮೂರ್ತಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮದ ಜಮೀನಿನಲ್ಲಿ ಇಂದು ಮಧ್ಯಾಹ್ನ ನೆರವೇರಿತು.

ಖಾಲಿ ಡಬ್ಬ ಹಿಡಿದು ಕಾವೇರಿ ಪ್ರತಿಭಟನೆ



ಚಾಮರಾಜನಗರ, ನ.10– ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವ ಕ್ರಮ ಖಂಡಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ನಗರದಲ್ಲಿ ಕಳೆದ 61 ದಿನಗಳಿಂದ ನಿರಂತರವಾಗಿ ಪ್ರತಿಭಟನೆ ನಡೆಸುತ್ತಿದ್ದು ಇಂದು ಕೂಡ ಖಾಲಿ ಡಬ್ಬ ಹಿಡಿದು ವಿನೂತನ ಪ್ರತಿಭಟನೆ ನಡೆಸಲಾಯಿತು.

ನಗರದ ಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಅವರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾನಿರತರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಖಾಲಿ ಡಬ್ಬಗಳನ್ನು ಹಿಡಿದು ಕೇಂದ್ರ ಮತ್ತು ರಾಜ್ಯ ಸರ್ಕಾರ, ತಮಿಳುನಾಡು ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಶಾ.ಮುರಳಿ, ಚಾ.ವೆಂ.ರಾಜ್ ಗೋಪಾಲ್, ಮಹೇಶ್ ಗೌಡ, ಪಣ್ಯದಹುಂಡಿ ರಾಜು, ನಿಜಧ್ವನಿಗೋವಿಂದರಾಜು, ಗು.ಪುರುಷೋತ್ತಮ್ ನಂಜುಂಡಸ್ವಾಮಿ, ಪ್ರಕಾಶ್, ತಾಂಡವಮೂರ್ತಿ, ವೀರಭದ್ರ, ಚಾ.ಸಿ.ಸಿದ್ದರಾಜು, ರಾಚಪ್ಪ, ಲಿಂಗರಾಜು ಇತರರು ಭಾಗವಹಿಸಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

SITES FOR SALE
MUDA Approved Sites
30x50 - 50 Lakhs
Bank loan upto 75%
Near JSS / Police Layout, T.Narasipura Road, Mysuru
1.5 Kms from Ring Road
9900363084, 8660105902

WANTED
* HARDWARE AND NETWORKING ENGINEER
* CCTV INSTALLER
* OFFICE ASSISTANT
* SALESMAN
FOR COMPUTER AND CCTV DEALER OFFICE. Contact :
9481349347 / 7348977948

WANTED
COMPUTER TYPIST (Male / Female) FOR ADVOCATE OFFICE
Qualification: Typing - English & Kannada (Kan - Nudi / Baraha) in M.S. Word & Excel / Page Maker
9.30 am to 2 pm. Sunday: 10.30 to 3 pm. Salary: 7,500/- per month. For evening: (Male only). 6.30 pm to 11.30 pm. Salary: Rs. 7,500/- per month.
7349337469, 9448525072

SITE FOR SALE
MUDA
40x60, W/F
Opp. Vikrant Tyres, KRS Road.
Mob: 9620503555 9036150712

3 BHK HOUSE FOR RENT
At 'M' Block, Kuvempunagar, Mysuru.
Mob: 9845346794
NO BROKERAGE

ಬೇಕಾಗಿದ್ದಾರೆ
ಪ್ರತಿಷ್ಠಿತ ಸಸ್ಯಾಹಾರಿ ಹೋಟೆಲ್‌ಗೆ ಜ್ಯೂಸ್, ಚಾಟ್ಸ್, ಕೆಲಸ ಮಾಡುವವರು ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ:
8762462011

VRUKSHA-24 KIDS
Montessori Teachers Training Courses & Early Learning Centre
Integrated Teacher Training Courses
Registration Open
Classes Start from November
For Registration Call / Whatsapp
9901881445

SITES FOR SALE
30x40 - 33 Lakhs
20x40 - 24 Lakhs
Bank loan upto 80%. Near Gurur Bus Stop, Ramabainagar, Mysuru. DTCP Approved (Corporation limits)
1.5 Kms from JP Nagar Ring Road
Mob: 8660105902

HOUSE FOR SALE
3 BHK Duplex New House
20x30, MUDA Site, fully furnished house, N/F Door at Vijayanagar 4th Stage, Near Marimallappa School.
Price: Rs. 84 Lakhs
Mob: 8660105902

ಮನೆ ಮಾರಾಟಕ್ಕಿದೆ
40x30 ಅಡಿಯುಳ್ಳ N/F 3 ಅಂತಸ್ತಿನ ಮನೆ (ಇದರಲ್ಲಿ 1BHK-3 & 2BHK-2 ಮನೆಗಳು) ಮಾರಾಟಕ್ಕಿದೆ
9008255039
8618234832

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 9108566022

ಸುವರ್ಣಾವಕಾಶ
ಪ್ರಖ್ಯಾತ ಬ್ಯಾಂಕ್ ಸಮೂಹದಿಂದ ರಾಜ್ಯ & ಕೇಂದ್ರ ಸರ್ಕಾರಿ ನಿವೃತ್ತ / ಸ್ವಯಂ ನಿವೃತ್ತ ಅಧಿಕಾರಿಗಳಿಂದ ಆಫೀಸರ್ ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಪ್ರಯೋಜನಗಳು: ಫಿಕ್ಸ್‌ಡ್ ಇಂದಿನ ಸಂಬಳ, ಇಎಸ್‌ಐ, ಪಿಎಫ್, ಗ್ರಾಚ್ಯುಯಿಟಿ & ಇತರ ಭತ್ಯೆ ಇರುತ್ತದೆ.
ಸಂಪರ್ಕಿಸಿ: 7349062877 / 7760968433
Mail to: adarsh.kariappa@kotak.com adarshkariappa@gmail.com

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಸೇಲ್ ಮ್ಯಾನ್ ಕೆಲಸ ಮಾಡಲು ಅನುಭವವುಳ್ಳ ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ESI+PF ಮತ್ತು ಇನ್ಸೆಂಟೀವ್ ಸೌಲಭ್ಯದೊಂದಿಗೆ
ಗಾಂಧಿಸರ್ಕಲ್, ಮೈಸೂರು
Call After 10.30 AM
9980620678

ಉತ್ತಮ ಅವಕಾಶ
ಮನೆಯಲ್ಲಿ ಬಟ್ಟೆ ವ್ಯಾಪಾರ ಮಾಡಲು ನಮ್ಮಲ್ಲಿ ಹೋಲ್ ಸೇಲ್ ದರದಲ್ಲಿ ಎಲ್ಲಾ ರೀತಿಯ ಸೀರೆಗಳು ಮತ್ತು ಎಲ್ಲಾ ರೀತಿಯ ಬಟ್ಟೆಗಳು ಸಿಗುತ್ತದೆ ಒಮ್ಮೆ ಭೇಟಿ ನೀಡಿ
Call After 10.30 AM
9986731199

HOUSE FOR SALE
4 BHK Duplex new house, MUDA site, E/F Door & site at Ramakrishnanagar 'I' Block, Near Andolana Circle.
PRICE: Rs. 1.60 Cr.
(Brokers Excuse)
Mob: 8660105902

ಹುಣಸೂರು ನಗರದಲ್ಲಿ 2 ಸೈಟ್ ಮಾರಾಟಕ್ಕಿದೆ
ನಿವೇಶನ ಅಳತೆ 30x40 ಜನತಾ ಟಾಕೀಸ್ ಹಿಂಭಾಗ 1 ನಿವೇಶನಕ್ಕೆ 5 ಲಕ್ಷ ರೂ.
ಸಂಪರ್ಕಿಸಿ: ಎಸ್.ಭಾಗ್ಯಮ್ಮ
8073466887
9986332364

WANTED
MALE SALES EXECUTIVE (Vehicle mandatory)
TELECALLING (FEMALE)
Qualification: 10th, PUC.
Salary, incentive 12 to 35K
for MAAN CERAMICS TILES SHOWROOM, Opp. SBI Bank, Vidyaranyapuram, Mysore-570 008
Mob: 7892510068

SITE FOR SALE
1. Kesare II nd Stage 40x60 East Face
2. Kesare III rd Stage 40x60 West Face
3. 59x70 West Face Fully Commercial Opp. KSRTC Bus Stand
Call After 10.30 AM
9986731199

ಬೇಕಾಗಿದ್ದಾರೆ
ಟೆಲಿ–ಕಾಲಿಂಗ್ ಮಾಡಿ ಅನುಭವ ಇರುವ ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ.
9916913984

DTCP SITES FOR SALE
DTCP Sites
Rs. 699 per sq.ft., Near Jayapura, H.D. Kote Road, Mysore.
9590491194, 9606783264

Aquaguard & Kent Sales and Service
Service Charge : 300/-
9901200444

SITE FOR SALE
20x41 N/F Siddartha Layout
30x40 N/F Nandini Layout IInd Stage
60x40 N/E Chikkahalli
9448064144

ಸುವರ್ಣ ಅವಕಾಶ
ಮನೆಯಿಂದಲೇ ಕುಳಿತು ನಿಮ್ಮ ಬಿಡುವಿನ ಸಮಯದಲ್ಲಿ ಪಾರ್ಟ್ ಟೈಂ/ಫುಲ್ ಟೈಂ ಕೆಲಸ ಮಾಡುವ ಮೂಲಕ ಗಳಿಸಿ ವಾರಕ್ಕೆ ರೂ. 7000/–ರಿಂದ–9000/– ನಿವೃತ್ತಿ ಹೊಂದಿದವರಿಗೆ ಗೃಹಿಣಿಯರಿಗೆ, ವಿದ್ಯಾರ್ಥಿಗಳಿಗೆ ಯಾವುದೇ ವಯಸ್ಸಿನ ಮಿತಿ ಇಲ್ಲ, ಟೆಲಿ ಕಾಲಿಂಗ್, ಮೆಟೀರಿಯಲ್ ಪಿಕಪ್, ಪುಸ್ತಕ ಬರವಣಿಗೆ, ಫಾರಂ ಫಿಲ್ಲಿಂಗ್ ಪ್ಯಾಕಿಂಗ್ ಕೆಲಸ ಲಭ್ಯವಿದೆ.
9945788826

ಬೋಳು ತಲೆಯ ಸಮಸ್ಯೆಯೇ?

ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಥಾರ್ಥಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Aniketana Road, kuvempunagar, Mysuru
MYSURU: 9611028523 MANGALORE: 9343142258

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

ಫ್ರಿಡ್ಜ್, ವಾಷಿಂಗ್ ಮಷಿನ್, ಮೈಕ್ರೋ ಓವನ್,
LCD, LED TVs
Doorstep Service
Mob: 9886226672

ಮನೆ ಮಾರಾಟಕ್ಕಿದೆ
20x30, 3BHK ಡ್ಯೂಪ್ಲೆಕ್ಸ್ ಪೂರ್ವಕ್ಕೆ ಬಾಗಿಲು # 16 ವಿನಾಯಕ ಗಾರ್ಡನ್ ಸಿಟಿ ಗೋಲ್ಡ್, ಟಿ.ನರಸೀಪುರ ರಸ್ತೆ, ರಾಜಶೇಖರ್ ಹಾಸ್ಪಿಟಲ್ ಎದುರು ಆಲನಹಳ್ಳಿ ಸಿಗ್ನಲ್ ಹತ್ತಿರ ರಿಂಗ್ ರೋಡ್.
(ಓನರ್ ನಂಬರ್)
8095503296

ಸುವರ್ಣಯಾತ್ರ
1) ರಾಜಸ್ಥಾನ ಪ್ರವಾಸ 9 ದಿನಗಳು 18/11/23
2) ಮಧ್ಯಪ್ರದೇಶ ಪ್ರವಾಸ 2 ಜ್ಯೋತಿರ್ಲಿಂಗ ಸೇರಿ 4 ದಿನಗಳು–18/11/23
3) ಪುರಿ ಜಗನ್ನಾಥ್ ಪ್ರವಾಸ 4 ದಿನಗಳು 25/11/23
4) ನೇಪಾಳ 9 ದಿನಗಳು 30/11/23
5) ಭೂತಾನ್ ಪ್ರವಾಸ 7 ದಿನಗಳು 23/12/23
8660233673, 9480843945

SITES FOR SALE
35x42 at Alanahalli Gramtana Site Corporation tax & Form 2 South facing 3000/Sqft. Contact
9945033366

Document Lost
Varalakshmamma, No. 921, Ashraya Niveshana, Bogadi, Mysore-570 012, I have lost my site document of Site No. 921, Ashraya Niveshana.
Finders please contact:
Mob: 7204352519

ಬೇಕಾಗಿದ್ದಾರೆ
ಹೌಸ್‌ಕೀಪಿಂಗ್ ಹುಡುಗರು ಮತ್ತು ಸ್ವೀಪರ್
ಹೋಟೆಲ್ ಉದ್ಯಮದಲ್ಲಿ ಅನುಭವವುಳ್ಳವರಿಗೆ, ಪ್ರತಿಷ್ಠಿತ ಹೋಟೆಲ್ (ಲಾಡ್ಜ್), 30 ರೂಮುಗಳು ಹೊಂದಿದ್ದು, ಸೇಂಟ್ ಫಿಲೋಮಿನಾ ಚರ್ಚ್ ಹತ್ತಿರ, ಅಶೋಕ ರಸ್ತೆ, ಮೈಸೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ:
9845682777, 9538651845

ಸೈಟುಗಳು ಮಾರಾಟಕ್ಕಿದೆ ಮುಡಾ ಅಪ್ರೂವ್
30x40 - South Face
40x60 - North Face
40x60 - West Face
40x60 - East Face
ಯುನಿವರ್ಸಿಟಿ ಲೇಔಟ್ ಎದುರು, ರಿಂಗ್ ರಸ್ತೆ ಹತ್ತಿರ
30x40 ವರಕೂಡು ಹತ್ತಿರ
9900372792

ಪ್ರವಾಸ
22–11–2023 ನವಗ್ರಹಗಳು ಕನ್ಯಾಕುಮಾರಿ, ರಾಮೇಶ್ವರ, ಮಧುರೈ. 15–12–2023 ಗುಜರಾತ್, ಅಷ್ಟಜ್ಯೋತಿರ್ಲಿಂಗಗಳು. 15–02–2024 ನೇಪಾಳ, ಮುಕ್ತಿನಾಥ, ಕಾಶಿ, ಅಯೋಧ್ಯೆ. 10–3–2024 – 12 ದಿನಗಳ ರಾಜಸ್ಥಾನ್. ಸಂಪರ್ಕಿಸಿ:
ವಿಶ್ವನ್ ಟೂರ್ಸ್ ಅಂಡ್ ಟ್ರಾವೆಲ್ಸ್
ಬೆಂಗಳೂರು–560 070
9342287551, 8050629305

HOUSE FOR RENT
Adishakthi Road, 11th Block, Shakthinagar.
Ground floor - 2 BHK.
Veg. / Non-Veg.
9448514207, 7892548482

ಸೈಟ್ ಮಾರಾಟಕ್ಕಿದೆ
ಬೋಗಾದಿ, ಬಾಪೂಜಿ ಬಡಾವಣೆ 40x60 ನಿವೇಶನ, ರಿಂಗ್ ರಸ್ತೆಗೆ ಹತ್ತಿರವಾಗಿದೆ.
ಖರೀದಿದಾರರು ಸಂಪರ್ಕಿಸಿ:
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
9342119411

ಹೊಸ ಮನೆ ಮಾರಾಟಕ್ಕಿದೆ
1019, ಹಂಚ್ಯಾ ಸಾತಗಳ್ಳಿ B ವಲಯ 20x30 ರಲ್ಲಿ G/ F&F/F (South Face) ಹೊಸ ಮನೆ ಮಾರಾಟಕ್ಕಿದೆ.
ಬೆಲೆ : 64 ಲಕ್ಷ
9448075383

ಸೈಟು ಮಾರಾಟಕ್ಕಿದೆ
ಮೈಸೂರು–ಬನ್ನೂರು ರಸ್ತೆ, DTCP ಅಪ್ರೂವ್ (9&11ಎ ಖಾತೆ) ನೊಂದಣಿಗೆ ಸಿದ್ಧವಾಗಿದೆ. ಎಲ್ಲಾ ಬ್ಯಾಂಕ್‌ಗಳಲ್ಲಿ ಲೋನ್ ದೊರೆಯುತ್ತದೆ. ಮಾಲೀಕರಿಂದ ನೇರ ಮಾರಾಟ
40x40 - Rs. 24,80,000
30x40 - Rs. 18,60,000
28x40 - Rs. 16,50,000
9945558166

2.5 BHK HOME INTERIORS @ ₹2.5 LACS
ISO 9001:2015 Certified Company Depot
SS Build Mart
TALK TO OUR DESIGN TEAM
9731591267

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

WANTED
30x50 site in and around Dattagalli / R.T. Nagar.
Interested parties call @
9901291267

100% TEAK WOOD FACTORY FINISH DOORS @ DEPOT RATES

10 YEARS WARRANTY
www.ssbuildmart.com
9901291267
9845426862

ತಕ್ಷಣ ಬೇಕಾಗಿದ್ದಾರೆ
ವಿಜಯನಗರ 3ನೇ ಹಂತ ಮತ್ತು ಗಂಗೋತ್ರಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮೇಲ್ಪಟ್ಟು
ವಯೋಮಿತಿ : 45 ವರ್ಷದೊಳಗೆ
ಸಂಬಳ: 18500/-
ESI & PF ಸೌಲಭ್ಯವಿರುತ್ತದೆ.
9620777819
9620667819

ಅನುಬಂಧ ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧುವರರು, ವಿಧುರರು ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ
9448229184
7899625268

ಕೆಲಸಕ್ಕೆ ಬೇಕಾಗಿದ್ದಾರೆ
ದೇವಿಶ್ರೀ ಹೋಟೆಲ್‌ಗೆ ಕೆಲಸಗಾರರು ಬೇಕಾಗಿದ್ದಾರೆ.
8861673397, 8970856325
ಅಕ್ಕಿ ಚೌಕ, ಕೆ.ಟಿ. ಸ್ಟ್ರೀಟ್, ಕೆ.ಆರ್. ಆಸ್ಪತ್ರೆ ರಸ್ತೆ, ಮೈಸೂರು

ಸೈಟು ಮಾರಾಟಕ್ಕಿದೆ
1) JSS ಲೇಔಟ್
2) BVL ಪ್ರೀಮಿಯೊ ಲೇಔಟ್
3) ಸಪ್ತಮಾತೃಕ ಲೇಔಟ್
Mob: 9844436672

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ,, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರ ನಾಲ್ವರ ದೈವ ಚೌಡಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕೇಸ್, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ ಸುಬ್ಬರ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಅಂದ್ರಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಿಗಳ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಬೆಂಗಳೂರಿನಲ್ಲಿ ಕೆಲಸ ಮಾಡಲು 50 ಅಭ್ಯರ್ಥಿಗಳ ಅವಶ್ಯಕತೆ ಇದೆ.
ವಿದ್ಯಾರ್ಹತೆ : PUC
ವಯೋಮಿತಿ : 18–35
ಊಟ ಮತ್ತು ವಸತಿ ಸೌಕರ್ಯದೊಂದಿಗೆ ಮಾಸಿಕ ವೇತನ 15,000/–
ಸಂಪರ್ಕಿಸಿ:
+91 78998 59471

ಬೇಕಾಗಿದ್ದಾರೆ
Finance ಕಂಪನಿಯಲ್ಲಿ ಕೆಲಸ ಮಾಡಿ ಅನುಭವವುಳ್ಳ ಯುವಕ ಮತ್ತು ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ.
(T&C)
9845028614

S.K.CONSTRUCTION
ಕನಸು ನಿಮ್ಮದು ನನಸು ನಮ್ಮದು ಅಡ್ವಾನ್ಸ್ ಹಣ ಇದ್ದರೆ ಸಾಕು
2BHK, 30x40, 20x40
R.T ನಗರದಲ್ಲಿ 3D ಎಲಿವೇಶನ್ ಸಹಿತ ನಾವೆ ಲೋನ್ ಮಾಡಿಸಿ ಕಟ್ಟಿಕೊಡುತ್ತೇವೆ. ಸೈಟ್ ನಮ್ಮದು
9620528490

CHANGE OF NAME
I, THIMMAIAH, R/o. No. 68, S.C. Beedi, Doddabeechanahalli Village, Chikkabeechanahalli Post, Bilikere Hobli, Hunsur Taluk, Mysore Dist., have changed my name from THIMMAIAH to THIMMARAJU on my own free will sworn in front of Notary Ravindra H.M. on 6.10.2023 at Mysore.
Sd/-THIMMARAJU

ಕಳೆದಿದೆ
ಮಂಗಳಮ್ಮ, W/o. ಸಿದ್ದರಾಜು ಎಂ. ಕಟ್ಟೆಹುಂಡಿ, ಸೋಸಲೆ ಹೋಬಳಿ, ತಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ–571110 ರಲ್ಲಿ ವಾಸವಾಗಿರುವ ಇವರ ನಿವೇಶನ ಸಂಖ್ಯೆ 23ರ ಹಕ್ಕುಪತ್ರ ದಿನಾಂಕ 20.11.1981, ಸಂಖ್ಯೆ, S/o. ಬದಲಿಸಲು ಹೆಸರಿನ ಈ ಪತ್ರವು ಕಳೆದಿರುತ್ತದೆ. ಸಿಕ್ಕಿದಲ್ಲಿ
ಸಂಪರ್ಕಿಸಿ: 9164505696

1) 30x40 30x50 sites 16 lakhs KOTE ROAD, 2) 30@40 T Narasipura road saptamatruke layout attch
3) 20@70 Aswini choutry near and 30@40 east site Preethi layout Srirampura, 4) BOGADI road 20x30, 30x40 trenz apartments near
5) 20@30 g+1 house SRIRAMPURA and DATTAGALLI
Prakruthi Properties
95386 90359 / 90359 90359



SALES & SERVICE
SUNZONE SOLAR SYSTEM
VM Double Road, Kuvempunagar, Mysuru
9845175443

REQUIRED
Urgently Bus Driver with Valid Licence for a school in Mysore
Please Contact
9945983598

ಮಳಿಗೆ ಬಾಡಿಗೆಗೆ ಇದೆ
13.6x61 ಮರಿಮಲ್ಲಪ್ಪ ಕಾಲೇಜ್ ಎದುರು ರಾಮವಿಲಾಸ್ ರಸ್ತೆ, ನೆಲಮಳಿಗೆ, ಗ್ರೌಂಡ್ ಫ್ಲೋರ್, ಮತ್ತು 2ನೇ ಫ್ಲೋರ್, 3ನೇ ಫ್ಲೋರ್, ಅಟ್ಯಾಚ್ ಬಾತ್‌ರೂಮ್ ಇರುವ ಕಾಂಪ್ಲೆಕ್ಸ್ ಟ್ಯೂಷನ್ ಹೋಟೆಲ್, ಗೋಡೌನ್, ಆಫೀಸ್, ಉಪಯೋಗಕ್ಕೆ ಬಳಸಿಕೊಳ್ಳಬಹುದು. ಓನರ್
8095503296

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಸೂಪರ್‌ವೈಸರ್ ಹಾಗೂ ಸೆಕ್ಯೂರಿಟಿ ಗಾರ್ಡ್‌ಗಳು ಮದ್ದೂರು ಸುತ್ತಾಮುತ್ತ
ಆಫೀಸ್: # 606, ಹುಣಸೂರು ಮುಖ್ಯರಸ್ತೆ, ಗಣಪತಿ ದೇವಸ್ಥಾನ ಹತ್ತಿರ, ಕೆ.ಹೆಚ್.ಬಿ ಹೂಟಗಳ್ಳಿ
9606976760
9743115548

ಹೊಸ ಮನೆ ಮಾರಾಟಕ್ಕಿದೆ
30x40 N/F, #138 3BHK ದ್ವಾರಕನಗರ, ಶ್ರೀರಾಂಪುರ ರಿಂಗ್ ರಸ್ತೆ ಹತ್ತಿರ
8217786985

SITES FOR SALE
30x40 E/F Dattagalli
30x40 E/F Vijayanagara 4th Stage
9343380911

ಮನೆ ಭೋಗ್ಯ/ಕ್ರಯಕ್ಕೆ ಬೇಕಾಗಿದೆ
30x40, 40x60
ವಿ.ವಿ.ಮೊಹಲ್ಲಾ ಒಂಟಿಕೊಪ್ಪಲು, ಗೋಕುಲಂ, ಯಾದವಗಿರಿ, ಶಂಕರಮಠ ಹತ್ತಿರ, ಮನೆ ಭೋಗ್ಯ/ಕ್ರಯಕ್ಕೆ ಬೇಕಾಗಿದೆ. ಮಧ್ಯವರ್ತಿಗಳು ಕ್ಷಮಿಸಿ ಮನೆ ಮಾಲೀಕರು ಸಂಪರ್ಕಿಸಿ:
9980051692
9686576399

ಜಮೀನು ಮಾರಾಟಕ್ಕಿದೆ
ಸ್ಥಳ: ಕೆಂಚನಗ್ರಾಮ ಮೈಸೂರಿನಿಂದ 20 ಕಿ.ಮೀ ದೂರದಲ್ಲಿ ಹುಲ್ಲಹಳ್ಳಿಯಿಂದ
1) 2 1/2 ಎಕರೆ, ಮುಳ್ಳತಂತಿಬೇಲಿ ಇದೆ. 2 ಬೋರ್‌ವೆಲ್, ವಾಸದ ಮನೆ ಹಾಗೂ ಪೌಲ್ಟ್ರಿ ಫಾರಂ ಇದೆ
2) 18 ಗುಂಟೆಯಲ್ಲಿ ಬೇಲಿ ಮತ್ತು ಬೋರ್‌ವೆಲ್ ಇದೆ
7353382565
8139945294

ಮನೆ ಮಾರಾಟಕ್ಕಿದೆ
30x40, 4BHK ಡ್ಯೂಪ್ಲೆಕ್ಸ್ ಕಾರ್ ಪಾರ್ಕಿಂಗ್ & ಲಿಫ್ಟ್ ಸೌಲಭ್ಯವಿದೆ.
ದಟ್ಟಗಳ್ಳಿ 3ನೇ ಹಂತ
9901676619

ಮನೆ ಭೋಗ್ಯಕ್ಕೆ
ಕುವೆಂಪುನಗರ ನಿಮಿಷಾಂಬ ಬಡಾವಣೆ 13ನೇ ಕ್ರಾಸ್ ನಲ್ಲಿ 1 BHK ಮೊದಲನೇ ಅಂತಸ್ತಿನಲ್ಲಿ ಎಲ್ಲಾ ಸೌಲಭ್ಯವುಳ್ಳ ಮನೆ ಭೋಗ್ಯಕ್ಕೆ ಲಭ್ಯವಿದೆ.
9448092818

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಆಫೀಸ್‌ಗಳಿಗೆ ಮತ್ತು ಶೋರೂಂಗಳಿಗೆ ಕಂಪನಿಗಳಿಗೆ 7th, SSLC, PUC, ITI, Diploma, Any Degree Pass/Fail ಆದ ರಿಗೆ Cashier, Billing, Receptionist, Data Entry, Admin Assist, HR, Team Leader Backend, Production, helper, ಇತ್ಯಾದಿ ಕೆಲಸಗಳಿಗೆ ಯುವಕ/ಯುವತಿಯರು ಬೇಕಾಗಿದ್ದಾರೆ. ತರಬೇತಿ ಇರುತ್ತದೆ. ಸಂಬಳ 15,800 ರಿಂದ 39,000 (ESI+PF+OT) ಯೊಂದಿಗೆ.
9739857142, 9035143190

ಶ್ರೀನಿಧಿ ಹಾಲಿಡೇಸ್
1) ರಾಜಸ್ಥಾನ ಪ್ರವಾಸ 9 ದಿನಗಳು 05–02–24
2) ದೇಹಲಿ, ಕಾಶಿ, ಚಿತ್ರಕೂಟ, ಪ್ರವಾಸ 9 ದಿನಗಳು 20–02–24
3) ದೆಹಲಿ, ಹರಿದ್ವಾರ, ಅಯೋಧ್ಯ, ಕಾಶಿ ಪ್ರವಾಸ 10 ದಿನಗಳು 01–03–24
4) ನೇಪಾಳ ಹಾಗೂ ಮುಕ್ತಿನಾಥ, ಕಾಶಿಪ್ರವಾಸ 9 ದಿನಗಳು 12–03–24
5) ದುಬೈಪ್ರವಾಸ 6 ದಿನಗಳು 25–03–24
ಕುವೆಂಪುನಗರ, ಮೈಸೂರು
9740776666, 7557553777

ಹೊಸ ಮನೆ ಮಾರಾಟಕ್ಕಿದೆ
30x40 ಅಳತೆಯ 3BHK ಅಟ್ಯಾಚ್ ಬಾತ್ ರೂಂ ಮತ್ತು ಬೋರ್‌ವೆಲ್ ಸೋಲಾರ್ ಮತ್ತಿತರ ಸೌಲಭ್ಯವುಳ್ಳ Muda ಮನೆ ಹಾಗೂ ಬ್ಯಾಂಕ್ ಸಾಲ ದೊರೆಯುತ್ತದೆ. ವಿಜಯನಗರ 4ನೇ ಹಂತ, 2ನೇ ಫಟ್ಟ, ಮೈಸೂರು.
9342677390

ಬೇಕಾಗಿದ್ದಾರೆ
ವಿಶ್ವೇಶ್ವರ ನಗರದ ಅಪಾರ್ಟ್‌ಮೆಂಟ್ ಒಂದಕ್ಕೆ ಪಿಯುಸಿ / ಡಿಗ್ರಿ ಓದಿದ ಮತ್ತು ಸರಿಯಾದ ಬೇಸಿಕ್ ಕಂಪ್ಯೂಟರ್ ಜ್ಞಾನವುಳ್ಳವರು ಸೂಪರ್‌ವೈಸರ್ ಹುದ್ದೆಗೆ ನಿಜವಾದ ಆಸಕ್ತರು ಬೇಕಾಗಿದ್ದಾರೆ. ಅನುಕೂಲಸ್ಥ ಸ್ಥಳೀಯರಿಗೆ ಮಾತ್ರ ಆದ್ಯತೆ
9740719526
ಸಮಯ: 5pm to 9pm only

ಸುವರ್ಣಾವಕಾಶ
ನಿವೃತ್ತಿ, ಸ್ವಯಂನಿವೃತ್ತಿ, ಗೃಹಿಣಿಯರಿಗೆ ಸ್ವಯಂ ಉದ್ಯಮದಾರರಿಗೆ, ಪ್ರಖ್ಯಾತ ಬ್ಯಾಂಕ್ ಸಮೂಹದಿಂದ ಪಾರ್ಟ್ ಟೈಂ, ಫುಲ್ ಟೈಂ ಕೆಲಸಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಬೇಸಿಕ್ ಸಂಬಳ: PF-ESI
Age above-30 Years
9886970147
8660521596

ಬೇಕಾಗಿದ್ದಾರೆ
ಹೋಟೆಲ್ ಕೂರ್ಗ್ ಸ್ಟೈಲ್ ರಿಂಗ್ ರಸ್ತೆ ಹತ್ತಿರ ಹಿನಕಲ್, ಮೈಸೂರು
ಚೈನೀಸ್ ಸ್ಟೈಲ್ ಕುಕ್–2
ಅಸಿಸ್ಟೆಂಟ್ –1
ವೈಟರ್ –2
9632153399

HOUSE FOR SALE
Semi Furnished
Carpet Area 800Sqft
Builtup Area 2000Sqft
Rajendra Nagar, Kesare
Price 76,00000/-(Nego)
9611060271

WANTED
Front office Assistant for a wellness centre in Gokulam
Female with Basic Degree & excellent english communication
can Whatsapp Resume to
8105912167

HOUSE FOR LEASE
2BHK in 1st Floor, East Facing North Facing Main Door with 2 nos. Portico, Car Parking facility available at Vijayanagar 4th Stage, 2nd Phase, Location: Walkable distance to NPS School Canara Bank & Manya Clinic on the double road, City Bus stop.
9480792529

ಮನೆ ಬಾಡಿಗೆಗೆ ಇದೆ
ಸುಭಾಷ್‌ನಗರ (ಎನ್.ಆರ್.ಮೊಹಲ್ಲಾ)ದಲ್ಲಿ 3BHK with car Parking ಎಲ್ಲಾ ಸೌಕರ್ಯ ವಿರುವ ಮನೆ
7348831599

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆ ನೇರ ವ್ಯವಹರಿಸಬೇಕಾಗುತ್ತದೆ, ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗಿರುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ
ರೂ. 630 ಮಾತ್ರ

ಮತ್ತಷ್ಟು ವರ್ಗೀಕೃತ ಜಾಹೀರಾತು
ಪುಟ 10 ರಲ್ಲಿ

ಕಾಂತರಾಜ್ ವರದಿ ಮೂಲಪ್ರತಿ ನಾಪತ್ತೆ ವಿವಾದದ ನಡುವೆಯೂ

ಹಾಲಿ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗಡೆ ಅವರಿಂದ

ನ.24ಕ್ಕೆ ಸರ್ಕಾರಕ್ಕೆ ವರದಿ ಸಲ್ಲಿಕೆ

ಬೆಂಗಳೂರು, ನ.10(ಕೆಎಂಶಿ)– ಕಾಂತರಾಜ್ ಅಧ್ಯಕ್ಷತೆಯಲ್ಲಿ ಸಿದ್ಧಪಡಿ ಸಲಾಗಿದ್ದ ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ವರದಿಯ ಮೂಲ ಪ್ರತಿಯೇ ನಾಪತ್ತೆಯಾಗಿದೆ ಎಂಬ ವಿವಾದದ ನಡುವೆಯೇ ಹಾಲಿ ಅಧ್ಯಕ್ಷ ಜಯಪ್ರಕಾಶ್ ಹೆಗಡೆ ನವೆಂಬರ್ 24ರಂದು ಸರ್ಕಾರಕ್ಕೆ ವರದಿ ಸಲ್ಲಿಸಲಿದ್ದಾರೆ.

ಆಯೋಗದ ವರದಿ ಸರ್ಕಾರಕ್ಕೆ ಸಲ್ಲಿಕೆಯಾ ಗಲಿದೆ ಎಂಬ ಹಿನ್ನೆಲೆಯಲ್ಲಿ ಒಕ್ಕಲಿಗ ಹಾಗೂ ವೀರಶೈವ–ಲಿಂಗಾಯತ ಸಮುದಾಯ ವಿರೋಧ ವ್ಯಕ್ತಪಡಿಸಿ, ಮರು ಸಮೀಕ್ಷೆಗೆ ಒತ್ತಾಯಿಸಿವೆ. ಕಳೆದ 2015ರಲ್ಲಿ ಆಯೋಗದ ವತಿಯಿಂದ ಕೈಗೊಳ್ಳಲಾದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಮುಖ್ಯ ವರದಿಯಲ್ಲಿ ಸದಸ್ಯ ಕಾರ್ಯದರ್ಶಿಗಳ ಸಹಿ ಇಲ್ಲ ಎಂದು ಹಾಲಿ ಅಧ್ಯಕ್ಷರು, 2021ರ ಅ.5ರಂದೇ ಸರ್ಕಾರದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದರು. 2021ರ ಆಗಸ್ಟ್ 26ರಂದು ಆಯೋಗದ ಕಚೇರಿ ಯಲ್ಲಿ ಇರಿಸಲಾಗಿದ್ದ ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆ ಯಲ್ಲಿ ಸಂಗ್ರಹಿಸಿದ್ದ ಅಂಕಿ–ಅಂಶಗಳು ಹಾಗೂ ಇತರೆ ವಿವರಗಳನ್ನು ಒಳಗೊಂಡ ಸೀಲ್ಡ್ ಬಾಕ್ಸ್‌ಗಳನ್ನು ಆಯೋ ಗದ ಅಧ್ಯಕ್ಷರು, ಸದಸ್ಯರು ಹಾಗೂ ಸದಸ್ಯ ಕಾರ್ಯ ದರ್ಶಿ ಅವರ ಸಮ್ಮುಖದಲ್ಲಿ ಮಹಜರು ನಡೆಸಿ ತೆರೆಯಲಾಗಿತ್ತು. ಮುದ್ರಿತ ಮುಖ್ಯ ವರದಿಯಲ್ಲಿ ಸದಸ್ಯ ಕಾರ್ಯದರ್ಶಿಯವರ ಸಹಿ ಇಲ್ಲದೆ ಇರುವುದನ್ನು ಆಯೋಗ ಗಮನಿಸಿತ್ತು. ಇದಕ್ಕೆ ಸಂಬಂಧಿಸಿದಂತೆ ಮೂಲ ಪ್ರತಿ ಸೀಲ್ಡ್ ಬಾಕ್ಸ್‌ನಲ್ಲಿ ಲಭ್ಯವಿಲ್ಲದೆ ಇರುವುದರಿಂದ, ಹಸ್ತ ಪ್ರತಿಯನ್ನು ಕೂಡಲೇ ಆಯೋಗದ ಕಚೇರಿಗೆ ಸಲ್ಲಿಸಲು ಸಂಬಂಧಪಟ್ಟ ಅಧಿಕಾರಿಗೆ ಸೂಚಿಸಲಾಗಿತ್ತು.



ಸೂಚನೆಗೆ ಸಂಬಂಧಪಟ್ಟವರು ಉತ್ತರ ನೀಡಿದ್ದು, ಆ ಪತ್ರದ ಪ್ರತಿಯನ್ನೂ ಲಗತ್ತಿಸಿ, ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತರಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಯಾವ ರೀತಿಯ ಕ್ರಮ ಕೈಗೊಳ್ಳಬೇಕು ಎಂಬುದರ ಬಗ್ಗೆ ಸ್ಪಷ್ಟ ಪಡಿಸುವಂತೆ ಕೋರಿದ್ದ ಪತ್ರ ಬಹಿರಂಗಗೊಂಡಿದೆ. ಬಿಹಾರದ ಮುಖ್ಯ ಮಂತ್ರಿ ನಿತೀಶ್ ಕುಮಾರ್, ಹಿಂದುಳಿದ ವರ್ಗಗಳ ಜಾತಿ ಗಣತಿಯನ್ನು ಪ್ರಕಟಿಸು ತ್ತಿದ್ದಂತೆ ಕಾಂಗ್ರೆಸ್‌ನ ಅಧಿನಾಯಕ ರಾಹುಲ್ ಗಾಂಧಿ ಇದಕ್ಕೆ ಬೆಂಬಲ ವ್ಯಕ್ತಪಡಿಸಿದ್ದರು. ರಾಹುಲ್ ಹೇಳಿಕೆ ನೀಡಿದ ಬೆನ್ನಲ್ಲೇ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಸಹ, ಕಾಂತರಾಜ್ ವರದಿಯನ್ನು ಸರ್ಕಾರಕ್ಕೆ ಸಲ್ಲಿಸು ವಂತೆ ಕೋರಿದ್ದರು. ಮುಖ್ಯಮಂತ್ರಿ ಅವರ ಹೇಳಿಕೆ ಬೆನ್ನಲ್ಲೇ ಕಾಂತರಾಜ್ ವರದಿ ಬಗ್ಗೆ ಪರ ಮತ್ತು ವಿರೋಧ ಹೇಳಿಕೆಗಳು ವ್ಯಕ್ತವಾದವು. ಬರುವ ಏಪ್ರಿಲ್–ಮೇ ತಿಂಗಳಲ್ಲಿ ಲೋಕಸಭಾ ಚುನಾವಣೆ ಎದುರಾಗಲಿದ್ದು ಈ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರು ವರದಿ ಬಗ್ಗೆ ಏನು ನಿರ್ಧಾರ ಕೈಗೊಳ್ಳುತ್ತಾರೋ ಕಾದು ನೋಡಬೇಕಿದೆ.



ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪದವಿ ಪಡೆದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ ಬಿ. ಗಣಪತಿ ಅವರನ್ನು ವಿಶ್ವಮಾನವ ಮೈಸೂರು ವಿವಿ ನೌಕರರ ವೇದಿಕೆ ವತಿಯಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು. ಮೈಸೂರು ವಿವಿ ಗ್ರಂಥಪಾಲಕ ಡಾ. ಸೋಮಶೇಖರ್, ಕುರುಬರ ಸಂಘದ ನಿರ್ದೇಶಕ ನಾಗರಾಜು, ವೇದಿಕೆಯ ಅಧ್ಯಕ್ಷ ವಾಸುದೇವ, ಉಪಾಧ್ಯಕ್ಷ ಭಾಸ್ಕರ್, ಕಾರ್ಯದರ್ಶಿ ವಿನೋದ್ ಮತ್ತಿತರರನ್ನು ಚಿತ್ರದಲ್ಲಿ ಕಾಣಬಹುದು.

ಮುಕ್ತ ವಿವಿ ಹಣಕಾಸು ಅಧಿಕಾರಿ ಖಾದರ್ ಪಾಷಾ ಕರ್ತವ್ಯದಿಂದ ಬಿಡುಗಡೆ

ಮೈಸೂರು, ನ.10(ಆರ್‌ಕೆ)– ಕರ್ತವ್ಯಲೋಪ ಮತ್ತು ಹಣಕಾಸು ದುರುಪಯೋಗ ಆರೋಪದ ಹಿನ್ನೆಲೆಯಲ್ಲಿ ಸರ್ಕಾರದ ನಿರ್ದೇಶನದಂತೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿ ಖಾದರ್ ಪಾಷಾ ಅವರನ್ನು ಇಂದು ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿದೆ.



ಉನ್ನತ ಶಿಕ್ಷಣ ಇಲಾಖೆ ಅಧೀನ ಕಾರ್ಯದರ್ಶಿ ಶೀತಲ್ ಎಂ.ಹಿರೇಮಠ್ ಅವರು ನವೆಂಬರ್ 7ರಂದು ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಮತ್ತು ಕುಲಸಚಿವರಿಗೆ ಪತ್ರ ಬರೆದು ಸೂಚನೆ ನೀಡಿದ ಹಿನ್ನೆಲೆಯಲ್ಲಿ ಖಾದರ್ ಪಾಷಾ ಅವರನ್ನು ಬಿಡುಗಡೆಗೊಳಿಸಲಾಗಿದೆ.

ಅಕ್ಟೋಬರ್ 27ರಂದು ನಡೆದ ಕರ್ನಾಟಕ ವಿಧಾನ ಮಂಡಲದ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯು ಖಾದರ್ ಪಾಷಾರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಕರ್ತವ್ಯದಿಂದ ಬಿಡುಗಡೆಗೊಳಿಸಿ, ಸದರಿ ಅಧಿಕಾರಿ ವಿರುದ್ಧ ವಿಸ್ತೃತ ಇಲಾಖಾ ವಿಚಾರಣೆ ಕೈಗೊಂಡು ಸಮಿತಿಗೆ ವರದಿ ಸಲ್ಲಿಸುವಂತೆ ಸೂಚಿಸಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಮುಕ್ತ ವಿವಿ ನಿಯಮ–6ರಡಿ ಹಣಕಾಸು ಅಧಿಕಾರಿಗೆ ದತ್ತವಾದ ಅಧಿಕಾರಗಳನ್ನು ಉಲ್ಲಂಘಿಸಿದ್ದು, ಹಣಕಾಸು ದುರುಪಯೋಗ, 2021–22ನೇ ಸಾಲಿಗೆ ಲೆಕ್ಕಪತ್ರ ಇಲಾಖೆಗೆ ದಾಖಲೆ ಒದಗಿಸದಿರುವುದು, ನಿಯೋಜನೆ ಮೇಲೆ 7 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ವಿವಿ ಕಟ್ಟಡ ಕಾಮಗಾರಿ, ಟೆಂಡರ್ ಪ್ರಕ್ರಿಯೆ, ವಿದ್ಯಾರ್ಥಿಗಳ ಪ್ರವೇಶ ಶುಲ್ಕ, ಪರೀಕ್ಷಾ ಶುಲ್ಕ ಖಾತೆಗೆ ಜಮೆಯಾಗಿದ್ದರೂ ಲೆಕ್ಕ ಪರಿಶೋಧನೆಗೆ ಒದಗಿಸದಿರುವುದೂ ಸೇರಿದಂತೆ ನಿಯಮ ಉಲ್ಲಂಘಿಸಿ ಲೋಪವೆಸಗಿದ್ದಾರೆಂದು ಸಮಿತಿಯು ಆರೋಪಿಸಿದೆ ಎಂದು ಪತ್ರದಲ್ಲಿ ತಿಳಿಸಲಾಗಿದೆ. ಈ ಕುರಿತು ಪ್ರತಿಕ್ರಿಯಿಸಿರುವ ಮುಕ್ತ ವಿವಿ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ ಅವರು, ಖಾದರ್ ಪಾಷಾ ಅವರು ವರ್ಗಾವಣೆಗೊಂಡಿದ್ದರಿಂದ ಸರ್ಕಾರದ ನಿರ್ದೇಶನದಂತೆ ಇಂದು ಕರ್ತವ್ಯದಿಂದ ಬಿಡುಗಡೆ ಮಾಡಲಾಗಿದೆ ಹಾಗೂ ಕೇಳಿರುವ ಅಗತ್ಯ ವರದಿಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸಲಾಗುವುದು ಎಂದರು.

ಭಾರತದ ಪ್ರತಿಷ್ಠಿತ ರಾಯಲ್ ಓಕ್ ಫರ್ನಿಚರ್‌ನ 163ನೇ ಮಳಿಗೆ ಉದ್ಘಾಟನೆ



ಮೈಸೂರು, ನ.10–ಮೈಸೂರಿನ ಆಲನಹಳ್ಳಿಯಲ್ಲಿ ಭಾರತದ ಪ್ರಮುಖ ಪೀಠೋಪಕರಣ ಬ್ರಾಂಡ್ ಆಗಿರುವ ರಾಯಲ್‌ಓಕ್ ಫರ್ನಿಚರ್‌ನ 163ನೇ ಮಳಿಗೆಯನ್ನು ರಾಯಲ್‌ಓಕ್ ಇನ್ ಕಾರ್ಪೊರೇಷನ್ ಪ್ರೈವೇಟ್ ಲಿಮಿಟೆಡ್‌ನ ಅಧ್ಯಕ್ಷ ವಿಜಯ್ ಸುಬ್ರಮಣ್ಯ ಮತ್ತು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಮಥನ್ ಸುಬ್ರಮಣ್ಯಂ ಶುಕ್ರವಾರ ಉದ್ಘಾಟಿಸಿದರು.

ನಂತರ ರಾಯಲ್‌ಓಕ್ ಇನ್ ಕಾರ್ಪೊರೇಷನ್ ಪ್ರೈವೇಟ್ ಲಿಮಿಟೆಡ್‌ನ ಅಧ್ಯಕ್ಷ ವಿಜಯ್ ಸುಬ್ರಮಣ್ಯ ಮಾತನಾಡಿ, ಇದು ಇಡೀ ರಾಯಲ್‌ಓಕ್ ತಂಡಕ್ಕೆ ಒಂದು ಗಮನಾರ್ಹ ಮೈಲಿಗಲ್ಲು. ನಮ್ಮ 163ನೇ ಮಳಿಗೆಯ ಉದ್ಘಾಟನೆಯೊಂದಿಗೆ ನಾವು ಇನ್ನೊಂದು ಹೆಜ್ಜೆ ಮುಂದಿಡುತ್ತೇವೆ. ಕರ್ನಾಟಕದಲ್ಲಿ, ವಿಶೇಷವಾಗಿ ಮೈಸೂರಿನ ನಮ್ಮ ಎರಡನೇ ಮಳಿಗೆಯೊಂದಿಗೆ ನಮ್ಮ ವಿಸ್ತರಣೆ ಮುಂದುವರಿದಿದೆ. ನಮ್ಮ ಮೌಲ್ಯಯುತ ಗ್ರಾಹಕರಿಗೆ ಕೈಗೆಟಕುವ ಬೆಲೆಯಲ್ಲಿ ವಿಶ್ವದರ್ಜೆಯ ಪೀಠೋಪಕರಣ ಪರಿಹಾರಗಳನ್ನು ತಲುಪಿಸುವಲ್ಲಿ ಬದ್ಧತೆ ಮತ್ತು ಸಮರ್ಪಣೆಯ ಪ್ರತೀಕವಾಗಿದೆ ಎಂದರು.

ಈ ನೂತನ ಮಳಿಗೆಯಲ್ಲಿ ಎಲ್ಲಾ ಗೃಹೋಪಯೋಗಿ ಅಂತರರಾಷ್ಟ್ರೀಯ ಗುಣಮಟ್ಟದ ಪೀಠೋಪಕರಣ, ಸೊಗಸಾದ ಸೋಫಾಗಳು, ಆರಾಮದಾಯಕ ಹಾಸಿಗೆಗಳು, ಡೈನಿಂಗ್ ಟೇಬಲ್‌ಗಳು ಮತ್ತು ಕುರ್ಚಿಗಳಿಂದ ಹಿಡಿದು ಬೆಲೆ ಬಾಳುವ ರೆಕ್ಲೈನರ್, ಗುಣಮಟ್ಟದ ಹಾಸಿಗೆಗಳು, ಆಕರ್ಷಕ ಒಳಾಂಗಣ ಅಲಂಕಾರಿಕ ಪೀಠೋಪಕರಣಗಳು, ಕಚೇರಿ ಮತ್ತು ಹೊರಾಂಗಣ ಪೀಠೋಪಕರಣಗಳನ್ನು ಲಭ್ಯವಿದೆ. ಈ ವೇಳೆ ಫ್ರಾಂಚೈಸ್ ಮುಖ್ಯಸ್ಥ ಕಿರಣ್ ಛಾಬ್ರಿಯಾ, ಗಿರೀಶ್ ಕುರುಪ್–ರಾಜ್ಯ ಮುಖ್ಯಸ್ಥ, ಕರ್ನಾಟಕ, ತಮ್ಮಯ್ಯ–ಡೆಪ್ಯೂಟಿ ಜಿಎಂ, ಮಾದಪ್ಪ ಎಂ– ಭೂಮಾಲೀಕ, ಶ್ರೀನಿವಾಸ ಎ.ಪಿ, ರವಿ ರಾವ್–ಫ್ರಾಂಚೈಸ್ ಮ್ಯಾನೇಜರ್ ಸೇರಿದಂತೆ ರಾಯಲ್‌ಓಕ್ ತಂಡದ ಸದಸ್ಯರು ಉಪಸ್ಥಿತರಿದ್ದರು.

ಕೆಇಎ ಪರೀಕ್ಷಾ ಅಕ್ರಮದ ಕಿಂಗ್‌ಪಿನ್ ಆರ್.ಡಿ. ಪಾಟೀಲ್ ಬಂಧನ



ಕಲಬುರಗಿ: ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಡೆಸಿದ್ದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿನ ಅಕ್ರಮ ಪ್ರಕರಣದ ಕಿಂಗ್ ಪಿನ್ ಆರ್.ಡಿ ಪಾಟೀಲ್ ನನ್ನು ಬಂಧಿಸುವಲ್ಲಿ ಕೊನೆಗೂ ಪೊಲೀಸರು ಯಶಸ್ವಿಯಾಗಿದ್ದಾರೆ. ಮಹಾರಾಷ್ಟ್ರದಲ್ಲಿ ಆತ ಅಡಗಿರುವುದನ್ನು ಪತ್ತೆ ಹಚ್ಚಿದ ಕಲಬುರಗಿ ಜಿಲ್ಲಾ ವಿಶೇಷ ಪೊಲೀಸ್ ತಂಡ ಕಾರ್ಯಾಚರಣೆ ನಡೆಸಿ ಬಂಧಿಸಿ, ಕಲಬುರಗಿಗೆ ಕರೆತರುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪೊಲೀಸರು ತನ್ನ ಬಂಧಿಸಲು ಬರುತ್ತಿದ್ದಾರೆ ಎಂಬುದನ್ನು ತಿಳಿದ ಆರ್.ಡಿ. ಪಾಟೀಲ್ ನ.6ರಂದು ಕಲಬುರಗಿಯ ವರ್ಧಾ ಲೇಔಟ್‌ನಲ್ಲಿರುವ ಮಹಾಲಕ್ಷ್ಮೀ ಅಪಾರ್ಟ್‌ಮೆಂಟ್ ಕಾಂಪೌಂಡ್ ಹಾರಿ ಪರಾರಿಯಾಗಿದ್ದನು.

ಆರ್.ಡಿ. ಪಾಟೀಲ್‌ಗೆ ಫ್ಲ್ಯಾಟ್ ಬಾಡಿಗೆ ನೀಡಿದ ಶಹಾಪೂರದ ಶಂಕರ್ ಗೌಡಯಾಳವಾರ್ ಮತ್ತು ಅಪಾರ್ಟ್ ಮೆಂಟ್ ವ್ಯವಸ್ಥಾಪಕ ದಿಲೀಪ್ ಪವಾರ್ ಬಂಧಿತರಾಗಿದ್ದಾರೆ. ಆರ್.ಡಿ. ಪಾಟೀಲ್ ನಿಂದ ವ್ಯವಸ್ಥಾಪಕ ದಿಲೀಪ್ 10 ಸಾವಿರ ರೂಪಾಯಿ ಅಡ್ವಾನ್ಸ್ ಪಡೆದು, ಆ ಹಣ ಫ್ಲ್ಯಾಟ್ ಮಾಲೀಕ ಶಂಕರ್ ಗೌಡಗೆ ಕೊಟ್ಟಿದ್ದರು ಎನ್ನಲಾಗಿದೆ.

ಕಾವೇರಿ ನೀರಾವರಿ ನಿಗಮದ ಎಂಡಿಗೆ ಬ್ಲಾಕ್‌ಮೇಲ್

ಆರ್‌ಟಿಐ ಕಾರ್ಯಕರ್ತನ ವಿರುದ್ಧ ಕೇಸ್

ಮೈಸೂರು, ನ.10–ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ಅವರನ್ನು ಬ್ಲಾಕ್‌ಮೇಲ್ ಮಾಡಿದ ಆರೋಪದ ಮೇರೆಗೆ ಆರ್‌ಟಿಐ ಕಾರ್ಯಕರ್ತನ ವಿರುದ್ಧ ಮೈಸೂರಿನ ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೈಸೂರಿನ ಆರ್‌ಟಿಐ ಕಾರ್ಯಕರ್ತ ಆನಂದ್ ಮೊದಲಿಯಾರ್ ಅಲಿಯಾಸ್ ಆನಂದ್ ಎಂ.ಕಲ್ಕಿ ಎಂಬಾತನೇ ಆರೋಪಕ್ಕೆ ಗುರಿಯಾದವನಾಗಿದ್ದು, ಈತನ ವಿರುದ್ಧ ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ಅವರ ಪತ್ನಿ ಡಿ.ನವ್ರತಾ ಅವರು ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ.

ವಿವರ: ಮಹೇಶ್ ಅವರ ಮೈಸೂರಿನ ವಿಜಯನಗರ ನಿವಾಸಕ್ಕೆ, ಆನಂದ್ ಮೊದಲಿಯಾರ್ ಕಳೆದ 4–5 ತಿಂಗಳಿನಿಂದ ಸತ್ಯಕ್ಕೆ ದೂರವಾದ ಆರೋಪಗಳನ್ನು ಮಾಡಿ ಪತ್ರಗಳನ್ನು ಕಳುಹಿಸುತ್ತಿದ್ದ. ಇದರಿಂದಾಗಿ ತಮಗೆ ಹಾಗೂ ಅಪ್ರಾಪ್ತ ವಯಸ್ಸಿನ ಮಕ್ಕಳ ಮನಸ್ಸಿಗೆ ಆಘಾತವಾಗಿದೆ ಎಂದು ನವ್ರತಾ ತಮ್ಮ ದೂರಿನಲ್ಲಿ ತಿಳಿಸಿದ್ದಾರೆ. ಈ ವಿಚಾರವಾಗಿ ಪತಿ ಮಹೇಶ್ ಅವರನ್ನು ವಿಚಾರಿಸಿದಾಗ, ಆನಂದ್ ಮೊದಲಿಯಾರ್ ತಮ್ಮ ಪತಿಯ ಬಳಿ ಹಣಕ್ಕೆ ಬೇಡಿಕೆಯಿಟ್ಟಿದ್ದು, ಕೇಳಿದಷ್ಟು ಹಣ ನೀಡದಿದ್ದರೆ ಸುಳ್ಳು ಆರೋಪ ಮಾಡಿ ವೀಡಿಯೋಗಳನ್ನು ಸಾಮಾಜಿಕ ಜಾಲ ತಾಣದಲ್ಲಿ ಅಪ್‌ಲೋಡ್ ಮಾಡುವುದಾಗಿ ಬೆದರಿಸಿದ್ದ ಹಾಗೂ ಪತಿ ಮಹೇಶ್, ತಮ್ಮ ತಂದೆ, ತಾಯಿ ವಿರುದ್ಧ ಸಾರ್ವಜನಿಕ ವಲಯದಲ್ಲಿ ಕೆಟ್ಟ ಅಭಿಪ್ರಾಯ ಬರು ವಂತೆ 2–3 ವೀಡಿಯೋಗಳನ್ನು ಯು–ಟ್ಯೂಬ್‌ನಲ್ಲಿ ಅಪ್‌ಲೋಡ್ ಮಾಡಿ ಬ್ಲಾಕ್‌ಮೇಲ್ ಮಾಡಿದ್ದಾನೆ ಎಂದು ದೂರಿನನ್ವಯ ಪೊಲೀಸರು ಆನಂದ್ ಮೊದಲಿಯಾರ್ ವಿರುದ್ಧ ಭಾರತೀಯ ದಂಡ ಸಂಹಿತೆ 384, 511ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಈಜು ತರಬೇತುದಾರ ವಿ.ಜಗದೀಶ್‌ಗೆ ಬಹುಮಾನ



ಮೈಸೂರು, ನ. 10– ಇತ್ತೀಚೆಗೆ ಹುಬ್ಬಳ್ಳಿ–ಧಾರವಾಡದಲ್ಲಿ ನಡೆದ ಕರ್ನಾಟಕ ಓಪನ್ ನ್ಯಾಷನಲ್ಸ್ ಮಾಸ್ಟರ್ ಗೇಮ್ಸ್‌ನಲ್ಲಿ ಮೈಸೂರಿನ ಈಜು ತರಬೇತುದಾರ ವಿ. ಜಗದೀಶ್ ಭಾಗವಹಿಸಿ 3 ಬೆಳ್ಳಿ, 2 ಕಂಚಿನ ಪದಕಗಳನ್ನು ಗೆದ್ದಿದ್ದಾರೆ. 50 ಮೀಟರ್ ಬ್ರೆಸ್ಟ್ ಸ್ಟ್ರೋಕ್, 200 ಮೀಟರ್ ಬಟರ್ ಫ್ಲೈ, 200 ಮೀಟರ್ ಬ್ಯಾಕ್ ಸ್ಟ್ರೋಕ್ –ಬೆಳ್ಳಿ, 200 ಮೀಟರ್ ವೈಯಕ್ತಿಕ ಮೆಡಲ್, 100 ಮೀಟರ್ ಬಟರ್ ಫ್ಲೈ–ಕಂಚಿನ ಪದಕ ಪಡೆದುಕೊಂಡಿದ್ದಾರೆ.

ಅಂತರಾಷ್ಟ್ರೀಯ ಮಟ್ಟದ ಇಸ್ಕಾ ವರ್ಲ್ಡ್ ಮಾರ್ಷಲ್ ಆರ್ಟ್ ಚಾಂಪಿಯನ್‌ಶಿಪ್‌ನಲ್ಲಿ

ಬೆಳ್ಳಿ ಪದಕ ವಿಜೇತ ಮೈಸೂರಿನ ಪರೀಕ್ಷಿತ್ ಪ್ರದೀಪ್‌ಗೆ ಸನ್ಮಾನ



ಮೈಸೂರು, ನ.10 (ಎಂಕೆ)– ಇತ್ತೀಚೆಗೆ ಜರ್ಮನಿಯಲ್ಲಿ ನಡೆದ ಅಂತರಾಷ್ಟ್ರೀಯ ಮಟ್ಟದ ISKA ವರ್ಲ್ಡ್ ಮಾರ್ಷಲ್ ಆರ್ಟ್ ಚಾಂಪಿಯನ್ ಶಿಪ್‌ನಲ್ಲಿ ಜೂನಿಯರ್ ಬಾಯ್ಸ್ 45 ಕೆ.ಜಿ ಲೈಟ್ ಕಾಂಟ್ಯಾಕ್ಟ್ ವಿಭಾಗದಲ್ಲಿ ಬೆಳ್ಳಿ ಹಾಗೂ ಕೆ1 ಲೈಟ್ ವಿಭಾಗದಲ್ಲಿ ಕಂಚಿನ ಪದಕ ಗೆದ್ದ ಮೈಸೂರಿನ ಬಾಲ ಪ್ರತಿಭೆ ಪರೀಕ್ಷಿತ್ ಪ್ರದೀಪ್ ನನ್ನು ಕೆಎಂಪಿಕೆ ಟ್ರಸ್ಟ್ ವತಿಯಿಂದ ಸನ್ಮಾನಿಸಿ, ಅಭಿನಂದಿಸಲಾಯಿತು.

ನಗರದ ಎಂ.ಜಿ ರಸ್ತೆಯಲ್ಲಿರುವ ಸಿಪಾಯಿ ಗ್ರ್ಯಾಂಡ್ ಹೋಟೆಲ್‌ನಲ್ಲಿ ಆಯೋಜಿಸಿದ್ದ ಅಭಿನಂದನಾ ಸಮಾರಂಭ ಶಾಸಕ ಟಿ.ಎಸ್.ಶ್ರೀವತ್ಸ, ಸಂಸದ ಪ್ರತಾಪ್ ಸಿಂಹ ಸಾಧಕ ವಿದ್ಯಾರ್ಥಿಯನ್ನು ಅಭಿನಂದಿಸಿದರು. ಹಾಗೆಯೇ ಆತನ ತಾಯಿ ಶ್ರೀಮತಿ ಪುನೀತಾ ಮತ್ತು ತಂದೆ ಪ್ರದೀಪ್ ಹಾಗೂ ಓಶೋಕಾಯ್ ಮಾರ್ಷಲ್ ಆರ್ಟ್ಸ್ ಕಾಲೇಜ್‌ನ ಮುಖ್ಯಶಿಕ್ಷಕ ಡಾ.ಎಸ್. ಕೃಷ್ಣಮೂರ್ತಿ ಅವರನ್ನು ಸನ್ಮಾನಿಸಲಾಯಿತು. ಮೇಯರ್ ಶಿವಕುಮಾರ್, ಜಿಲ್ಲಾ ಬ್ರಾಹ್ಮಣ ಸಂಘ ಅಧ್ಯಕ್ಷ ಡಿ.ಟಿ.ಪ್ರಕಾಶ್, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣ ಗೌಡ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ, ಸಮಾಜ ಸೇವಕ ರಘುರಾಂ ವಾಜಪೇಯಿ, ನಗರಪಾಲಿಕೆ ಮಾಜಿ ಸದಸ್ಯ ಪಾರ್ಥಸಾರಥಿ, ಉದ್ಯಮಿ ಗಿರೀಶ್, ಕೆಎಂಪಿಕೆ ಟ್ರಸ್ಟ್‌ನ ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ ಮತ್ತಿತರರು ಉಪಸ್ಥಿತರಿದ್ದರು.

ಸ್ಕೂಟರ್‌ನಿಂದ ಬಿದ್ದು ಯುವಕರಿಬ್ಬರ ದುರ್ಮರಣ

ಮತ್ತೋರ್ವನಿಗೆ ಗಾಯ, ರೈಲ್ವೇ ಕ್ರೀಡಾಂಗಣದ ಬಳಿ ಕೆಆರ್‌ಎಸ್ ರಸ್ತೆಯಲ್ಲಿ ಗುರುವಾರ ತಡರಾತ್ರಿ ದುರ್ಘಟನೆ

ಮೈಸೂರು, ನ.10(ಆರ್‌ಕೆ)–ಸ್ಕೂಟರ್‌ನಿಂದ ಬಿದ್ದು ಯುವಕರಿಬ್ಬರು ಸಾವನ್ನಪ್ಪಿದ್ದು, ಮತ್ತೋರ್ವ ಗಾಯಗೊಂಡಿರುವ ಘಟನೆ ಮೈಸೂರಿನ ರೈಲ್ವೇ ಕ್ರೀಡಾಂಗಣದ ಬಳಿ ಕೆಆರ್‌ಎಸ್ ರಸ್ತೆಯಲ್ಲಿ ಗುರುವಾರ ತಡರಾತ್ರಿ ಸಂಭವಿಸಿದೆ.

ಮೈಸೂರಿನ ಗೋಕುಲಂ ನಿವಾಸಿ ನಿರಂಜನ್(17) ಹಾಗೂ ಕುಂಬಾರಕೊಪ್ಪಲಿನ ಸಿದ್ದರಾಜು(19) ಸಾವನ್ನಪ್ಪಿದವರು. ಗಾಯಗೊಂಡಿರುವ ಸಂತೋಷ್‌ನನ್ನು ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ. ಸಿದ್ದರಾಜು ಓಡಿಸುತ್ತಿದ್ದ ಡಿಯೋ (ಕೆಎ 09, ಎನ್‌ಜೆ 6976) ಸ್ಕೂಟರ್‌ನಲ್ಲಿ ವಿವಿ ಪುರಂ ಕಡೆಯಿಂದ ಮೂವರೂ ದಾಸಪ್ಪ ಸರ್ಕಲ್ ಕಡೆಗೆ ಬರುತ್ತಿದ್ದಾಗ ನಿಯಂತ್ರಣ ತಪ್ಪಿದ ಸ್ಕೂಟರ್ ರಾತ್ರಿ ಸುಮಾರು 11.45 ಗಂಟೆ ವೇಳೆಯಲ್ಲಿ ರೈಲ್ವೇ ಕ್ರೀಡಾಂಗಣದ ಬಳಿ ತಿರುವಿನಲ್ಲಿ ಫುಟ್‌ಪಾತ್ ಏರಿ ಮರ ಮತ್ತು ಗೇಟಿಗೆ ಅಪ್ಪಳಿಸಿದೆ.

ಪರಿಣಾಮ ನಿರಂಜನ ಸ್ಥಳದಲ್ಲೇ ಮೃತಪಟ್ಟರೆ, ಸಿದ್ದರಾಜು ಕೆ.ಆರ್.ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾನೆ. ಗಾಯಗೊಂಡಿದ್ದ ಸಂತೋಷ್‌ನನ್ನು ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ. ವಿಷಯ ತಿಳಿದ ತಕ್ಷಣ ಸ್ಥಳಕ್ಕೆ ಧಾವಿಸಿದ ವಿವಿ ಪುರಂ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಲವ ಹಾಗೂ ಸಿಬ್ಬಂದಿ ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಚಲನ್, ಬ್ಯಾಂಕ್ ಸೀಲ್ ನಕಲಿ ಪ್ರಕರಣ ಹಿನ್ನೆಲೆ

ಮುಡಾದಲ್ಲಿ ನಗದು ಮೂಲಕ ಶುಲ್ಕ ಪಾವತಿ ತಕ್ಷಣದಿಂದಲೇ ರದ್ದು

ಚೆಕ್, ಡಿಡಿ, ನೆಫ್ಟ್, ಆರ್‌ಟಿಜಿಎಸ್‌ನಂತಹ ಆನ್‌ಲೈನ್ ಪೇಮೆಂಟ್ ಪದ್ಧತಿ ಜಾರಿ



ಮೈಸೂರು, ನ. 10(ಆರ್‌ಕೆ)– ಇನ್ನು ಮುಂದೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಕಚೇರಿಯಲ್ಲಿ ನಗದು ರೂಪದ ಶುಲ್ಕ, ಕಂದಾಯ ಪಾವತಿ ವ್ಯವಸ್ಥೆ ತಕ್ಷಣದಿಂದಲೇ ರದ್ದಾಗಿದೆ.

ಚಲನ್, ಬ್ಯಾಂಕ್ ಸೀಲು ನಕಲಿ ಮಾಡಿಕೊಂಡು ಖಾತೆಗೆ ಹಣ ಜಮೆ ಮಾಡದೇ ಮುಡಾಗೆ ಕೋಟ್ಯಾಂತರ ರೂ. ನಷ್ಟ ಉಂಟುಮಾಡಿರುವ ಪ್ರಕರಣ ಬಯಲಾಗುತ್ತಿದ್ದಂತೆಯೇ ಎಲ್ಲಾ ಬಗೆಯ ಸೇವಾ ಶುಲ್ಕದ ನಗದು ಪಾವತಿ ವ್ಯವಸ್ಥೆಯನ್ನು ಆಯುಕ್ತ ಜಿ.ಟಿ. ದಿನೇಶಕುಮಾರ್ ತಕ್ಷಣದಿಂದಲೇ ರದ್ದುಪಡಿಸಿದ್ದಾರೆ.

ಈ ಕುರಿತು ಇಂದು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಅವರು, ಮುಡಾದಲ್ಲಿ ಒದಗಿಸುವ ಖಾತಾ ನೋಂದಣಿ, ವರ್ಗಾವಣೆ, ತೆರಿಗೆ, ಕಂದಾಯ, ಸಿಆರ್, ನಕ್ಷೆ ಅನುಮೋದನೆಯಂತಹ ಎಲ್ಲಾ ಬಗೆಯ ಸೇವೆಗಳಿಗೆ ನಿಗದಿಪಡಿಸಿರುವ ಶುಲ್ಕ ಹಾಗೂ ಸೇವಾ ಶುಲ್ಕ ಭರಿಸಲು ಬ್ಯಾಂಕ್ ಚೆಕ್ ಅಥವಾ ಡಿಡಿಗಳನ್ನು ಮಾತ್ರ ಸ್ವೀಕರಿಸಿ ಅರ್ಜಿದಾರರಿಗೆ ರಶೀದಿ ನೀಡಲಾಗುವುದು ಎಂದರು. ಚೆಕ್, ಡಿಡಿ ಕೊಡಲು ಸಾಧ್ಯವಾಗದವರು ಪ್ರಾಧಿಕಾರದ ಬ್ಯಾಂಕ್ ಖಾತಾ ಸಂಖ್ಯೆಗೆ ನೇರವಾಗಿ ನೆಫ್ಟ್, ಆರ್‌ಟಿಜಿಎಸ್,

ಗೂಗಲ್ ಪೇ, ಫೋನ್ ಪೇಯಂತಹ ಆನ್‌ಲೈನ್ ಮೂಲಕ ಶುಲ್ಕದ ಹಣವನ್ನು ನೇರವಾಗಿ ವರ್ಗಾಯಿಸಬೇಕೆಂದು ಆದೇಶ ಹೊರಡಿಸಿರುವುದಾಗಿಯೂ ತಿಳಿಸಿದರು.

ಒಂದು ವೇಳೆ ಆನ್‌ಲೈನ್ ಪೇಮೆಂಟ್ ಮಾಡಲು ಸಾಧ್ಯವಾಗದ ಅಥವಾ ಜ್ಞಾನ ಹೊಂದಿರದ ಅನಕ್ಷರಸ್ಥರು, ಹಿರಿಯ ನಾಗರಿಕರಿಗೆ ಮುಡಾ ಕಚೇರಿಯ ಸ್ವಂದನಾ ಕೌಂಟರ್ ಸಿಬ್ಬಂದಿಯು ಆನ್‌ಲೈನ್ ಪೇಮೆಂಟ್ ಮಾಡಲು ಅರ್ಜಿದಾರರಿಗೆ ನೆರವು ನೀಡಲು ಜವಾಬ್ದಾರಿ ವಹಿಸಲಾಗಿದೆ ಎಂದು ಆಯುಕ್ತರು ನುಡಿದರು.

ಇನ್ನು ಮುಂದೆ ನಗದು ವಹಿವಾಟು ಇರುವುದೇ ಇಲ್ಲ. ಎಲ್ಲಾ ಪೇಮೆಂಟ್‌ಗಳು ಆನ್‌ಲೈನ್ ಮೂಲಕ ಮಾತ್ರ ಮಾಡಬೇಕೆಂದು ಆದೇಶದಲ್ಲಿ ತಿಳಿಸಲಾಗಿದೆ. ಈ ವ್ಯವಸ್ಥೆಯಿಂದ ಪ್ರಾಧಿಕಾರದ ಬ್ಯಾಂಕ್ ಖಾತೆಗೆ ನೇರವಾಗಿ ಹಣ ಬರುತ್ತದೆ. ಅಲ್ಲದೆ, ನಿಖರವಾದ ಲೆಕ್ಕ ಲಭ್ಯವಾಗುತ್ತದೆ. ಎಲ್ಲಾ ಪೇಮೆಂಟ್ ಗಳಿಗೂ ದಾಖಲೆ ಇರುತ್ತದೆ ಎಂದು ಆಯುಕ್ತರು ತಿಳಿಸಿದ್ದಾರೆ. ನೂತನ ವ್ಯವಸ್ಥೆಯಿಂದ ಕಚೇರಿ ಸಿಬ್ಬಂದಿಯಾ ಗಲೀ, ಮಧ್ಯವರ್ತಿಗಳಾಗಲೀ ಅರ್ಜಿ ದಾರರಿಂದ ಹಣ ಪಡೆದು ಪ್ರಾಧಿಕಾರಕ್ಕೆ ವಂಚನೆ ಮಾಡುವುದು ಹಾಗೂ ಸಾರ್ವಜನಿಕರಿಂದ ಹೆಚ್ಚು ಹಣ ವಸೂಲಿ ಮಾಡುವುದು ತಪ್ಪುತ್ತದೆ. ಅಲ್ಲದೇ, ಲೆಕ್ಕ ಶಾಖೆಯಲ್ಲಿ ನಿಖರ ಮಾಹಿತಿ ದಾಖಲೆ ಪುಸ್ತಕಗಳಲ್ಲಿ ನಮೂದಾಗಿ ಲೆಕ್ಕ ಪರಿಶೋಧನೆ ವೇಳೆ ಯಾವುದೇ ಹಣಕಾಸಿನ ವ್ಯತ್ಯಾಸವಾಗುವುದಿಲ್ಲ ಎಂದು ದಿನೇಶಕುಮಾರ್ ತಿಳಿಸಿದರು.

ಅಕ್ರಮದಲ್ಲಿ ಭಾಗಿ ಆರೋಪ: 15 ಮಂದಿ ಹೊರಗುತ್ತಿಗೆ ನೌಕರರ ವಜಾಗೊಳಿಸಲು ಮುಡಾ ನಿರ್ಧಾರ

ಮೈಸೂರು, ನ. 10(ಆರ್‌ಕೆ)–ಹಣಕಾಸು ಅವ್ಯವಹಾರ, ಅಕ್ರಮ ದಲ್ಲಿ ಭಾಗಿಯಾಗಿದ್ದಾರೆಂಬ ಆರೋಪದ ಹಿನ್ನೆಲೆಯಲ್ಲಿ ಸುಮಾರು 15 ಮಂದಿ ಹೊರ ಗುತ್ತಿಗೆ ನೌಕರರನ್ನು ವಜಾಗೊಳಿಸಲು ಮುಡಾದಲ್ಲಿ ಪ್ರಕ್ರಿಯೆ ಆರಂಭವಾಗಿದೆ. ನಕಲಿ ಚಲನ್, ಸೀಲ್ ತಯಾರಿಸಿ ಅರ್ಜಿದಾರರಿಂದ ಸಂಗ್ರಹಿಸಿದ ಶುಲ್ಕದ ಹಣವನ್ನು ಬ್ಯಾಂಕ್ ಖಾತೆಗೆ ಪಾವತಿ ಸದೇ ಪ್ರಾಧಿಕಾರಕ್ಕೇ ವಂಚನೆ ಮಾಡು ತ್ತಿದ್ದುದ್ದಲ್ಲದೇ, ಖಾತಾ ನೋಂದಣಿ, ವರ್ಗಾವಣೆ, ಸಿಆರ್‌ನಂತಹ ಸೇವೆ ಯಲ್ಲೂ ಸಾರ್ವಜನಿಕರಿಂದ ಲಂಚ ಪಡೆಯುತ್ತಿದ್ದಾರೆ ಎಂಬ ಆರೋಪ ಕೇಳಿ ಬರುತ್ತಿರುವುದರಿಂದ ಏಜೆನ್ಸಿ ಮೂಲಕ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ 15ಕ್ಕೂ ಹೆಚ್ಚು ಡೇಟಾ ಎಂಟ್ರಿ ಆಪರೇಟರ್ (ಡಿಇಓ) ಹಾಗೂ ಗ್ರೂಪ್ 'ಡಿ' ನೌಕರರನ್ನು ಸೇವೆಯಿಂದ ವಜಾ ಮಾಡುತ್ತಿದ್ದೇವೆ ಎಂದು ಮುಡಾ ಆಯುಕ್ತ ಜಿ.ಟಿ. ದಿನೇಶಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿ ದ್ದಾರೆ. ಭಾರೀ ಹಗರಣ ಬಯಲಾಗುತ್ತಿ ದ್ದಂತೆಯೇ ಈಗಾಗಲೇ ನಾಲ್ವರು ಕೆಲಸಕ್ಕೆ ಗೈರುಹಾಜರಾಗಿದ್ದಾರೆ. ಮಾತ್ರವಲ್ಲ ತಲೆ ಮರೆಸಿಕೊಂಡಿದ್ದಾರೆ. ಮೊಬೈಲ್ ಸಂಪರ್ಕಕ್ಕೂ ಸಿಗುತ್ತಿಲ್ಲ. ನಾವು ಪರಿಶೀಲಿಸಿದಾಗ ಅಕ್ರಮ ಚಟುವಟಿಕೆ ಗಳಲ್ಲಿ ಅವರೂ ಸೇರಿದಂತೆ 15ಕ್ಕೂ ಹೆಚ್ಚು ಮಂದಿ ಭಾಗಿಯಾಗಿರುವ ಬಗ್ಗೆ ಮಾಹಿತಿ ಬಂದಿದೆ ಎಂದು ಅವರು ತಿಳಿಸಿದರು. ಕೆಲವರಿಗೆ ಕೌಶಲ್ಯವಿಲ್ಲ, ಪ್ರಭಾವಿಗಳ ಒತ್ತಡದಿಂದ ಹಲವರನ್ನು ಸೇರಿಸಿಕೊಳ್ಳಲಾಗಿದೆ. ಅಂತಹವರಿಗೆ ಕೆಲಸವೇ ಗೊತ್ತಿಲ್ಲ. ಆದರೆ, ಅಕ್ರಮಗಳನ್ನು ಮಾಡುವ ಚಾಕಚಕ್ಯತೆ ಹೊಂದಿದ್ದಾರೆ. ಇಂತಹವರು ಮುಡಾಗೆ ಕಂಟಕವಾಗಿ ಪರಿಣ ಮಿಸಿದ್ದಾರೆ. ಆದ್ದರಿಂದ ಅಂತಹವರನ್ನು ಕೆಲಸದಿಂದ ತೆಗೆಯಲು ನಿರ್ಧರಿಸಿದ್ದೇವೆ ಎಂದು ಅವರು ತಿಳಿಸಿದರು. ಮುಡಾದಲ್ಲಿ ಒಟ್ಟು 60ರಿಂದ 70 ಮಂದಿ ಹೊರಗುತ್ತಿಗೆ ನೌಕರರಿದ್ದಾರೆ. ಆ ಪೈಕಿ 45ರಿಂದ 50 ಮಂದಿಗೆ ಕೆಲಸ ಮಾಡುವ ಕೌಶಲ್ಯವಿದೆ. ಈಗ ಅಗತ್ಯಕ್ಕಿಂತಲೂ ಹೆಚ್ಚು ಮಂದಿ ಮುಡಾದಲ್ಲಿ ಹೊರಗುತ್ತಿಗೆದಾರರಿರುವುದರಿಂದ ಹೆಚ್ಚುವರಿ ಸಿಬ್ಬಂದಿಯನ್ನೂ ತೆಗೆದು ಹಾಕಲು ಪ್ರಕ್ರಿಯೆ ಆರಂಭಿಸಿದ್ದೇವೆ ಎಂದು ಆಯುಕ್ತರು ನುಡಿದರು.

ಮೈಸೂರು ಮಿತ್ರ

ಚಾಲಕನ ಅಜಾಗರೂಕತೆಯಿಂದ ಶಾಲಾ ಬಸ್ ಹರಿದರೂ

ಆಶ್ಚರ್ಯಕರ ರೀತಿ ಶಾಲಾ ಬಾಲಕಿ ಪಾರು

ಹುಣಸೂರು, ನ.10–ಚಾಲಕನ ಅಜಾಗರೂಕತೆಯಿಂದ ಬಾಲಕಿ ಮೇಲೆ ಶಾಲಾ ಬಸ್ ಹರಿದರೂ ಅದೃಷ್ಟವಶಾತ್, ಅಚ್ಚರಿ ರೀತಿಯಲ್ಲಿ ಬಾಲಕಿ ಪ್ರಾಣಾಪಾಯದಿಂದ ಪಾರಾಗಿದ್ದಾಳೆ. ಈ ಘಟನೆ ಹುಣಸೂರು ಪಟ್ಟಣದಲ್ಲಿ ಗುರುವಾರ ಸಂಜೆ ನಡೆದಿದೆ.





ನಗರದ ಮಂಜುನಾಥ ಬಡಾವಣೆಯ ನಿವಾಸಿ ಪೂರ್ಣಚಂದ್ರ ಅಮರ ಪುತ್ರಿ ಯಶಿಕಾ (9) ಅದೃಷ್ಟವಂತೆ. ಯಶಿಕಾ ಹುಣಸೂರಿನ ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ 3ನೇ ತರಗತಿ ವಿದ್ಯಾರ್ಥಿನಿ. ಗುರುವಾರ ಸಂಜೆ ಎಂದಿನಂತೆ ಶಾಲಾ ಬಸ್‌ನಲ್ಲಿ ಬಂದ ಯಶಿಕಾ ಮನೆಯ ಎದುರಿನಲ್ಲಿ ತನ್ನ ಸಹೋದರಿ ಹಂಸಿಕಾಳೊಂದಿಗೆ ಬಸ್‌ನಿಂದ ಕೆಳಗೆ ಇಳಿದಿದ್ದಾಳೆ. ತಕ್ಷಣ, ಬಸ್‌ನ ಮುಂದೆ ಹಾದು ಹೋಗಲು ಮುಂದಾಗಿದ್ದಾಳೆ. ಈ ವೇಳೆ ಚಾಲಕ ಆಕೆಯನ್ನು ಗಮನಿಸದೇ ಅಜಾಗರೂಕತೆಯಿಂದ ಬಸ್ ಚಾಲಿಸಿದ್ದಾನೆ. ಆಕೆ ಬಸ್ ಮಧ್ಯೆ ಸಿಲುಕಿದ್ದಾಳೆ. ಅದೃಷ್ಟವಶಾತ್ ರಸ್ತೆಯಲ್ಲಿ ಹಳ್ಳ ಇದ್ದ ಕಾರಣ ಬಾಲಕಿ ಬಸ್ ಹರಿದರೂ ಯಾವುದೇ ಅಪಾಯ ಸಂಭವಿಸಿಲ್ಲ. ಅಷ್ಟರಲ್ಲಿ ರಸ್ತೆಯಲ್ಲಿ ನಿಂತಿದ್ದವರು ಜೋರಾಗಿ ಕೂಗಿಕೊಂಡಿದ್ದಾರೆ. ಇದರಿಂದ ಗಾಬರಿಗೊಂಡ ಚಾಲಕ ಬಸ್ ನಿಲ್ಲಿಸಿ ಇಳಿದು ಓಡಿ ಬಂದು ಬಾಲಕಿಯನ್ನು ಮೇಲೆತ್ತಿದ್ದಾನೆ. ಬಾಲಕಿ ಹಳ್ಳದಲ್ಲಿ ಬಿದ್ದಿದ್ದರಿಂದ ಮಂಡಿಗೆ ಸಣ್ಣ ಗಾಯವಾಗಿ, ಪ್ರಾಣಾಪಾಯದಿಂದ ಪಾರಾಗಿದ್ದಾಳೆ. ನಂತರ ಪಟ್ಟಣದ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಕೊಡಿಸಿ, ಮೈಸೂರಿನ ಅಪೊಲೋ ಆಸ್ಪತ್ರೆಯಲ್ಲಿ ತಪಾಸಣೆ ನಡೆಸಲಾಯಿತು. ಯಾವುದೇ ಅಪಾಯವಿಲ್ಲ ಎಂದು ವೈದ್ಯರ ತಿಳಿಸಿದ ಬಳಿಕ ಬಾಲಕಿಯನ್ನು ವಾಪಸ್ ಮನೆಗೆ ಕರೆದುಕೊಂಡು ಬಂದಿದ್ದಾರೆ.

ಬಾಲಕಿಯ ಮೇಲೆ ಬಸ್ ಹರಿದ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದು, ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ವಿಷಯ ತಿಳಿದ ಶಾಲಾ ಮುಖ್ಯಸ್ಥರು ಬಾಲಕಿಯ ಮನೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದ್ದಾರೆ.

ಬಿಇಓ ಭೇಟಿ: ಶುಕ್ರವಾರ ಬೆಳಗ್ಗೆ ಬಿಇಓ ರೇವಣ್ಣ ಬಾಲಕಿಯ ಮನೆಗೆ ಭೇಟಿ ನೀಡಿ, ಪೋಷಕರಿಂದ ಘಟನೆ ಕುರಿತು ಮಾಹಿತಿ ಪಡೆದರು. ಇದೇ ಚಾಲಕ ವಾರದ ಹಿಂದೆ ನ್ಯೂ ಮಾರುತಿ ಬಡಾವಣೆಯಲ್ಲಿ ವೇಗವಾಗಿ ಬಂದು ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗೆ ಡಿಕ್ಕಿ ಹೊಡೆದಿದ್ದ. ಈ ವೇಳೆ ಆತನನ್ನು ಸಾರ್ವಜನಿಕರು ತಡೆದು ಎಚ್ಚರಿಕೆ ನೀಡಿ ಕಳುಹಿಸಿದ್ದರು ಎಂದು ಬಡಾವಣೆ ನಿವಾಸಿ ಪ್ರದೀಪ್ ಮಾಹಿತಿ ನೀಡಿದರು.

> ಸದ್ಯ ನಮ್ಮ ಮಗಳಿಗೆ ಯಾವುದೇ ತೊಂದರೆ ಆಗಿಲ್ಲ. ಆದರೂ ಈ ಘಟನೆಯಿಂದ ಇಬ್ಬರು ಮಕ್ಕಳು ಶಾಕ್ ಆಗಿದ್ದಾರೆ. ನಾವು ಶಾಲೆಯವರನ್ನು ನಂಬಿ ಮಕ್ಕಳನ್ನು ಕಳುಹಿಸುತ್ತೇವೆ. ವಾಪಸ್ ಮನೆಗೆ ಬಿಡುವವರೆಗೆ ಅವರ ಜವಾಬ್ದಾರಿ ಅವರೇ ಹೊರಬೇಕು.
> –**ಪೂರ್ಣಚಂದ್ರ,** ಯಶಿಕಾ ತಂದೆ

ಶಾಲಾ ಬಸ್‌ಗಳಲ್ಲಿ ಚಾಲಕನೊಂದಿಗೆ ಸಹಾಯಕರಿರುವುದನ್ನು ಸರ್ಕಾರ ಕಡ್ಡಾಯಗೊಳಿಸಿದೆ. ಆದರೆ, ಗುರುವಾರ ಸಹಾಯಕರು ರಜೆ ಇದ್ದಿದ್ದರಿಂದ ಬಸ್‌ನಲ್ಲಿ ಚಾಲಕ ಮಾತ್ರ ಇದ್ದ ಎನ್ನಲಾಗಿದೆ.

ಬಿಇಓ ಎಚ್ಚರಿಕೆ: ಆಶ್ಚರ್ಯಕರ ರೀತಿ ಮಗು ಬಚಾವ್ ಆಗಿದೆ. ಈ ಬಗ್ಗೆ ಶಾಲೆಯವರಿಂದ ಸಮಗ್ರ ಮಾಹಿತಿ ಪಡೆಯಲಾಗುವುದು. ಮುಂದೆ ಹೀಗಾಗದಂತೆ ಎಚ್ಚರ ವಹಿಸಲು ಶಾಲೆಗಳ ಮುಖ್ಯಸ್ಥರಿಗೆ ಸೂಚಿಸಲಾಗುವುದು ಎಂದು ಬಿಇಓ ತಿಳಿಸಿದ್ದಾರೆ.

ಶಿಕ್ಷಣಕ್ಕೆ ಒತ್ತು ನೀಡಿ: ಶಾಸಕ ಜಿಟಿಡಿ



ಬನ್ನೂರು: ಪ್ರತಿಯೊಬ್ಬ ಪೋಷಕರು ತಮ್ಮ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕು. ಆಗ ಮಾತ್ರ ಸುತ್ತಮುತ್ತಲಿನ ಪರಿಸರ ಹಾಗೂ ಸಮಾಜದ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು.

ಇಲ್ಲಿನ ರೋಟರಿ ಶಾಲೆಯಲ್ಲಿ ಶಿಕ್ಷಣ ಇಲಾಖೆ ವತಿಯಿಂದ ಆಯೋಜಿಸಿದ್ದ ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಂದು ಮಗುವಿನಲ್ಲೂ ಅನೇಕ ಪ್ರತಿಭೆಗಳು ಅಡಗಿರುತ್ತದೆ. ಅದನ್ನು ಬೆಳಕಿಗೆ ತರಲು ಸೂಕ್ತ ವೇದಿಕೆ ಅಗತ್ಯವಿದ್ದು, ಅಂತಹ ವೇದಿಕೆ ಪ್ರತಿಭಾ ಕಾರಂಜಿಯ ಮೂಲಕ ಮಕ್ಕಳಿಗೆ ದೊರೆತಿದೆ. ಇದರ ಸದುಪಯೋಗಪಡಿಸಿಕೊಂಡು ಮಕ್ಕಳು ಉತ್ತಮ ಸಾಧನೆ ಮಾಡುವಂತೆ ಕರೆ ನೀಡಿದರು.

ರೋಟರಿ ಮಾಜಿ ಅಧ್ಯಕ್ಷ ಮಹೇಂದ್ರ ಸಿಂಗ್ ಕಾಳಪ್ಪ ಮಾತನಾಡಿ, ಮಕ್ಕಳ ಚಾರಿತ್ರ್ಯ ರೂಪಿಸುವಲ್ಲಿ ಶಿಕ್ಷಕರು ಮತ್ತು ಪಾಲಕರ ಪಾತ್ರ ಬಹಳ ಮುಖ್ಯ. ದೇಶದ ಭವಿಷ್ಯ ಮಕ್ಕಳ ಕೈಯಲ್ಲಿ ಅಡಗಿದೆ. ಶಿಕ್ಷಣದಲ್ಲಿ ಯಾವುದೇ ಜಾತಿ, ಧರ್ಮ ಅಡ್ಡಿಯಾಗದೆ ಎಲ್ಲರೂ ಬೆರೆತು ಶಿಕ್ಷಿತರಾಗಬೇಕು ಎಂದರು.

ಪ್ರತಿಭಾಕಾರಂಜಿಯಲ್ಲಿ ವಿವಿಧ ಶಾಲೆಯ ಮಕ್ಕಳು ಮಣ್ಣಿನಲ್ಲಿ ಆನೆ, ಕುದುರೆ, ಜಿಂಕೆ, ಮೊಸಳೆಯಂತಹ ವಿವಿಧ ಕಲಾಕೃತಿಗಳನ್ನು ಮಾಡಿ ಸಾರ್ವಜನಿಕರ ಗಮನ ಸೆಳೆದರು. ವಿವಿಧ ಕಂಠಪಾಠ ಸ್ಪರ್ಧೆಗಳು ಜರುಗಿದವು. ಶಿಕ್ಷಣ ಇಲಾಖೆಯ ನಿರ್ದೇಶಕ ಎಚ್.ಕೆ. ಪಾಂಡು, ಪ್ರಾದೇಶಿಕ ಶಿಕ್ಷಣಾಧಿಕಾರಿ ವಿವೇಕಾನಂದ, ರೋಟರಿ ಶಾಲೆಯ ಪ್ರಾಂಶುಪಾಲ ಆತ್ಮಾನಂದ ನರ್ಸ್ ಶಾಲೆಯ ಆಡಳಿತಾಧಿಕಾರಿ ಮಹೇಶ್, ಅನೂಪ್, ಗ್ರಾಪಂ ಸದಸ್ಯ ಮಹೇಶ್, ಶಿಕ್ಷಕ ಮಹದೇವ್, ವಿವಿಧ ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಇದ್ದರು.

ತಂತಿ ಬೇಲಿಗೆ ಸಿಲುಕಿದ್ದ ಚಿರತೆ ರಕ್ಷಣೆ



ಹೆಚ್.ಡಿ.ಕೋಟೆ: ತಾಲೂಕಿನ ಹೈರಿಗೆ ಗ್ರಾಮದ ಮಲಾರ ಗ್ರಾಮಕ್ಕೆ ತೆರಳುವ ರಸ್ತೆ ಬಳಿ ತಂತಿ ಬೇಲಿಗೆ ಸಿಲುಕಿ ನರಳಾಡುತ್ತಿದ್ದ ಚಿರತೆಯನ್ನು ಶುಕ್ರವಾರ ಅರಣ್ಯ ಇಲಾಖೆಯ ಸಿಬ್ಬಂದಿ ರಕ್ಷಿಸಿದ್ದಾರೆ.

ಗ್ರಾಮದ ಆರ್ಮುಗಂ ಎಂಬುವವರ ಜಮೀನಿನ ರಕ್ಷಣೆಗೆ ಅಳವಡಿಸಿದ್ದ ತಂತಿ ಬೇಲಿಗೆ ಎರಡು ವರ್ಷದ ಚಿರತೆ ಸಿಲುಕಿ ನರಳಾಡುತ್ತಿತ್ತು. ಇದನ್ನು ಕಂಡ ಜಮೀನಿನ ಮಾಲೀಕರು ಅರಣ್ಯ ಇಲಾಖೆಗೆ ವಿಷಯ ತಿಳಿಸಿದ್ದಾರೆ. ಸ್ಥಳಕ್ಕೆ ಬಂದ ಅರಣ್ಯ ಸಿಬ್ಬಂದಿ ಮತ್ತು ಮೈಸೂರು ಮೃಗಾಲಯದ ವೈದ್ಯರು ಚಿರತೆಯನ್ನು ರಕ್ಷಿಸಿ ಪ್ರಥಮ ಚಿಕಿತ್ಸೆ ನೀಡಿ ತಪಾಸಣೆ ನಡೆಸಿದರು. ಚೇತರಿಸಿಕೊಂಡ ನಂತರ ಚಿರತೆಯನ್ನು ನಾಗರಹೊಳೆ ಅಭಯಾರಣ್ಯಕ್ಕೆ ಬಿಡಲಾಯಿತು. ಇದೇ ವೇಳೆ ಸರಗೂರು ವಲಯ ಅರಣ್ಯಾಧಿಕಾರಿ ಹನುಮಂತ ರಾಜು, ಉಪವಲಯ ಅರಣ್ಯಾಧಿಕಾರಿಗಳಾದ ಪೆಮ್ಮಯ್ಯ, ಚಂದನ್, ಸಿಬ್ಬಂದಿ ಹಾಜರಿದ್ದರು.

ತಿ.ನರಸೀಪುರದಲ್ಲಿ ಯುವ ಮತದಾರರಿಗೆ ಜಾಗೃತಿ



ತಿ.ನರಸೀಪುರ: ಮತದಾರರ ಪಟ್ಟಿಗೆ ಸೇರಿಸಿ ಕಡ್ಡಾಯ ಮತದಾನ ಮಾಡುವಂತೆ ಪ್ರೇರೇಪಿಸಲು ಯುವ ಮತದಾರರಿಗೆ ಜಾಗೃತಿ ಮೂಡಿಸಲಾಗುತ್ತಿದೆ ಎಂದು ತಹಶೀಲ್ದಾರ್ ಟಿ.ಜಿ.ಸುರೇಶ್ ಆಚಾರ್ ತಿಳಿಸಿದರು.

ಪಟ್ಟಣದ ತಾಪಂ ಮುಂಭಾಗ ತಾಲೂಕು ಆಡಳಿತ ಹಾಗೂ ತಾಲೂಕು ಸ್ವೀಪ್ ಸಮಿತಿ ವತಿಯಿಂದ ಆಯೋಜಿಸಿದ್ದ ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಜಾಗೃತಿ ಜಾಥಾಗೆ ಚಾಲನೆ ನೀಡಿ ಮಾತನಾಡಿದ ಅವರು, ನ.18, 19 ಡಿ.2 ಮತ್ತು 3ರಂದು ಮತದಾರರ ಪಟ್ಟಿಯ ಪರಿಷ್ಕರಣೆ ನಡೆಯಲಿದೆ. ಪರಿಷ್ಕರಣೆ ವೇಳೆ ಬಿಎಲ್‌ಒಗಳು ಮತಗಟ್ಟೆಗಳಲ್ಲಿದ್ದು, ಮತದಾರರು ತಿದ್ದುಪಡಿ, ವರ್ಗಾವಣೆ, ಬದಲಾವಣೆ, ಸೇರ್ಪಡೆ ಹಾಗೂ ಇನ್ನಿತರ ಪರಿಷ್ಕರಣೆಗೆ ಅಹವಾಲು ಸಲ್ಲಿಸಬೇಕು. ಈಗಾಗಲೇ ಕರಡುಪಟ್ಟಿ ಪ್ರಕಟಗೊಂಡಿದ್ದು, ಮತದಾರರು ತಮ್ಮ ಹೆಸರನ್ನು ಪರಿಶೀಲಿಸಿಕೊಳ್ಳುವಂತೆ ಸಲಹೆ ನೀಡಿದರು.

ತಾಪಂ ಸಿಇಓ ಸಿ.ಕೃಷ್ಣ ಮಾತನಾಡಿ, ಮತದಾರರು ಪರಿಷ್ಕರಣೆ ವೇಳೆ ಹೆಸರಿನಲ್ಲಿರುವ ಲೋಪದೋಷಗಳು, ವರ್ಗಾವಣೆ, ಸೇರಿಸುವುದು ಅಥವಾ ಪಟ್ಟಿಯಿಂದ ಕೈ ಬಿಡುವುದರ ಬಗ್ಗೆ ನಿಗದಿತ ನಮೂನೆ ಬಳಸಿ ಅರ್ಜಿ ಸಲ್ಲಿಸಿ ಪರಿಷ್ಕರಿಸಿಕೊಳ್ಳಬೇಕು ಎಂದರು.

ಬಳಿಕ ಶಾಲಾ–ಕಾಲೇಜು ವಿದ್ಯಾರ್ಥಿಗಳು ಪಟ್ಟಣದ ವಿವಿಧ ರಸ್ತೆಗಳಲ್ಲಿ ಜಾಥಾ ನಡೆಸಿ ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆಯ ಜಾಗೃತಿ ಮೂಡಿಸಿದರು. ಈ ವೇಳೆ ಬಿಆರ್‌ಸಿ ನಾಗೇಶ್, ತಾಲೂಕು ಐಇಸಿ ಸಂಯೋಜಕ ಹರ್ಷಿತ್, ಸಿಆರ್‌ಪಿ ನವೀನ್, ತಾಲೂಕು ಎನ್‌ಆರ್‌ಎಲ್‌ಎಂ ಸಿಬ್ಬಂದಿಯಾದ ರೂಪಶ್ರೀ, ಮನು, ಸ್ವಾಮಿ, ಶಿಕ್ಷಕರು, ಬಿಎಲ್‌ಒಗಳು, ಸ್ವಸಹಾಯ ಸಂಘಗಳ ಮಹಿಳೆಯರು ಹಾಗೂ ತಾಪಂ ಸಿಬ್ಬಂದಿ ಹಾಜರಿದ್ದರು.



ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಶ್ರೀ ಸಿಡಿಲು ಮಲ್ಲಿಕಾರ್ಜುನಸ್ವಾಮಿ ಬೆಟ್ಟದಲ್ಲಿ ನ.13 ಮತ್ತು 14 ರಂದು ನಡೆಯುವ ದೀಪಾವಳಿ ಹಬ್ಬದ ಪ್ರಯುಕ್ತ ಬೆಟ್ಟದ ಮೆಟ್ಟಿಲುಗಳ ಇಕ್ಕೆಲಗಳಲ್ಲಿ ಬೆಳೆದಿರುವ ಗಿಡಗಂಟಿಗಳನ್ನು ಕಂದಾಯ ಇಲಾಖೆ, ಪೊಲೀಸ್ ಇಲಾಖೆ, ಅರಣ್ಯ ಇಲಾಖೆ, ಬೆಟ್ಟದಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್‌ಎಸ್‌ಎಸ್ ಶಿಬಿರಾರ್ಥಿಗಳು ತೆರವುಗೊಳಿಸಿದರು. ಈ ವೇಳೆ ಬೆಟ್ಟದಪುರ ಪೊಲೀಸ್ ಠಾಣಾಧಿಕಾರಿ ಪ್ರಕಾಶ್ ಎಂ.ಎತ್ತಿನಮನಿ, ಕಂದಾಯ ನಿರೀಕ್ಷಕ ಅಜ್ಮಲ್ ಶರೀಫ್, ಬೆಟ್ಟದಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್‌ಎಸ್‌ಎಸ್ ಘಟಕದ ಶಿಬಿರಾಧಿಕಾರಿ ಜಲೇಂದ್ರ, ಸಹ ಅಧಿಕಾರಿ ಪ್ರಮೋದ್, ಗ್ರಾಮಲೆಕ್ಕಿಗರಾದ ಚೈತ್ರಾ ಹಾಗೂ ಪೊಲೀಸ್ ಸಿಬ್ಬಂದಿ, ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಹಾಜರಿದ್ದರು.



ಅಪಘಾತದಲ್ಲಿ ಗಾಯಗೊಂಡು ಚೇತರಿಸಿಕೊಳ್ಳುತ್ತಿರುವ ಪಿರಿಯಾಪಟ್ಟಣ ತಾಲೂಕಿನ ಕಂಪಲಾಪುರ ಸಮೀಪದ ಮುತ್ತರಾಯನಹೊಸಳ್ಳಿ ಗ್ರಾಮದ ಮಹೇಶ್ ಅವರ ಪತ್ನಿ ಪ್ರಭಾವತಿ ಅವರಿಗೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ 25 ಸಾವಿರ ರೂ. ಸಹಾಯಧನ ನೀಡಲಾಯಿತು. ತಾಲೂಕು ಯೋಜನಾಧಿಕಾರಿ ಸುರೇಶ್‌ಶೆಟ್ಟಿ, ಮೇಲ್ವಿಚಾರಕಿ ರವಿಕಲಾ, ಸೇವಾಪ್ರತಿನಿಧಿ, ಸಂಘದ ಸದಸ್ಯರು ಇದ್ದರು.

ಸೋಮಣ್ಣ, ಕೃಷ್ಣ ಅವಿರೋಧ ಆಯ್ಕೆ



ನಂಜನಗೂಡು: ತಾಲೂಕಿನ ಹೆಮ್ಮರಗಾಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಹೆಮ್ಮರಗಾಲ ಸೋಮಣ್ಣ ಹಾಗೂ ಉಪಾಧ್ಯಕ್ಷರಾಗಿ ಕೃಷ್ಣ ಅವಿರೋಧವಾಗಿ ಆಯ್ಕೆಯಾದರು.

ಸಂಘದ ಕಚೇರಿಯಲ್ಲಿ ಬುಧವಾರ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಆಯ್ಕೆ ಚುನಾವಣೆ ನಡೆಸಲಾಯಿತು. ಅಧ್ಯಕ್ಷ ಸ್ಥಾನಕ್ಕೆ ಸೋಮಣ್ಣ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಕೃಷ್ಣ ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿ ಪ್ರಸಾದ್ ಅವಿರೋಧ ಆಯ್ಕೆ ಘೋಷಿಸಿದರು. ಒಟ್ಟು 12 ಸದಸ್ಯರಲ್ಲಿ 9 ಸದಸ್ಯರು ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು.

ಅಧ್ಯಕ್ಷ ಹೆಮ್ಮರಗಾಲ ಸೋಮಣ್ಣ ಮಾತನಾಡಿ, ಸಂಘದ ಮೂಲಕ ರೈತರಿಗೆ ಬಡ್ಡಿ ರಹಿತವಾಗಿ 5 ಲಕ್ಷ ರೂ. ವಿತರಿಸಲಾಗುತ್ತಿದೆ. ಸಂಘದಲ್ಲಿ ಸುಮಾರು 6 ಕೋಟಿ ರೂ. ವಹಿವಾಟು ನಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ಪಶುಸಂಗೋಪನೆ ಉದ್ದೇಶಕ್ಕೂ ರೈತರಿಗೆ ಸಾಲ ವಿತರಿಸಲು ತೀರ್ಮಾನಿಸಲಾಗಿದೆ. ಈ ಭಾಗದ ರೈತರಿಗೆ ಸರ್ಕಾರದ ಸೌಲಭ್ಯಗಳನ್ನು ದೊರಕಿಸಿಕೊಡಲು ಶ್ರಮಿಸುತ್ತೇನೆ ಎಂದರು.

ಇದೇ ವೇಳೆ ಜಿಪಂ ಮಾಜಿ ಸದಸ್ಯರಾದ ಸಿ.ಚಿಕ್ಕರಂಗ ನಾಯಕ, ಎಸ್.ಎಂ.ಕೆಂಪಣ್ಣ, ಬಿಜೆಪಿ ರಾಜ್ಯ ಮುಖಂಡ ಕುಂಬ್ರಳ್ಳಿ ಸುಬ್ಬಣ್ಣ, ತಾಪಂ ಮಾಜಿ ಸದಸ್ಯರಾದ ಶಿವಣ್ಣ, ಮಹದೇವನಾಯಕ, ಸಂಘದ ನಿರ್ದೇಶಕರಾದ ಪುಟ್ಟರಾಜನಾಯಕ, ವೃಷಬೇಂದ್ರಪ್ಪ, ಮಹದೇವು, ಪುಟ್ಟಮಾದಯ್ಯ, ಶಿವನಾಗೇಗೌಡ, ಮಹದೇವಶೆಟ್ಟಿ, ಮೀನಾಕ್ಷಮ್ಮ, ಮಹದೇವಮ್ಮ, ಶಿವಲಿಂಗು, ಮಹದೇವಪ್ಪ, ಮಲ್ಲಹಳ್ಳಿ ಮಹದೇವಸ್ವಾಮಿ, ರಾಜು, ಗ್ರಾಪಂ ಸದಸ್ಯರಾದ ನಾಗರಾಜು, ದೊಡ್ಡಮಾದಶೆಟ್ಟಿ, ರಾಘವೇಂದ್ರ, ರವಿ, ರಮೇಶ್, ರಂಗಸ್ವಾಮಿ ಹಲವಾರು ಪ್ರಮುಖರು ಇದ್ದರು.

ಡಿ.6, ಮೈಸೂರಿನಲ್ಲಿ ರಾಜಕೀಯ ಸಂಕಲ್ಪ ಸಮಾವೇಶ

• ದಸಂಸ ಮೈಸೂರು ಜಿಲ್ಲಾ ಸಮಿತಿ ಸಭೆಯಲ್ಲಿ ತೀರ್ಮಾನ • ಆಲಗೂಡು ಶಿವಕುಮಾರ್ ಮಾಹಿತಿ

ತಿ.ನರಸೀಪುರ,ನ.10–ಡಾ.ಬಿ.ಆರ್. ಅಂಬೇಡ್ಕರ್ ಅವರ 67ನೇ ಪರಿನಿರ್ವಾಣ ದಿನದ ಅಂಗವಾಗಿ ಮೈಸೂರು ಜಿಲ್ಲಾ ದಲಿತ ಸಂಘರ್ಷ ಸಮಿತಿ ವತಿಯಿಂದ ಮೈಸೂರಿನಲ್ಲಿ ಡಿ.6ರಂದು ಸಂವಿಧಾನ ಮತ್ತು ಪ್ರಜಾಪ್ರಭುತ್ವ ರಕ್ಷಣೆಗಾಗಿ ರಾಜಕೀಯ ಸಂಕಲ್ಪ ಬೃಹತ್ ಸಮಾವೇಶವನ್ನು ಆಯೋಜಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.



ಪಟ್ಟಣದ ನಂಜನಗೂಡು ರಸ್ತೆಯ ಅಂಬೇಡ್ಕರ್ ಸಮುದಾಯ ಭವನದಲ್ಲಿ ನಡೆದ ದಸಂಸ ಮೈಸೂರು ಜಿಲ್ಲಾ ಸಮಿತಿ ಸಭೆಯಲ್ಲಿ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಮಾತನಾಡಿ, ದೇಶದ ಆಡಳಿತ ಕಳೆದ ಹತ್ತು ವರ್ಷಗಳಿಂದ ಕೋಮುವಾದಿಗಳ ಕೈಗೆ ಸಿಕ್ಕಿ ಸಂವಿಧಾನ ಮತ್ತು ಪ್ರಜಾಪ್ರಭುತ್ವ ಅಪಾಯದ ಅಂಚಿಗೆ ಸಿಲುಕಿದಂತಾಗುತ್ತಿದೆ. ದೇಶದ ದಲಿತರು ಒಳಗೊಂಡ ತಳಸಮುದಾಯದ ಬಡವರು ಮತ್ತಷ್ಟು ಶೋಷಣೆಗೆ ಒಳಗಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಜನರಲ್ಲಿ ರಾಜಕೀಯ ಜಾಗೃತಿ ಮೂಡಿಸುವುದು ತುರ್ತು ಅಗತ್ಯವಾಗಿದೆ ಎಂದು ತಿಳಿಸಿದರು.

ಕಳೆದ ವರ್ಷ ಎಲ್ಲಾ ಪ್ರಗತಿಪರ, ದಲಿತ ಚಳವಳಿಗಳು ತೆಗೆದುಕೊಂಡ ರಾಜಕೀಯ ಐಕ್ಯತ ತೀರ್ಮಾನದಿಂದ ರಾಜ್ಯದಲ್ಲಿ ಜನವಿರೋಧಿ ಆಡಳಿತ ನಡೆಸುತ್ತಿದ್ದ ಮತೀಯವಾದಿ ಬಿಜೆಪಿ ಸರ್ಕಾರವನ್ನು ಕಿತ್ತೊಗೆದು ಯಶಸ್ಸು ಕಾಣಲು ಸಾಧ್ಯವಾಯಿತು. ಅದೇ ರೀತಿ ಈ ಬಾರಿ ಜನಪರ ಚಳವಳಿಗಳು ತಮ್ಮ ಅಸ್ತಿತ್ವ ಹಾಗೂ ಜನಸಮುದಾಯದ ಉಳಿವಿಗಾಗಿ ಹೋರಾಡಬೇಕಾಗಿದೆ. ಸಂಘಟನೆಯನ್ನು ಬಲಗೊಳಿಸಲು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಸರ್ವಸದಸ್ಯರ ಸಭೆ ನಡೆಸುವ ಮೂಲಕ ಕಾರ್ಯಕ್ರಮಗಳನ್ನು ರೂಪಿಸಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.

ದಸಂಸ ಜಿಲ್ಲಾ ಸಂಚಾಲಕ ಬೆಟ್ಟಯ್ಯಕೋಟೆ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಂಚಾಲಕ ಶಂಭುಲಿಂಗಸ್ವಾಮಿ, ಹೆಗ್ಗನೂರು ನಿಂಗರಾಜು, ನಂಜನಗೂಡು ಉಪವಿಭಾಗೀಯ ಸಂಚಾಲಕ ಮಂಜು ಶಂಕರಪುರ, ಕೃಷ್ಣಮೂರ್ತಿ ಬಸವಟ್ಟಿಗೆ, ಹುಣಸೂರು ಉಪವಿಭಾಗೀಯ ಸಂಚಾಲಕ ಗೌರಿಪುರ ವೆಂಕಟೇಶ್, ಹೆಚ್.ಡಿ.ಕೋಟೆ ತಾಲೂಕು ಸಂಚಾಲಕ ಮುತ್ತು ಉಯ್ಯಂಬಳ್ಳಿ, ಸರಗೂರು ತಾಲೂಕು ಸಂಚಾಲಕ ಶಿವಶಂಕರ್, ತಿ.ನರಸೀಪುರ ತಾಲೂಕು ಸಂಚಾಲಕ ಕುಕ್ಕೂರುರಾಜು, ಯಾಚೇನಹಳ್ಳಿ ಸೋಮಶೇಖರ್, ಮೈಸೂರು ತಾಲೂಕು ಸಂಚಾಲಕ ಕಲ್ಲಹಳ್ಳಿ ಕುಮಾರ್, ಕುಪ್ಪೆಗಾಲ ಸೋಮಣ್ಣ ನಂಜನಗೂಡು ತಾಲೂಕು ಸಂಚಾಲಕ ಗಟ್ಟವಾಡಿ ಮಹೇಶ್, ಕೆ.ಆರ್.ನಗರ ತಾಲೂಕು ಸಂಚಾಲಕ ನಂಜಪ್ಪ ಹೊಸಕೋಟೆ ಚೆಲುವರಾಜು, ಹುಣಸೂರು ತಾಲೂಕು ಸಂಚಾಲಕ ಅತ್ತಿಕುಪ್ಪೆ ರಾಮಕೃಷ್ಣ, ಶಿವರಾಜು, ಟೌನ್ ಸಂಚಾಲಕ ಚಿಕ್ಕಹುಣಸೂರು ರಾಜು, ಜಿಲ್ಲಾ ಸಮಿತಿ ಸದಸ್ಯರಾದ ಹೆಮ್ಮರಗಳ್ಳಿ ಸಿದ್ದರಾಜು, ಕಿರಗಸೂರು ರಜನಿ, ಹಿರಿಯೂರು ಸೋಮಣ್ಣ, ತುರುಗನೂರು ಲಕ್ಷ್ಮಣ್, ಕರೋಹಟ್ಟಿ ನಾಗೇಶ್, ಯಾಚೇನಹಳ್ಳಿ ಮಹಾದೇವ, ಶಿವರಾಂ, ಹುಣಸಗಳ್ಳಿ ಜವರಪ್ಪ, ಬನ್ನಹಳ್ಳಿ ಹುಂಡಿ ಉಮೇಶ, ನಾಗರಾಜ್ ಮೂರ್ತಿ, ಯಡದೊರೆ ನಾರಾಯಣ್, ರಂಗಸಮುದ್ರ ನಂಜುಂಡ, ಕುರುಬೂರು ಮಹೇಶ್, ಯಾಕನೂರು ರಾಚಪ್ಪ, ಅರ್ಜುನ್ ಆದಿಬೆಟ್ಟಹಳ್ಳಿ, ಹೆಮ್ಮಿಗೆ ಚಂದ್ರು, ವಾಜವಿನಹಳ್ಳಿ ಲಿಂಗರಾಜು, ಬೆಳಲೆಮಹೇಶ್, ಗಜೇಂದ್ರ ಗೋಣಳ್ಳಿ, ಸರಗೂರು ಮರಿಸ್ವಾಮಿ, ರವಿ ಆಕಳ, ಮಲಾರ ಮಹೇಶ್, ರತ್ನಯ್ಯ, ಅತ್ತಿಕುಪ್ಪೆ ಸಿದ್ದೇಶ್, ಕೆ.ಆರ್.ನಗರ ರುಕ್ಮಾಂಗದ, ಶಾಂತಕುಮಾರ್ ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಜಿಗರ್ ಥಂಡ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಘೋಸ್ಟ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಯಾರಿಯನ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಗರಡಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲಿಯೋ (ಕ)	2 ಪ್ರದರ್ಶನಗಳು
ರಾಜಕಮಲ್	
ರೈಡ್ (ತ)	4 ಪ್ರದರ್ಶನಗಳು
ಸಂಗಂ	
ಟಗರುಪಲ್ಯ(ಕ)	4 ಪ್ರದರ್ಶನಗಳು
ಲಿಡೋ	
ಗರಡಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಟೈಗರ್ ನಾಗೇಶ್ವರರಾವ್ (ತ)	4 ಪ್ರದರ್ಶನಗಳು
ಪ್ರಭಾ	
ಜಪಾನ್(ತ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	**ಗರಡಿ (ಕ):** ಬೆ.10.10ಕ್ಕೆ, ಮ.1.10ಕ್ಕೆ, ರಾ.7ಕ್ಕೆ, ರಾ.9.55ಕ್ಕೆ, **ಟಗರುಪಲ್ಯ (ಕ):** ಸಂ.4.15ಕ್ಕೆ.
ಸ್ಕ್ರೀನ್ 2	**ಘೋಸ್ಟ್ (ಕ):** ಬೆ.10.10ಕ್ಕೆ, **ಜಿಗರ್‌ಥಂಡ ಡಬಲ್ x (ತ):** ಮ.1ಕ್ಕೆ, ಸಂ.6.50ಕ್ಕೆ, **ರೈಡ್ (ತ):** ಸಂ.4.25ಕ್ಕೆ, **ಟಗರುಪಲ್ಯ (ಕ):** ರಾ.10.05ಕ್ಕೆ.
ಸ್ಕ್ರೀನ್ 3	**ಜಪಾನ್ (ತ):** ಬೆ.10.15ಕ್ಕೆ, ಸಂ.4ಕ್ಕೆ, ರಾ.7ಕ್ಕೆ, **ಟಗರುಪಲ್ಯ (ಕ):** ಮ.1.20ಕ್ಕೆ, **ಬಂದ್ರ (ಮ):** ರಾ.10ಕ್ಕೆ.
ಸ್ಕ್ರೀನ್ 4	**ದಿ ಮಾರ್ವೆಲ್ಸ್ (3ಡಿ)(ಇಂ):** ಬೆ.8.30ಕ್ಕೆ, ಬೆ.10.45ಕ್ಕೆ, ಮ.1.05ಕ್ಕೆ, ಮ.3.25ಕ್ಕೆ, ಸಂ.5.40ಕ್ಕೆ, ರಾ.7.55ಕ್ಕೆ, ರಾ.10.15ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE — ದೂ : 2533444 / 2433456

ಸ್ಕ್ರೀನ್ 1	**ದಿ ಮಾರ್ವೆಲ್ಸ್ (3ಡಿ)(ಇಂ):** ಬೆ.9.30ಕ್ಕೆ, ಮ.12ಕ್ಕೆ, ಮ.2.30ಕ್ಕೆ, ಸಂ.5ಕ್ಕೆ, ರಾ.7.30ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	**ಗರಡಿ (ಕ):** ರಾ.10.15ಕ್ಕೆ, ಮ.1.20ಕ್ಕೆ, ರಾ.7.15ಕ್ಕೆ, **ಟಗರುಪಲ್ಯ (ಕ):** ಮ.12.55ಕ್ಕೆ, **ಜಿಗರ್‌ಥಂಡ ಡಬಲ್ x (ತ):** ರಾ.10.20ಕ್ಕೆ.
ಸ್ಕ್ರೀನ್ 3	**ಜಿಗರ್‌ಥಂಡ ಡಬಲ್ x (ತ):** ಬೆ.10.35ಕ್ಕೆ, ಮ.2.10ಕ್ಕೆ, ಸಂ.5.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 4	**ಜಪಾನ್ (ತ):** ಬೆ.9.30ಕ್ಕೆ, ಮ.12.45ಕ್ಕೆ, ಸಂ.4ಕ್ಕೆ, ರಾ.7.15ಕ್ಕೆ, ರಾ.10.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	**ಸೈಕಲ್ ಸವಾರಿ (ಕ):** ಬೆ.10.30ಕ್ಕೆ, **ಕ್ರೇಜಿ ಕೀರ್ತಿ (ಕ):** ಮ.1.30ಕ್ಕೆ, **ಗರುಡ ಪುರಾಣ (ಕ):** ಸಂ.4ಕ್ಕೆ, **ಬಿಸ್ಕತ್ತುಕಟ್ಟೆ (ಕ):** ಸಂ.6.45ಕ್ಕೆ, **ಲಿಯೋ (ತ):** ರಾ.9.15ಕ್ಕೆ.
ಸ್ಕ್ರೀನ್ 2	**ಟಗರುಪಲ್ಯ (ಕ):** ಬೆ.10.45ಕ್ಕೆ, ಮ.1.40ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ
ಸ್ಕ್ರೀನ್ 3	**ಲಿಯೋ (ತ):** ಮ.1.30ಕ್ಕೆ, ರಾ.7ಕ್ಕೆ
ಸ್ಕ್ರೀನ್ 4	**ಘೋಸ್ಟ್ (ಕ):** ಬೆ.10.30ಕ್ಕೆ, ಸಂ.4.10ಕ್ಕೆ, ಸಂ.6.45ಕ್ಕೆ, **ಲಿಯೋ (ಕ):** ಮ.1.05ಕ್ಕೆ, **ಟಗರುಪಲ್ಯ (ಕ):** ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಘೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, **12th ಫೇಲ್ (ಹಿಂ):** ಮ.3.50ಕ್ಕೆ, **ಭಗವಂತ್ ಕೇಸರಿ (ತೆ):** ರಾ.7.05ಕ್ಕೆ, **ಗಣಪತ್: ಎ ಹೀರೋ (ಹಿಂ):** ಸಂ.4.10ಕ್ಕೆ, **ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ):** ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, **ಲಿಯೋ (ಕ):** ಮ.12.45ಕ್ಕೆ, **ಲಿಯೋ (ತ):** ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, **ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ):** ರಾ.10ಕ್ಕೆ, **ಟಗರುಪಲ್ಯ (ಕ):** ಮ.1ಕ್ಕೆ, ರಾ.7ಕ್ಕೆ, **ತೇಜಸ್ (ಹಿಂ):** ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.



ಹುಣಸೂರು ರೋಟರಿ ಭವನದಲ್ಲಿ ತಾಲೂಕಿನ ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಶಿಕ್ಷಣ ಇಲಾಖೆ ಹಾಗೂ ರೋಟರಿ ಕ್ಲಬ್ ವತಿಯಿಂದ ಆಯೋಜಿಸಿದ್ದ ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆ ಹಾಗೂ ಕಾನೂನು ಅರಿವು–ನೆರವು ಕಾರ್ಯಕ್ರಮವನ್ನು ಪ್ರಧಾನ ಸಿವಿಲ್ ನ್ಯಾಯಾಧೀಶ ಬಿ.ವೈ.ಮನು ಪಟೇಲ್ ಉದ್ಘಾಟಿಸಿದರು. ವಕೀಲ ಬಿ.ಕಿರಣ್, ರೋಟರಿ ಸಂಸ್ಥೆ ಅಧ್ಯಕ್ಷ ಚೆನ್ನಕೇಶವ, ಕಾರ್ಯದರ್ಶಿ ಪ್ರಸನ್ನ, ರೋಟರಿ ಇನ್ನರ್ ವ್ಹೀಲ್ ಅಧ್ಯಕ್ಷೆ ಸ್ಮಿತಾ, ಕಾರ್ಯದರ್ಶಿ ಜಯಲಕ್ಷ್ಮಿ, ಹುಣಸೂರು ವಕೀಲರ ಸಂಘದ ಅಧ್ಯಕ್ಷ ಯೋಗಣ್ಣೆಗೌಡ, ಉಪಾಧ್ಯಕ್ಷ ಬಿ.ಸಿ.ಸುಂದರೇಶ್, ಕಾರ್ಯದರ್ಶಿ ಟಿ.ಶ್ರೀನಿವಾಸ್, ಶಿಕ್ಷಣ ಇಲಾಖೆಯ ಕ್ಷೇತ್ರ ಸಮನ್ವಯಾಧಿಕಾರಿ ಕೆ.ಸಂತೋಷ್ ಕುಮಾರ್ ಇದ್ದರು.

ಶಾಂತಬಾಯಿ ನಿಧನ



ಕೆ.ಆರ್.ನಗರ: ಪಟ್ಟಣದ ಕನಕನಗರ ಬಡಾವಣೆಯ ಶಾಂತಬಾಯಿ (83) ಗುರುವಾರ ರಾತ್ರಿ ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಮೃತರ ಸ್ವಗ್ರಾಮ ಹುಣಸೂರು ತಾಲೂಕು ಚಿಕ್ಕಾಗಿಡನಹಳ್ಳಿಯಲ್ಲಿ ಶುಕ್ರವಾರ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಿತು. ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ, ತಂಬಾಕು ಮಂಡಳಿಯ ನಿವೃತ್ತ ನೌಕರ ಕೆ.ಎನ್.ದಿನೇಶ್, ಕೆ.ಆರ್.ನಗರದ ಅಕೇಶ್ವರ ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷ ವೆಂಕಟೇಗೌಡ, ಮಾಜಿ ಅಧ್ಯಕ್ಷ ರಾಮೇಗೌಡ, ಪತ್ರಕರ್ತ ಡಿ.ಮಂಜುನಾಥ್, ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಎಂ.ನಾಗರಾಜು ಅಂತಿಮ ದರ್ಶನ ಪಡೆದರು.

ಸುಂದ್ರಮ್ಮ



ಕೆ.ಆರ್.ನಗರ: ಸಮೀಪದ ಚೌಕಹಳ್ಳಿ ಗ್ರಾಮದ ದಿವಂಗತ ಕೀರ್ತಿಕುಮಾರ್ ಅವರ ಪತ್ನಿ ಸುಂದ್ರಮ್ಮ(75) ಶುಕ್ರವಾರ ನಿಧನರಾದರು. ಮೃತರು ಪುತ್ರ, ನಾಲ್ವರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಶನಿವಾರ) ಬೆಳಗ್ಗೆ 11 ಗಂಟೆಗೆ ಚೌಕಹಳ್ಳಿ ಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿಜಯೇಂದ್ರರಿಗೆ ಗಣ್ಯರ ಶುಭಾಶಯಗಳ ಮಹಾಪೂರ

ಬೆಂಗಳೂರು, ನ.10– ಬಿಜೆಪಿ ನೂತನ ರಾಜ್ಯಾಧ್ಯಕ್ಷರಾಗಿ ಆಯ್ಕೆಯಾಗಿರುವ ಬಿ.ವೈ. ವಿಜಯೇಂದ್ರ ಅವರಿಗೆ ಗಣ್ಯರಿಂದ ಶುಭಾಶಯಗಳ ಮಹಾಪೂರವೇ ಹರಿದುಬಂದಿದೆ. ವಿಜಯೇಂದ್ರ ಅವರ ಆಯ್ಕೆಯನ್ನು ಸ್ವಾಗತಿಸಿರುವ ಬಿಜೆಪಿ ನಿರ್ಗಮಿತ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು, ವಿಜಯೇಂದ್ರ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಯುವ ಮೋರ್ಚಾ ಕಾರ್ಯ ವಿಸ್ತರಣೆ ಮಾಡಿದ ಅವರು ಅತ್ಯುತ್ತಮ ಸಂಘಟಕರು, ರಾಜ್ಯ ಘಟಕದ ಉಪಾಧ್ಯಕ್ಷರಾಗಿ ಅವರು ನಮ್ಮ ಜತೆ ರಾಜ್ಯದಲ್ಲಿ ಪ್ರವಾಸ ಮಾಡಿದ ಅನುಭವ ಇರುವವರು. ಉತ್ತಮ ರೀತಿಯಲ್ಲಿ ಪಕ್ಷವನ್ನು ಸಂಘಟಿಸುವ ವಿಶ್ವಾಸವಿದೆ. ಲೋಕಸಭೆ ಚುನಾವಣೆಯಲ್ಲಿ ಎಲ್ಲಾ 28 ಸ್ಥಾನಗಳನ್ನು ಗೆಲ್ಲಿಸುವುದು ನಮ್ಮ ಗುರಿಯಾಗಿದೆ ಎಂದರು.



ಬಸವರಾಜ ಬೊಮ್ಮಾಯಿ: ರಾಜ್ಯ ಬಿಜೆಪಿಯ ನೂತನ ಅಧ್ಯಕ್ಷರಾಗಿ ನಿಯುಕ್ತಿಗೊಂಡ ಯುವ ನಾಯಕ ವಿಜಯೇಂದ್ರಅವರಿಗೆ ಹಾರ್ದಿಕ ಅಭಿನಂದನೆಗಳು. ನಿಮ್ಮ ಅಧ್ಯಕ್ಷ ಅವಧಿಯಲ್ಲಿ ಪಕ್ಷ ಮತ್ತಷ್ಟು ಸಂಘಟನಾತ್ಮಕವಾಗಿ ಬಲಗೊಂಡು ಇನ್ನಷ್ಟು ಶಕ್ತಿಯುತವಾಗಿ ಹೊರಹೊಮ್ಮಲಿ ಎಂದು ಆಶಿಸುತ್ತೇನೆ.



ಬಿ.ವೈ. ರಾಘವೇಂದ್ರ: ಬಿಜೆಪಿ ರಾಜ್ಯಾಧ್ಯಕ್ಷರಾಗಿ ನೇಮಕವಾಗಿರುವ ವಿಜಯೇಂದ್ರ ಅವರಿಗೆ ಹಾರ್ದಿಕ ಶುಭಾಶಯಗಳು. ಹಿರಿಯರ ಆಶೀರ್ವಾದ ಹಾಗೂ ಕಿರಿಯರ ಬೆಂಬಲದೊಂದಿಗೆ ಪಕ್ಷವನ್ನು ಇನ್ನಷ್ಟು ಬಲಿಷ್ಠಗೊಳಿಸಿ ಮುನ್ನಡೆಸುತ್ತಾರೆ ಮತ್ತು ಯಡಿಯೂರಪ್ಪನವರು, ಅನಂತಕುಮಾರ್ ಮುಂತಾದ ನಾಯಕರುಗಳ ದಾರಿಯಲ್ಲಿ ನಡೆಯುತ್ತಾರೆ ಎಂಬ ಭರವಸೆ ನನಗಿದೆ. ಅವರ ನಾಯಕತ್ವದಲ್ಲಿ ಪಕ್ಷ ಹೊಸ ಚೈತನ್ಯದೊಂದಿಗೆ ಬೆಳೆಯಲಿ, ರಾಜ್ಯವನ್ನು ಆವರಿಸಿಕೊಂಡಿರುವ ಕಾಂಗ್ರೆಸ್ ದುರಾಡಳಿತದ ಕಾರ್ಮೋಡದ ನಡುವೆ ಭರವಸೆಯ ಒಂದು ಹೊಸ ಕಿರಣವಾಗಿ ಹೊರಹೊಮ್ಮಲಿ.



ಎಂ.ಪಿ. ರೇಣುಕಾಚಾರ್ಯ: ರಾಜ್ಯದ ಬಿಜೆಪಿ ಕಾರ್ಯಕರ್ತರು ಸೇರಿದಂತೆ ಬಹಳಷ್ಟು ಜನರಿಗೆ ವಿಜಯೇಂದ್ರ ಆಯ್ಕೆ ಸಂತಸ ತಂದಿದೆ. ದೀಪಾವಳಿ ಸಂದರ್ಭದಲ್ಲೇ ವಿಜಯೇಂದ್ರ ಅವರನ್ನು ಆಯ್ಕೆ ಮಾಡಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ 28 ಸ್ಥಾನಗಳನ್ನು ವಿಜಯೇಂದ್ರ ಗೆಲ್ಲಿಸುತ್ತಾರೆ. ವಿಜಯೇಂದ್ರ ಆಯ್ಕೆಯಿಂದ ಕರ್ನಾಟಕ ಬಿಜೆಪಿಗೆ ಆನೆಬಲ ಬಂದಿದೆ.

'ಯಡಿಯೂರಪ್ಪ ಮಗ' ಎಂಬ ಅರ್ಹತೆಯಲ್ಲಿ ವಿಜಯೇಂದ್ರ ಆಯ್ಕೆ: ಕಾಂಗ್ರೆಸ್ ವ್ಯಂಗ್ಯ

ಬೆಂಗಳೂರು: ರಾಜ್ಯದ ನೂತನ ಬಿಜೆಪಿ ಅಧ್ಯಕ್ಷರಾಗಿ ಯಡಿಯೂರಪ್ಪ ಅವರ ಪುತ್ರ ಬಿ.ವೈ. ವಿಜಯೇಂದ್ರ ಅವರ ಕುರಿತು ಕಾಂಗ್ರೆಸ್ ಪ್ರತಿಕ್ರಿಯಿಸಿದೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಕಾಂಗ್ರೆಸ್, 'ಯಡಿಯೂರಪ್ಪ ಮಗ' ಎಂಬ ಅರ್ಹತೆಯಲ್ಲಿ ಬಿಜೆಪಿಯ ನೂತನ ರಾಜ್ಯಾಧ್ಯಕ್ಷರಾಗಿ ಆಯ್ಕೆಯಾಗಿರುವುದಾಗಿ ಟೀಕಿಸಿದೆ. ಅಲ್ಲದೇ, 'ಯಡಿಯೂರಪ್ಪನವರ ಮಗ'ನಿಗೆ ಅಭಿನಂದನೆಗಳು ಎಂದು ಹೇಳಿದೆ. 'ಬಿಜೆಪಿಯಲ್ಲಿ ಕುಟುಂಬ ರಾಜಕಾರಣ ವಿಲ್ಲ' ಎಂಬ ಸುಳ್ಳನ್ನು ನಂಬಬೇಕು ಎಂದು ರಾಜ್ಯದ ಜನರಲ್ಲಿ ಮನವಿ ಮಾಡುವುದಾಗಿ ಕಾಂಗ್ರೆಸ್ ತಿಳಿಸಿದೆ.

ಇಂದು ಪುಸ್ತಕಗಳ ಬಿಡುಗಡೆ

ಮೈಸೂರು,ನ.10(ಎಸ್‌ಪಿಎನ್)– ಚಿಂತನ ಚಿತ್ತಾರ ವತಿಯಿಂದ ಲೇಖಕ ರಂಗನಾಥ ಕಂಟನಕುಂಟೆ ರಚಿತ ಪ್ರೇಮ ಬಿಕ್ಕು, ಬಾಪು ಬಟ್ಟೆ (ಕವನ ಸಂಕಲನ) ಹಾಗೂ ಓದಿನ ಒಕ್ಕಲು (ವಿಮರ್ಶಾ ಲೇಖನಗಳ ಸಂಕಲನ) ಪುಸ್ತಕಗಳ ಬಿಡುಗಡೆ ಮತ್ತು ಸಂವಾದ ಕಾರ್ಯಕ್ರಮ ರಂಗಾಯಣ ಆವರಣದ ಶ್ರೀರಂಗ ರಂಗ ಮಂದಿರದಲ್ಲಿ ನ.11ರಂದು ಸಂಜೆ 4 ಗಂಟೆಗೆ ನಡೆಯಲಿದೆ. ಈ ಪುಸ್ತಕಗಳನ್ನು ಮಹಾರಾಜ ಕಾಲೇಜಿನ ನಿವೃತ್ತ ಪಾಂಶುಪಾಲೆ, ಸಾಹಿತಿ ಚ.ಸರ್ವಮಂಗಳ ಬಿಡುಗಡೆಗೊಳಿಸಲಿದ್ದಾರೆ.

7ನೇ ವರ್ಷದ ಪುಣ್ಯಸ್ಮರಣೆ



H. ಕರಿಬಸಣ್ಣನವರು

ಹೆಚ್. ಕರಿಬಸವಣ್ಣನವರು (ಚಿಕ್ಕಾಡನಹಳ್ಳಿ) ಮಾಜಿ ಅಧ್ಯಕ್ಷರು, ಕೃಷಿ ಪತ್ತಿನ ಸಹಕಾರ ಸಂಘ, ಮನುಗನಹಳ್ಳಿ ಮಾಜಿ ಅಧ್ಯಕ್ಷರು, ಹಾಲು ಉತ್ಪಾದಕರ ಸಂಘ, ಚಿಕ್ಕಾಡನಹಳ್ಳಿ.

ನಿಮ್ಮ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಕೋರುವ, ನಿಮ್ಮ ಮಗಳು ಹೆಚ್.ಕೆ. ಸುಜಾತ. ಫೋ: 9632145537

ಹಸಿರು ನಮ್ಮ ಉಸಿರು

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರಾದ ಶ್ರೀಮತಿ ಶ್ವೇತ ಬಿನ್ ದಿವಾಕರ್, ವಯಸ್ಸು ಸುಮಾರು 39 ವರ್ಷಗಳು, ನಂ.423, 2ನೇ ಕ್ರಾಸ್, ದೊಡ್ಡ ವಕ್ಕಲಗೇರಿ, ಮಂಡಿಮೊಹಲ್ಲಾ, ಮೈಸೂರು–570001 ಇಲ್ಲಿ ವಾಸವಾಗಿರುವ ಇವರು ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಶ್ರೀಮತಿ ಕೋಮಲ ಎಂ. ಕೋಂ ಲೇಟ್ ಲೋಕೇಶ್ ಪಿ.ಬಿ., ವಯಸ್ಸು ಸುಮಾರು 40 ವರ್ಷಗಳು, ನಂ.1009/982, ದಾಸನಕೊಪ್ಪಲು, ಮರಟಿಕ್ಯಾತನಹಳ್ಳಿ, ಜಯಪುರ ಹೋಬಳಿ, ಮೈಸೂರು–570026 ಇವರಿಂದ ಶುದ್ಧ ಕ್ರಯಕ್ಕೆ ಖರೀದಿಸಲು ಒಪ್ಪಿದ್ದು, ಸದರಿ ಸ್ವತ್ತು ಖರೀದಿ ಸಂಬಂಧವಾಗಿ ಸದರಿ ಸ್ವತ್ತುಗಳಿಗೆ ಸಂಬಂಧಿಸಿದಂತೆ ಇನ್ನಿತರೆ ಯಾರಾದರೂ ವಾರಸುದಾರರು, ಹಕ್ಕು ಪಡೆಯುವವರು ಇದ್ದಲ್ಲಿ ಅದಕ್ಕೆ ಸಂಬಂಧಪಟ್ಟಂತೆ ಅಗತ್ಯ ದಾಖಲಾತಿಗಳೊಂದಿಗೆ, ಈ ಪತ್ರಿಕಾ ಪ್ರಕಟಣೆ ಆದ 7 ದಿನಗಳೊಳಗಾಗಿ ಖುದ್ದಾಗಿಯಾಗಲೀ, ಲಿಖಿತ ತಕರಾರಿನೊಂದಿಗೆ ಕೆಳಕಂಡ ವಕೀಲರ ಕಛೇರಿಗೆ ಭೇಟಿಯಾಗಿ ತಕರಾರು ಸಲ್ಲಿಸಬಹುದಾಗಿರುತ್ತದೆ. ತದನಂತರ ಯಾವುದೇ ತಕರಾರು ಬಾರದೆ ಇದ್ದ ಪಕ್ಷದಲ್ಲಿ, ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ನಮ್ಮ ಕಕ್ಷಿದಾರರುಗಳು ಮೇಲ್ಕಂಡವರುಗಳಿಂದ ಶುದ್ಧಕ್ರಯಕ್ಕೆ ಷೆಡ್ಯೂಲ್‌ನಲ್ಲಿ ನಮೂದಾದ ಸ್ವತ್ತನ್ನು ಖರೀದಿಸುತ್ತಾರೆಂದು ಈ ಮೂಲಕ ಸಾರ್ವಜನಿಕ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮನೆ ನಂ.1009/982, ಯೂನಿಕ್ ನಂ. 152200402734101362, ದಾಸನಕೊಪ್ಪಲು, ಮರಟಿಕ್ಯಾತನಹಳ್ಳಿ, ದಾಖಲೆ ಜಯಪುರ ಹೋಬಳಿ, ಮೈಸೂರು. ಪೂರ್ವ ಪಶ್ಚಿಮ – 6.7056 ಮೀಟರ್, ಉತ್ತರ ದಕ್ಷಿಣ – 14.9352 ಮೀಟರ್, ಒಟ್ಟು 100.15 ಚದರ ಮೀಟರ್ ಗಳುಳ್ಳ ಪೂರ್ತಿ ನಿವೇಶನ ಮತ್ತು ಇದರಲ್ಲಿರುವ 66.89 ಚದರ ಮೀಟರ್ ಆರ್. ಸಿ.ಸಿ. ಕೆಂಪು ಗಾರೆ ನೆಲದಿಂದ ಕೂಡಿದ ವಾಸದ ಮನೆಯಾಗಿರುತ್ತದೆ. ಚಕ್ಕುಬಂಧಿ: ಪೂರ್ವಕ್ಕೆ: ವೆಂಕಟೇಶ್‌ರವರ ಮನೆ, ಪಶ್ಚಿಮಕ್ಕೆ: ನಿಂಗಮ್ಮರವರ ಸ್ವತ್ತು, ಉತ್ತರಕ್ಕೆ: ಮೊಗಣ್ಣರವರ ಮನೆ, ದಕ್ಷಿಣಕ್ಕೆ: 6.00 ಮೀಟರ್ ರಸ್ತೆ.

ಸಹಿ/– ಲೋಹಿತ್ ಎನ್. BA.L, LL.B, ವಕೀಲರು, ಶ್ರೀ ಸಾಯಿ ಲಾ ಅಸೋಷಿಯೇಟ್ಸ್, ನಂ. 2967/2, 14ನೇ ಮೇನ್, 2ನೇ ಅಡ್ಡ ರಸ್ತೆ, ಸರಸ್ವತಿಪುರಂ, ಮೈಸೂರು–570009. ಮೊಬೈಲ್: 9611113323

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಅರಮನೆ ಮಂಡಳಿ, ಮೈಸೂರು.

ಟೆಂಡರ್ ಅಧಿಸೂಚನೆ ಸಂಖ್ಯೆ:ಕಾನಿಅ/ಮೈಅಮಂ/ತೋವಿ/ಟೆಂಡರ್ ಸಂಖ್ಯೆ/08/2023–24 ದಿ:08.11.2023

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪ ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ರವರು ಮೈಸೂರು ಅರಮನೆ ಆವರಣದ ತೋಟಗಾರಿಕೆ ವಿಭಾಗಕ್ಕೆ ಸಂಬಂಧಿಸಿದಂತೆ ಒಟ್ಟು ಮೊತ್ತ ರೂ.5.00ಲಕ್ಷಗಳ 02 ಸಂಖ್ಯೆ ಸಾಮಾಗ್ರಿ ಸರಬರಾಜು ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ ನೊಂದಾಯಿತ ಅರ್ಹ ಗುತ್ತಿಗೆದಾರರು/ ಏಜೆನ್ಸಿ/ ಸಂಸ್ಥೆಗಳಿಂದ ಮೊಹರಾದ ಲಕೋಟೆಯಲ್ಲಿ ಶೇಕಡವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. 1) ಖಾಲಿ ಟೆಂಡರ್ ಫಾರಂ ಕೋರಿ ಅರ್ಜಿ ಸಲ್ಲಿಸಲು ಕೊನೆಯ ದಿ: 16.11.2023 ಸಂಜೆ 4.00 ಗಂಟೆಯವರೆಗೆ. 2) ಖಾಲಿ ಟೆಂಡರ್ ಫಾರಂಗಳನ್ನು ಗುತ್ತಿಗೆದಾರರಿಗೆ ನೀಡುವ ದಿ: 17.11.2023 ಸಂಜೆ 5.00 ಗಂಟೆಯವರೆಗೆ. 3) ಭರ್ತಿ ಮಾಡಿದ ಟೆಂಡರ್ ಫಾರಂ ಸ್ವೀಕರಿಸುವ ದಿ: 18.11.2023 ಸಂಜೆ 4.00 ಗಂಟೆಯವರೆಗೆ. 4) ಟೆಂಡರ್‌ಗಳನ್ನು ತೆರೆಯುವ ದಿ: 20.11.2023ರ ಸಂಜೆ 4.30ಗಂಟೆಗೆ. 5) ಟೆಂಡರ್‌ಗಿಟ್ಟಿರುವ ಗರಿಷ್ಠ ಮೊತ್ತ ರೂ.3.00 ಲಕ್ಷಗಳು ಹಾಗೂ ಕನಿಷ್ಠ ಮೊತ್ತ ರೂ. 2.00ಲಕ್ಷಗಳು, ಟೆಂಡರ್‌ನ ನಿಬಂಧನೆಗಳು, ಷರತ್ತುಗಳು ಹಾಗೂ ಕಾಮಗಾರಿಯ ಹೆಚ್ಚಿನ ವಿವರಗಳಿಗೆ ಕಛೇರಿಯ ಕೆಲಸದ ವೇಳೆಯ ಎಲ್ಲಾ ದಿನಗಳಂದು ಪಡೆಯಬಹುದು ಒಂದು ವೇಳೆ ಮೇಲೆ ನೀಡಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳಾಗಿದ್ದಲ್ಲಿ ಆನಂತರದ ದಿನಗಳನ್ನು ಪರಿಗಣಿಸಲಾಗುವುದು.

ಸಹಿ/– ಉಪ ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು.

DIPR/DDMYS/KSMCA/619/2023-24

ಜಿಲ್ಲಾ ಪಂಚಾಯತ್ ಮೈಸೂರು — **ಅಕ್ಷರ ದಾಸೋಹ ಕಾರ್ಯಕ್ರಮ**

Off. (0821) 2526325 E-Mail : eomdmmysore@gmail.com

ಸಂಖ್ಯೆ: ಅದಾಯೋ/ಸಾ.ಗು.ನೇ.ಟೆಂ/13/2023–24 /02 ನೇ ಕರೆ ದಿನಾಂಕ: 08.11.2023

ಟೆಂಡರ್ ಅಧಿಸೂಚನೆ

2023–24ನೇ ಶೈಕ್ಷಣಿಕ ವರ್ಷಕ್ಕೆ ಅಕ್ಷರ ದಾಸೋಹ ಕಾರ್ಯಕ್ರಮದಡಿಯಲ್ಲಿ ಶಾಲಾ ಅಡುಗೆ ಕೇಂದ್ರಗಳಿಗೆ ಆಹಾರ ಧಾನ್ಯ ಸಾಗಾಣಿಕೆ ಮಾಡುವ ಕಾರಣದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000ದ ನಿಯಮ 17ರ ಉಪನಿಯಮ 2ರ ಅನುಸಾರ ಅಲ್ಪಾವಧಿ ಟೆಂಡರ್‌ಗಳನ್ನು ಕರೆಯಲಾಗಿದೆ. ತಾಲ್ಲೂಕು ಕೆ.ಎಫ್.ಸಿ.ಎಸ್.ಸಿ ಗೋದಾಮುಗಳಿಂದ ತಾಲ್ಲೂಕಿನ ಶಾಲಾ ಅಡುಗೆ ಕೇಂದ್ರಗಳಿಗೆ ಆಹಾರ ಧಾನ್ಯ ಸಾಗಾಣಿಕೆ ಮಾಡಲು ತಾಲ್ಲೂಕುವಾರು ಪ್ರತ್ಯೇಕವಾಗಿ ನೊಂದಾಯಿತ ಸಾಗಾಣಿಕೆ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.

I ವೇಳಾಪಟ್ಟಿ:

ಕ್ರ ಸಂ.	ವಿವರ	ದಿನಾಂಕ	ಸಮಯ	ಸ್ಥಳ
1.	ಟೆಂಡರ್ ಪ್ರಕಟಣೆ ನೀಡುವುದು	08.11.2023	–	HTTPS://kppp.karnataka.gov.in ವೆಬ್‌ಸೈಟ್ ನಲ್ಲಿ
2	Pre-Bid Meeting	–	–	
3.	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ	18.11.2023	5.00PM	HTTPS://kppp.karnataka.gov.in ವೆಬ್‌ಸೈಟ್ ನಲ್ಲಿ
4.	ಟೆಂಡರ್ ತೆರೆಯುವುದು a) Technical Bid ತೆರೆಯುವುದು	20.11.2023	10.00 AM	ಜಿಲ್ಲಾ ಪಂಚಾಯತ್, ಮೈಸೂರು.
	b) Financial Bid ತೆರೆಯುವುದು	21.11.2023	11.00 AM	ಜಿಲ್ಲಾ ಪಂಚಾಯತ್, ಮೈಸೂರು.

ಹೆಚ್ಚಿನ ಮಾಹಿತಿಗಾಗಿ Https://kppp.karnataka.gov.in ಈ ವೆಬ್‌ಸೈಟ್‌ನಲ್ಲಿ ಸಂಪರ್ಕಿಸಬಹುದು. ಪೂರ್ಣ ವಿವರಗಳು ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ದೊರೆಯುತ್ತದೆ.

ಸಹಿ/– ಶಿಕ್ಷಣಾಧಿಕಾರಿ, ಅಕ್ಷರ ದಾಸೋಹ ಕಾರ್ಯಕ್ರಮ, ಜಿಲ್ಲಾ ಪಂಚಾಯತ್, ಮೈಸೂರು

DIPR/DDMYS/KSMCA/614/2023-24